ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

45

ಏಪ್ರಿಲ್ 11 ಶುಕ್ರವಾರ 2025

ಸಂಪುಟ: 45 | ಸಂಚಿಕೆ: 351 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಬಿಜೆಪಿ ಆಡಳಿತಾವಧಿಗಿಂತಲೂ ಈಗ ಕಾಂಗ್ರೆಸ್‌ನಲ್ಲಿ

ಅಧಿಕ ಕಮಿಷನ್ ದಂಧೆ

• ಸಚಿವ ಜಾರಕಿಹೊಳಿ ಸಂಬಂಧಿಕರು; ಸಚಿವ ಬೋಸರಾಜ್ ಮಗ ಕಮಿಷನ್ ಪಡೆದು ಬಾಕಿ ಹಣ ಬಿಡುಗಡೆ ಮಾಡಿಸ್ತಾರೆ! • ಗುತ್ತಿಗೆದಾರರ ಸಂಘದ ಅಧ್ಯಕ್ಷ ಮಂಜುನಾಥ್ ನೇರಾನೇರ ಆರೋಪ

ಬೆಂಗಳೂರು, ಏ.10(ಕೆಎಂಶಿ)–ಮುಖ್ಯಮಂತ್ರಿ ಸಿದ್ದರಾಮಯ್ಯ ಸಂಪುಟದ ಸಚಿವರ ಮಕ್ಕಳು ಮತ್ತು ಸಂಬಂಧಿಕರೇ ಕಮಿಷನ್ ಪಡೆದು ಹಣ ಬಿಡುಗಡೆ ಮಾಡಿಸುತ್ತಿದ್ದಾರೆ ಎಂದು ಗುತ್ತಿಗೆದಾರರ ಸಂಘದ ಅಧ್ಯಕ್ಷ ಮಂಜುನಾಥ್ ಇಂದಿಲ್ಲಿ ನೇರ ಆರೋಪ ಮಾಡಿದ್ದಾರೆ.


ಮಂಜುನಾಥ್

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಸಂಬಂಧಿಕರು, ಸಣ್ಣ ನೀರಾವರಿ ಸಚಿವ ಎನ್.ಎಸ್. ಬೋಸರಾಜ್ ಪುತ್ರ ಗುತ್ತಿಗೆದಾರರ ಬಳಿ ಕಮಿಷನ್ ಪಡೆದು ಹಣ ಬಿಡುಗಡೆ ಮಾಡಿಸುತ್ತಿದ್ದಾರೆಂದು ದೂರಿದರು.

ಬಿಜೆಪಿ ಆಡಳಿತಕ್ಕಿಂತ ಕಾಂಗ್ರೆಸ್‌ನಲ್ಲೇ ಹೆಚ್ಚು ಕಮಿಷನ್ ದಂಧೆ ನಡೆಯುತ್ತಿದ್ದು, ದೊಡ್ಡ ದೊಡ್ಡ ಗುತ್ತಿಗೆದಾರರಿಗೆ ಹಣ ಬಿಡುಗಡೆ ಮಾಡಿ ಸಣ್ಣ ಮತ್ತು ಮಧ್ಯಮ ವರ್ಗದ ಗುತ್ತಿಗೆದಾರರನ್ನು ಬೀದಿಗೆ ತಂದಿದ್ದಾರೆ. ಸಚಿವರುಗಳ ಮಧ್ಯವರ್ತಿಗಳಿಗೆ ಹಣ ನೀಡಿದರೆ ಗುತ್ತಿಗೆದಾರರಿಗೆ ಬಿಲ್ ಪಾವತಿ ಆಗುತ್ತದೆ, ಕಮಿಷನ್ ನೀಡದಿದ್ದರೆ ಇಲ್ಲ. ಕಳೆದ ಮೂರು ವರ್ಷಗಳಿಂದ ಗುತ್ತಿಗೆದಾರರ 37 ಸಾವಿರ ಕೋಟಿ ರೂ. ಬಾಕಿ ಇದೆ. ಸಣ್ಣ ■6ನೇ ಪುಟಕ್ಕೆ



> ನನ್ನ ಮೇಲಿನ ಆರೋಪ ಸಾಬೀತಾದರೆ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡುತ್ತೇನೆ. ಆದರೆ ಯಾರೆಲ್ಲಾ ಕಮಿಷನ್ ಕೊಟ್ಟಿದ್ದೇನೆ ಎಂದು ಹೇಳಿದ್ದಾರೆಯೋ ಅವರು ಸಾಕ್ಷಿ ಸಮೇತ ಸಾಬೀತುಪಡಿಸಬೇಕು.
> –ಸಚಿವ ಬೋಸರಾಜು.




> ನಮ್ಮಲ್ಲಿ ಯಾವುದೇ ಕಾಣದ ಕೈಗಳಿಲ್ಲ. ಯಾರೇ ಆಗಲಿ ಸುಮ್ಮನೆ ಆರೋಪ ಮಾಡುವುದಲ್ಲ. ಅದನ್ನು ಸಾಬೀತು ಮಾಡಬೇಕಾಗುತ್ತದೆ. ಆಗ ಕ್ರಮ ಕೈಗೊಳ್ಳಬಹುದು.
> – ಸಚಿವ ಸತೀಶ್ ಜಾರಕಿಹೊಳಿ.

> ತಮ್ಮ ಮನೆ ಹಾಗೂ ಕಚೇರಿಯಲ್ಲಿ ಬ್ರೋಕರ್ಸ್ ಇದ್ದಾರೆ ಎಂಬ ವಿಚಾರದಲ್ಲಿ ಲೋಕಾಯುಕ್ತ ಇಲ್ಲವೆ, ಸರ್ಕಾರಕ್ಕೆ ದೂರು ನೀಡಲಿ. ಅದರ ಬಗ್ಗೆ ಸೂಕ್ತ ತನಿಖೆ ನಡೆಸಲಾಗುವುದು.
> – ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್.

ಸಾಕ್ಷಿ ಕೊಟ್ಟರೆ ತನಿಖೆ ಮಾಡಿಸುತ್ತೇವೆ

ಬೆಂಗಳೂರು, ಏ.10– ರಾಜ್ಯ ಸರ್ಕಾರದ ಮೇಲೆ ಗುತ್ತಿಗೆದಾರರು ಮಾಡಿರುವ ಕಮಿಷನ್ ಆರೋಪಕ್ಕೆ ಸೂಕ್ತ ದಾಖಲಾತಿ ಕೊಟ್ಟರೆ ತನಿಖೆ ಮಾಡಿಸುವುದಾಗಿ ಕಂದಾಯ ಸಚಿವ ಕೃಷ್ಣಬೈರೇಗೌಡ ಸ್ಪಷ್ಟನೆ ನೀಡಿದ್ದಾರೆ.



ಗುತ್ತಿಗೆದಾರರ ಸಂಘದಿಂದ ಸಚಿವ ಸತೀಶ್ ಜಾರಕಿಹೊಳಿ, ಬೋಸರಾಜು ಮೇಲೆ ಆರೋಪ ಮಾಡಿರುವ ವಿಚಾರ ಹಾಗೂ ಸಿಎಂ, ಡಿಸಿಎಂಗೆ ಪತ್ರ ಬರೆದಿರುವ ವಿಚಾರಕ್ಕೆ ಪ್ರತಿಕ್ರಿಯೆ ನೀಡಿದ ಅವರು, ಗುತ್ತಿಗೆದಾರರು ಏನಾದರೂ ಆರೋಪ ಮಾಡಿದರೆ, ಅದಕ್ಕೆ ಸೂಕ್ತ ದಾಖಲಾತಿ ಕೊಟ್ಟರೆ ತನಿಖೆ ಮಾಡಿಸುತ್ತೇವೆ. ಗುತ್ತಿಗೆದಾರರ ದೂರು ಪರಿಶೀಲನೆ ಮಾಡುತ್ತೇವೆ. ಮಧ್ಯವರ್ತಿಗಳು ಯಾರು ಎಂದು ಅವರು ಮಾಹಿತಿ ಕೊಡಲಿ. ಯಾರ ಕುಟುಂಬದ ಹಸ್ತಕ್ಷೇಪ ಎಂದು ದಾಖಲಾತಿ ಕೊಡಲಿ. ಅವರು ಕೊಟ್ಟರೆ ದೂರು ಪರಿಶೀಲನೆ ಮಾಡುತ್ತೇವೆ ಎಂದು ತಿಳಿಸಿದರು.

ಬಿಜೆಪಿ ಮೇಲೆ 40% ಕಮಿಷನ್ ಆರೋಪದ ನ್ಯಾಯಾಂಗ ತನಿಖೆ ಆಗುತ್ತಿದೆ. ಕೋವಿಡ್‌ನಲ್ಲಿ ಅಕ್ರಮ ಆಗಿರುವ ಬಗ್ಗೆ ಬಿಜೆಪಿ ನಾಯಕರೇ ಹೇಳುತ್ತಿದ್ದಾರೆ. ಇದರ ತನಿಖೆಯೂ ನಡೆಯುತ್ತಿದೆ. ಅದೇ ರೀತಿ ಗುತ್ತಿಗೆದಾರರು ಏನಾದರೂ ಈ ಬಗ್ಗೆ ದೂರು ಕೊಟ್ಟರೆ ತನಿಖೆ ಮಾಡುತ್ತೇವೆ ಎಂದು ಹೇಳಿದರು.

ಅಮೆರಿಕಾದಿಂದ ಗಡಿಪಾರಾದ

ಮುಂಬೈ ದಾಳಿಯ ಮಾಸ್ಟರ್ ಮೈಂಡ್ ತಹವ್ವೂರ್ ರಾಣಾ ಬಂಧಿಸಿದ ಎನ್‌ಐಎ

▸ ವಿಶೇಷ ವಿಮಾನದಲ್ಲಿ ಭಾರತಕ್ಕೆ ಕರೆತಂದ ಎನ್‌ಐಎ
▸ ಪಟಿಯಾಲ ಕೋರ್ಟ್‌ಗೆ ಹಾಜರು; ಎನ್‌ಐಎ ವಶಕ್ಕೆ





ನವದೆಹಲಿ, ಏ.10–ಅಮೆರಿಕಾದಿಂದ ಗಡಿಪಾರು ಮಾಡಲ್ಪಟ್ಟ 2008ರಲ್ಲಿ ಮುಂಬೈನಲ್ಲಿ ನಡೆದಿದ್ದ 26/11 ದಾಳಿಯ ಮಾಸ್ಟರ್‌ಮೈಂಡ್ ತಹವ್ವೂರ್ ರಾಣಾನನ್ನು ವಿಶೇಷ ವಿಮಾನದಲ್ಲಿ ದೆಹಲಿಗೆ ಕರೆತರುತ್ತಿದ್ದಂತೆಯೇ ಎನ್‌ಐಎ ಅಧಿಕಾರಿಗಳು ಆತನನ್ನು ಬಂಧಿಸಿದರು.

ನಂತರ ಬಿಗಿ ಭದ್ರತೆಯೊಂದಿಗೆ ಆತನನ್ನು ಪಟಿಯಾಲ ಹೌಸ್ ನ್ಯಾಯಾಲಯಕ್ಕೆ ಹಾಜರುಪಡಿಸಿದ ಅಧಿಕಾರಿಗಳು ತಮ್ಮ ವಶಕ್ಕೆ ಪಡೆದರು. ಈ ವೇಳೆ ಹಿರಿಯ ವಕೀಲ ದಯಾನ್ ಕೃಷ್ಣನ್ ಮತ್ತು ಎನ್‌ಐಎ ಪರ ವಿಶೇಷ ಸಾರ್ವಜನಿಕ ಅಭಿಯೋಜಕ ನರೇಂದರ್ ಮಾನ್ ಅವರು ನ್ಯಾಯಾಲಯದಲ್ಲಿ ಹಾಜರಿದ್ದು ಸರ್ಕಾರದ ಪರ ವಾದ ಮಂಡಿಸಿದರು. ನಂತರ ರಾಣಾನನ್ನು ತಮ್ಮ ವಶಕ್ಕೆ ಪಡೆದ ಅಧಿಕಾರಿಗಳು ದೆಹಲಿಯ ಎನ್‌ಐಎ ಪ್ರಧಾನ ಕಚೇರಿಯಲ್ಲಿ ರಾಣಾನನ್ನು ವಿಚಾರಣೆಗೆ ಒಳಪಡಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಎನ್‌ಐಎ ಪ್ರಧಾನ ಕಚೇರಿಗೆ ವಿಶೇಷ ಭದ್ರತೆ ಕಲ್ಪಿಸಲಾಗಿದೆ.

64 ವರ್ಷ ವಯಸ್ಸಿನ ತಹವ್ವೂರ್ ರಾಣಾನನ್ನು ಎನ್‌ಐಎ ಮತ್ತು ರಾ ಅಧಿಕಾರಿಗಳು ನಿನ್ನೆ ಅಮೆರಿಕದ ಲಾಸ್ ಏಂಜಲೀಸ್‌ನಲ್ಲಿ ಅಮೆರಿಕಾ ಅಧಿಕಾರಿಗಳಿಂದ ವಶಕ್ಕೆ ಪಡೆದು ವಿಶೇಷ ವಿಮಾನದಲ್ಲಿ ದೆಹಲಿಗೆ ಕರೆತಂದರು. ಇಂದು ಸಂಜೆ ವಿಮಾನ ದೆಹಲಿಯ ಪಾಲಂ ವಿಮಾನ ನಿಲ್ದಾಣಕ್ಕೆ ಬರುತ್ತಿದ್ದಂತೆಯೇ ರಾಣಾನನ್ನು ಬಂಧಿಸಲಾಯಿತು.

ಉಗ್ರನ ಮೇಲೆ ಕ್ರಿಮಿನಲ್ ಪಿತೂರಿ, ಭಾರತ ಸರ್ಕಾರದ ವಿರುದ್ಧ ಯುದ್ಧ ಸಾರುವುದು, ಕೊಲೆ ಮತ್ತು ನಕಲಿ ದಾಖಲೆ ಸೃಷ್ಟಿ, ಕಾನೂನು ಬಾಹಿರ ಚಟುವಟಿಕೆಗಳ (ತಡೆಗಟ್ಟುವಿಕೆ) ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ.

2008ರ ನ.11ರಂದು ಮುಂಬೈನಲ್ಲಿ ನಡೆದ ಭಯೋತ್ಪಾದಕ ದಾಳಿ ನಡೆಸಿದ ನಂತರ ರಾಣಾನನ್ನು ಅಮೆರಿಕಾ ಪೊಲೀಸರು 2009ರಲ್ಲಿ ಬಂಧಿಸಿದ್ದರು. ಅಮೆರಿಕಾದಲ್ಲೂ ಈತನ ವಿರುದ್ಧ ಕೆಲವು ಪ್ರಕರಣಗಳು ಇದ್ದ ಕಾರಣ ಅಲ್ಲಿನ ಜೈಲಿನಲ್ಲಿ ಇಡಲಾಗಿತ್ತು. ಶಿಕ್ಷೆ ಮುಗಿದ ನಂತರ ಕ್ಯಾಲಿಫೋರ್ನಿಯಾದ ಜಿಲ್ಲಾ ನ್ಯಾಯಾಲಯವು 2023ರ ಮೇ 16ರಂದು ತಹವ್ವೂರ್ ರಾಣಾನನ್ನು ಭಾರತಕ್ಕೆ ಹಸ್ತಾಂತರಿಸಲು ಆದೇಶ ಹೊರಡಿಸಿತ್ತು. ಆದರೆ, ರಾಣಾ ಈ ತೀರ್ಪನ್ನು ತಡೆಹಿಡಿಯುವಂತೆ ಅನೇಕ ಮೊಕದ್ದಮೆಗಳನ್ನು ದಾಖಲಿಸಿದ್ದ. ಈ ವೇಳೆ ■6ನೇ ಪುಟಕ್ಕೆ

ಏ.24ರಂದು ಮಲೆ ಮಹದೇಶ್ವರ ಬೆಟ್ಟದಲ್ಲಿ ಸಚಿವ ಸಂಪುಟ ಸಭೆ

ಚಾಮರಾಜನಗರ, ಏ.10– ಎರಡು ಬಾರಿ ಮುಂದೂಡಿಕೆಯಾಗಿದ್ದ ಮಲೆ ಮಹದೇಶ್ವರ ಬೆಟ್ಟದಲ್ಲಿ ನಡೆಯಬೇಕಿದ್ದ ಸಚಿವ ಸಂಪುಟ ಸಭೆಯನ್ನು ಈಗ ಏಪ್ರಿಲ್ 24ಕ್ಕೆ ನಿಗದಿಪಡಿಸಲಾಗಿದೆ.

ಹಳೆಯ ಮೈಸೂರು ಪ್ರದೇಶಕ್ಕೆ ಹೆಚ್ಚಿನ ಗಮನ ಸೆಳೆಯುವ ನಿರೀಕ್ಷೆಯಿದ್ದ ಈ ಸಚಿವ ಸಂಪುಟ ಸಭೆಯನ್ನು ಆರಂಭದಲ್ಲಿ ಫೆಬ್ರವರಿ 15ರಂದು ನಡೆಸಲು ಯೋಜಿಸಲಾಗಿತ್ತು. ನಂತರ ಫೆಬ್ರವರಿ 17ಕ್ಕೆ ಮುಂದೂಡಲಾಯಿತು. ನಂತರ ವಿವಿಧ ಕಾರಣಗಳಿಗಾಗಿ ಮತ್ತೆ ಮುಂದೂಡಲಾಗಿತ್ತು. ■6ನೇ ಪುಟಕ್ಕೆ

ಇಂದು ಸಂಪುಟ ಸಭೆಯಲ್ಲಿ ಜಾತಿ ಗಣತಿ ಮಂಡನೆ

• ಅಂಕಿ–ಅಂಶಗಳು ಬಹಿರಂಗವಾಗುವುದೋ ಇಲ್ಲ ಬರೀ ವಿಷಯ ಪ್ರಸ್ತಾಪವಾಗುವುದೋ ತೀವ್ರ ಕುತೂಹಲ • ಏನೇ ಮಾಡಿದರೂ ರಾಜಕೀಯ ಸ್ವರೂಪ ಪಡೆಯುವುದಂತೂ ಖಚಿತ

ಬೆಂಗಳೂರು, ಏ.10(ಕೆಎಂಶಿ)– ರಾಜಕೀಯ ವಲಯದಲ್ಲಿ ತೀವ್ರ ಕುತೂಹಲ ಮೂಡಿಸಿರುವ ಸಾಮಾಜಿಕ–ಶೈಕ್ಷಣಿಕ ಸಮೀಕ್ಷೆ 2015ರ ದತ್ತಾಂಶಗಳ ಅಧ್ಯಯನ ವರದಿ–2024 (ಜಾತಿ ಗಣತಿ) ಶುಕ್ರವಾರ ನಡೆಯಲಿರುವ ಸಂಪುಟ ಸಭೆಯಲ್ಲಿ ಮಂಡನೆಯಾಗಲಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಮೊದಲ ಅಧಿಕಾರಾವಧಿ ವೇಳೆ ನಡೆಸಿದ ಸಮೀಕ್ಷೆಯ ವರದಿ(ಜಾತಿ ಗಣತಿ)ಯನ್ನು ಸಾರ್ವಜನಿಕಗೊಳಿಸುವ ಸಮಯ ಬಂದಿದೆ. ಸಿದ್ದರಾಮಯ್ಯ ಅವರಿಗೆ ವರದಿ ಅನುಷ್ಠಾನಗೊಳ್ಳುವುದೋ, ಇಲ್ಲವೋ ತಿಳಿಯದು. ಆದರೆ, ಅಂಕಿ–ಅಂಶಗಳು ಬಹಿರಂಗವಾಗಬೇಕೆಂಬುದು ಅವರ ಇಚ್ಛೆ. ಆದರೆ, ನಾಳೆ ನಡೆಯುವ ಸಂಪುಟ ಸಭೆಯಲ್ಲಿ ವಿಷಯ ಪ್ರಸ್ತಾಪವಾಗಿ ದಾಖಲೆಗಳನ್ನು ಬಹಿರಂಗ ಮಾಡದೆ ಮುಂದೂಡುವ ಬಗ್ಗೆಯೂ ಚರ್ಚೆಗಳು ನಡೆದಿವೆ. ವರದಿ ಮಂಡನೆಗೆ ಸಿದ್ದರಾಮಯ್ಯ, ರಾಹುಲ್‌ಗಾಂಧಿ ಅನುಮತಿ ಪಡೆದುಕೊಂಡಿದ್ದಾರೆ. ಆದರೆ, ಸ್ಥಳೀಯವಾಗಿ ಲಿಂಗಾಯತ, ಒಕ್ಕಲಿಗ ಹಾಗೂ ಮುಂದುವರೆದ ಸಮಾಜದ ಸಚಿವರುಗಳೇ ಬಹಿರಂಗವಾಗಿ ವಿರೋಧಿಸಿದ್ದಾರೆ.


ಸಿದ್ದರಾಮಯ್ಯ

ಸಮೀಕ್ಷಾ ವರದಿ ಅಂಕಿ–ಅಂಶಗಳು ಅಧಿಕೃತವಾಗಿ ಬಹಿರಂಗವಾಗುವ ಮುನ್ನವೇ ಈ ಸಮುದಾಯಗಳು ಸಾರ್ವಜನಿಕವಾಗಿ ವಿರೋಧ ವ್ಯಕ್ತಪಡಿಸಿವೆ. ಇಷ್ಟರ ನಡುವೆಯೂ ಮುಖ್ಯಮಂತ್ರಿ ಅವರು, ಎರಡನೇ ಬಾರಿಗೆ ವಿಷಯವನ್ನು ಸಂಪುಟದ ಮುಂದೆ ತರುತ್ತಿದ್ದಾರೆ. ಈ ಬಾರಿಯೂ ಮುಂದೂಡಲ್ಪಡುವುದೋ ■6ನೇ ಪುಟಕ್ಕೆ

ರಾಮನವಮಿ ಬಂತೆಂದರೆ ಮೈಸೂರಿನ ಪ್ರಖ್ಯಾತ ಕಲಾಪೋಷಕರಾದ ಕೆ. ಶ್ರೀಕಂಠಯ್ಯ ನೆನಪಾಗುತ್ತಾರೆ...!

▸ ಪುಟ–4


ಅಕ್ರಮವಾಗಿ ಸಾಗಿಸುತ್ತಿದ್ದ 10 ಕೋಟಿ ಮೌಲ್ಯದ ತಿಮಿಂಗಲ ವಾಂತಿ ಜಪ್ತಿ; 10 ಮಂದಿ ಬಂಧನ

• ಆರೋಪಿಗಳಿಂದ ಮಾಲು, ಎರಡು ಕಾರು, ಹಣ ಎಣಿಸುವ ಯಂತ್ರ ವಶಕ್ಕೆ
• ಕೇರಳದಿಂದ ಸಾಗಾಟ; ಬೆಂಗಳೂರು, ಆಂಧ್ರದಲ್ಲಿ ಮಾರಾಟ ಮಾಡುವ ಸಂಚು


ವಿರಾಜಪೇಟೆ ಪೊಲೀಸರು ತಿಮಿಂಗಲ ವಾಂತಿ ಸಾಗಿಸುತ್ತಿದ್ದವರನ್ನು ಮಾಲು ಸಮೇತ ಬಂಧಿಸಿರುವುದು.

ಮಡಿಕೇರಿ, ಏ.10– ಕೇರಳ ರಾಜ್ಯದಿಂದ ಅಕ್ರಮವಾಗಿ 10 ಕೋಟಿ ರೂ. ಮೌಲ್ಯದ 10 ಕೆ.ಜಿ 390 ಗ್ರಾಂ ತಿಮಿಂಗಲ ವಾಂತಿ (ಅಂಬರ್ಗ್ರೀಸ್) ಯನ್ನು ಸಾಗಿಸುತ್ತಿದ್ದ 10 ಮಂದಿ ಆರೋಪಿಗಳನ್ನು ಬಂಧಿಸುವಲ್ಲಿ ವಿರಾಜಪೇಟೆ ನಗರ ಪೊಲೀಸರು ಯಶಸ್ವಿಯಾಗಿದ್ದಾರೆ.

ಕೇರಳದ ತಿರುವನಂತಪುರಂ ನಿವಾಸಿ ಶಂಶುದ್ದೀನ್.ಎಸ್(45), ಎಂ.ನವಾಜ್(54), ಕಣ್ಣೂರು ಜಿಲ್ಲೆಯ ವಿ.ಕೆ.ಲತೀಶ್(53), ರಿಜೇಶ್.ವಿ(40), ಪ್ರಶಾಂತ್.ಟಿ (52), ಶಿವಮೊಗ್ಗ ಜಿಲ್ಲೆ ಭದ್ರಾವತಿ ನಿವಾಸಿ ರಾಘವೇಂದ್ರ ಎ.ವಿ(48), ಕಾಸರಗೋಡುವಿನ ಬಾಲಚಂದ್ರ ನಾಯಕ್(55), ಕ್ಯಾಲಿಕಟ್‌ನ ಸಾಜು ಥಾಮೋಸ್ (58), ಕಣ್ಣೂರು ಜಿಲ್ಲೆಯ ಜೋಬಿಸ್.ಕೆ.ಕೆ. (33), ಜಿಜೇಸ್.ಎಂ.(40) ಬಂಧಿತ ಆರೋಪಿಗಳು. ಇವರ ವಶದಲ್ಲಿದ್ದ 10 ಕೋಟಿ ಮೌಲ್ಯದ 10 ಕೆ.ಜಿ 390 ಗ್ರಾಂ ತಿಮಿಂಗಲ ವಾಂತಿ, ಕೇರಳ ನೋಂದಣಿಯ



ಎರಡು ಕಾರುಗಳು (ಕೆಎಲ್.13.ಎಎಕ್ಸ್.5197 ಮತ್ತು ಕೆಎಲ್.79.ಎ.0011) ಮತ್ತು ನೋಟು ಎಣಿಸುವ 2 ಡಿಜಿಟಲ್ ಯಂತ್ರಗಳನ್ನು ವಶಕ್ಕೆ ಪಡೆಯಲಾಗಿದೆ.

ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ವಿರಾಜಪೇಟೆ ಪೊಲೀಸ್ ಅಧಿಕಾರಿಗಳಿಗೆ 2 ಕಾರುಗಳಲ್ಲಿ ಬೆಲೆಬಾಳುವ ವಸ್ತುಗಳನ್ನು ಅಕ್ರಮವಾಗಿ ಸಾಗಿಸುತ್ತಿರುವ ಮಾಹಿತಿ ಲಭಿಸಿತ್ತು. ಈ ಹಿನ್ನೆಲೆಯಲ್ಲಿ ಗುರುವಾರ ಬೆಳಗ್ಗೆ 8.30ರ ಸಮಯದಲ್ಲಿ ಬೇಟೋಳಿ ಗ್ರಾಮದ ಹೆಗ್ಗಳ ಜಂಕ್ಷನ್ ಬಳಿ ಬಂದ ■6ನೇ ಪುಟಕ್ಕೆ

ಸೆಂಟ್ ತಯಾರಿಕೆಯಲ್ಲಿ ಬಳಕೆ

ತಿಮಿಂಗಲ ವಾಂತಿಯನ್ನು ದೀರ್ಘಕಾಲ ಸುಗಂಧ ಸೂಸುವ ಸೆಂಟ್‌ಗಳನ್ನು ತಯಾರಿಸಲು ಬಳಸಲಾಗುತ್ತದೆ. ಈಗ ವಶಕ್ಕೆ ಪಡೆಯಲಾಗಿರುವ ಮಾಲಿನ ತಾಜಾತನವನ್ನು ಖಚಿತಪಡಿಸಿಕೊಳ್ಳಲು ರಾಜ್ಯದ ವಿವಿಧ ಕಡೆಗಳಲ್ಲಿ ಅಂಬರ್ಗ್ರೀಸ್ ಪ್ರಕರಣ ಪತ್ತೆ ಮಾಡಿದ ಪೊಲೀಸ್ ಅಧಿಕಾರಿಗಳು ಮತ್ತು ಎಫ್‌ಎಸ್‌ಎಲ್ ಪರಿಶೀಲನೆ ಮೂಲಕ ಖಚಿತಪಡಿಸಿಕೊಳ್ಳಲಾಗಿದೆ. ಈ ವಸ್ತು ಕಾಳಸಂತೆಯಲ್ಲಿ ಕೆ.ಜಿ 1ಕ್ಕೆ ಅಂದಾಜು 1 ಕೋಟಿ ರೂ. ಮೌಲ್ಯ ಹೊಂದಿದೆ. ಸಮುದ್ರ ತೀರದಲ್ಲಿ ಇದನ್ನು ಹುಡುಕುವುದಕ್ಕೂ ತಂಡಗಳಿವೆ.

- ರಾಮರಾಜನ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ

ಶೇಷಾದ್ರಿಪುರಂ ಕಾಲೇಜಿಗೆ ಉತ್ತಮ ಫಲಿತಾಂಶ



ಲಿಖಿತ ಪುಣ್ಯಶ್ರೀ ಇಬ್ಬನಿ ಸುಜನ್ ಸಿಂಚನ



ಪ್ರಣತಿ ಐಸಿರಿ

ಮೈಸೂರು, ಏ. 10– ಈ ಬಾರಿಯ ದ್ವಿತೀಯ ಪಿಯು ಪರೀಕ್ಷೆಯಲ್ಲಿ ಶೇಷಾದ್ರಿಪುರಂ ಸ್ವತಂತ್ರ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ.

ಪಿ.ಸಿ.ಎಂ.ಬಿ ವಿಭಾಗದಲ್ಲಿ ಲಿಖಿತ ಬಿ.ಆರ್–591, ಪುಣ್ಯಶ್ರೀ.ಎಸ್ 591, ಇಬ್ಬನಿ.ಕೆ.ಎ.,587, ಸುಜನ್.ಡಿಎಸ್. 581 ಅಂಕಗಳನ್ನು ಪಡೆದಿದ್ದಾರೆ.

ವಾಣಿಜ್ಯ ವಿಭಾಗದಲ್ಲಿ ಇ.ಬಿ.ಎ.ಬಿ ವಿಭಾಗದಲ್ಲಿ ಸಿಂಚನ.ಎಸ್ 589, ಇ.ಬಿ.ಎ.ಸಿ ವಿಭಾಗದಲ್ಲಿ ಪ್ರಣತಿ.ಸಿ.ಕೆ. 586, ಐಸಿರಿ ಬಿ.ಎಸ್. 584 ಅಂಕಗಳನ್ನು ಪಡೆದಿದ್ದಾರೆ. ದ್ವಿತೀಯ ಪಿ.ಯು.ಸಿ ಪರೀಕ್ಷೆಯಲ್ಲಿ ಶೇಷಾದ್ರಿಪುರಂ ಸ್ವತಂತ್ರ ಪದವಿ ಪೂರ್ವ ಕಾಲೇಜಿಗೆ ಶೇಕಡ 89.93 ಒಟ್ಟು ಫಲಿತಾಂಶ ಬಂದಿದೆ. 326 ವಿದ್ಯಾರ್ಥಿಗಳು ವಾರ್ಷಿಕ ಪರೀಕ್ಷೆಗೆ ಹಾಜರಾಗಿದ್ದು, ವಿಜ್ಞಾನ ವಿಭಾಗದಲ್ಲಿ 196 ವಿದ್ಯಾರ್ಥಿಗಳಿಗೆ 44 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್, 103 ವಿದ್ಯಾರ್ಥಿಗಳು ಪ್ರಥಮ ಶ್ರೇಣಿ, ವಾಣಿಜ್ಯ ವಿಭಾಗದಲ್ಲಿ 130 ವಿದ್ಯಾರ್ಥಿಗಳಿಗೆ 24 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್, 58 ವಿದ್ಯಾರ್ಥಿಗಳು ಪ್ರಥಮ ಶ್ರೇಣಿ, 12 ವಿದ್ಯಾರ್ಥಿಗಳು ಕನ್ನಡದಲ್ಲಿ 100ಕ್ಕೆ 100 ಅಂಕಗಳು, ಸಂಸ್ಕೃತದಲ್ಲಿ –01 ವಿದ್ಯಾರ್ಥಿ, ರಸಾಯನಶಾಸ್ತ್ರ–01, ಗಣಿತ ಶಾಸ್ತ್ರ–02, ಜೀವಶಾಸ್ತ್ರ–01, ಮೂಲ ಗಣಿತ–01, ಸಂಖ್ಯಾಶಾಸ್ತ್ರ–01 ಒಟ್ಟು 19 ವಿದ್ಯಾರ್ಥಿಗಳು 100ಕ್ಕೆ 100 ಅಂಕಗಳನ್ನು ಪಡೆದು ಕಾಲೇಜಿಗೆ ಹೆಮ್ಮೆ ತಂದಿದ್ದಾರೆ.

ಎಲ್ಲಾ ವಿದ್ಯಾರ್ಥಿಗಳಿಗೆ ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಅಧ್ಯಕ್ಷ ಎನ್.ಆರ್. ಪಂಡಿತಾರಾಧ್ಯ, ಗೌರವ ಪ್ರಧಾನ ಕಾರ್ಯದರ್ಶಿ ನಾಡೋಜ ಡಾ.ವೂಡೇ ಪಿ.ಕೃಷ್ಣ ಹಾಗೂ ಕಾಲೇಜಿನ ಆಡಳಿತ ಮಂಡಳಿ ಅಧ್ಯಕ್ಷ ಬಿ.ಎ.ಅನಂತರಾಮ್, ಪ್ರಾಂಶುಪಾಲರಾದ ಶ್ರೀಮತಿ ಅರ್ಚನಾ ಸ್ವಾಮಿ ಎನ್, ಕಾಲೇಜಿನ ಉಪನ್ಯಾಸಕ ಮತ್ತು ಉಪನ್ಯಾಸಕೇತರ ವರ್ಗದವರು ಅಭಿನಂದನೆ ಸಲ್ಲಿಸಿದ್ದಾರೆ.

ಹೆಚ್.ಕೆ.ಖುಷಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ



ಮೈಸೂರು,ಏ.10–ಈ ಬಾರಿಯ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಸದ್ವಿದ್ಯಾ ಸೆಮಿ ರೆಸಿಡೆನ್ಸಿಯಲ್ ಕಾಲೇಜಿನ ವಿಜ್ಞಾನ ವಿಭಾಗದ ವಿದ್ಯಾರ್ಥಿ ಹೆಚ್.ಕೆ.ಖುಷಿ 576 ಅಂಕ ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಈಕೆ ಶಾರದಾ ವಿಲಾಸ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ಸಿ.ಕೆ.ಅಶೋಕ್‌ಕುಮಾರ್ ಹಾಗೂ ಸುಮಾ ಅವರ ಪುತ್ರಿ.

ಚೈತ್ರ ಸ್ವತಂತ್ರ ಪ.ಪೂರ್ವ ಕಾಲೇಜಿಗೆ ಉತ್ತಮ ಫಲಿತಾಂಶ



ಇಬ್ಬನಿ ಸಿಂಚನಾ ನಿಖಿಲ್ ನಿರಂಜನ್

ಮೈಸೂರು: ಈ ಬಾರಿಯ ದ್ವಿತೀಯ ಪಿಯು ಪರೀಕ್ಷೆಯಲ್ಲಿ ನಾರಾಯಣ ಪದವಿಪೂರ್ವ ಕಾಲೇಜಿನ ಸಹಯೋಗದೊಂದಿಗೆ ನಡೆಯುತ್ತಿರುವ ಮೈಸೂರಿನ ಶ್ರೀರಾಂಪುರದಲ್ಲಿರುವ ಚೈತ್ರ ಸ್ವತಂತ್ರ ಪದವಿಪೂರ್ವ ಕಾಲೇಜಿಗೆ ಶೇ. 98 ಫಲಿತಾಂಶ ಬಂದಿದೆ ಪರೀಕ್ಷೆಗೆ ಹಾಜರಾಗಿದ್ದ 127 ವಿದ್ಯಾರ್ಥಿಗಳಲ್ಲಿ 4 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಎಂ.ಆರ್. ಇಬ್ಬನಿ–586, ಎಂ.ಜಿ. ಸಿಂಚನಾ–585, ನಿಖಿಲ್ ಆತ್ರೇಯ –582 ಮತ್ತು ನಿರಂಜನ್–580 ಅಂಕ ಪಡೆದಿದ್ದಾರೆ.

ಶಾರದಾ ವಿಲಾಸ ಪಿಯು ಕಾಲೇಜಿಗೆ ಶೇ.73.72 ಫಲಿತಾಂಶ



ನಿತ್ಯಾಂಜಲಿ ಮಹದೇವ ಪ್ರಸಾದ್

ಮೈಸೂರು, ಏ. 10– ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶಾರದಾ ವಿಲಾಸ ಪದವಿ ಪೂರ್ವ ಕಾಲೇಜಿಗೆ ಶೇ.73.72 ಫಲಿತಾಂಶ ಲಭಿಸಿದೆ.

ವಾಣಿಜ್ಯ ವಿಭಾಗದಲ್ಲಿ ಎಂ.ನಿತ್ಯಾಂಜಲಿ 568, ವಿಜ್ಞಾನ ವಿಭಾಗದಲ್ಲಿ ಜಿ.ಪಿ.ಮಹದೇವ ಪ್ರಸಾದ್ 562 ಅಂಕ ಗಳಿಸಿ ಕಾಲೇಜಿಗೆ ಪ್ರಥಮ ಸ್ಥಾನವನ್ನು ಗಳಿಸಿರುತ್ತಾರೆ.

ಪರೀಕ್ಷೆ ತೆಗೆದುಕೊಂಡ 255 ವಿದ್ಯಾರ್ಥಿಗಳ ಪೈಕಿ 188 ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದಾರೆ. ಇದರಲ್ಲಿ 18 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾದರೆ 126 ವಿದ್ಯಾರ್ಥಿಗಳು ಪ್ರಥಮ ದರ್ಜೆ, 35 ದ್ವಿತೀಯ ದರ್ಜೆ ಹಾಗೂ 9 ಮಂದಿ ತೃತೀಯ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ವಿಜ್ಞಾನ ವಿಭಾಗದಲ್ಲಿ ಎನ್.ಮೌಲ್ಯ 560, ವಿ.ಜಿ.ಕಿರಣ್‌ಕುಮಾರ್ 558, ಜಿ.ಗಿತೇಶ್ 550, ಎಚ್.ನಂಜುನ 549, ವಿ.ಕೆ.ಚಂದ್ರಕಲಾ 546, ತ್ರಿಶಾ 543, ಜೀವನ್.ಎಸ್ 541, ಎಚ್.ಪಿ.ಧೃತಿ 541, ಟಿ.ಯು.ಪ್ರಿಯಾಂಕ 534, ಎನ್.ರೋಹಿತ್ 524, ವಿ.ಚೇತಕ್ 519, ಸೌಜನ್ಯ 519, ಅಬ್ದುಲ್ ಅಯಾನ್ 513, ಎಸ್.ದಿವಾಕರ್ 511 ಮತ್ತು ವಾಣಿಜ್ಯ ವಿಭಾದಲ್ಲಿ ಹೆಚ್.ವಿ. ಲಿಖಿತ 532, ಬಿ.ಕೆ.ಲಲಿತ್ ಕುಮಾರ 518 ಅಂಕಗಳನ್ನು ಪಡೆದು ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ ಎಂದು ಕಾಲೇಜಿನ ಪ್ರಾಂಶುಪಾಲ ಅಶೋಕ್‌ಕುಮಾರ್ ತಿಳಿಸಿದ್ದಾರೆ

ಆರ್.ದೀಪಾಗೆ ಉನ್ನತ ಶ್ರೇಣಿ



ಜಯಪುರ: ಮೈಸೂರಿನ ಮರಿಮಲ್ಲಪ್ಪ ಪಿಯು ಕಾಲೇಜಿನ ವಿದ್ಯಾರ್ಥಿಯಾಗಿರುವ ಆರ್.ದೀಪಾ ದ್ವಿತೀಯ ಪಿಯುಸಿ ಪರೀಕ್ಷೆಯ ವಾಣಿಜ್ಯ ವಿಭಾಗದಲ್ಲಿ 547 ಅಂಕಗಳನ್ನು ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಈಕೆ ಜಯಪುರ ಗ್ರಾಮದ ರೈತ ರಂಗಸ್ವಾಮಿ ಹಾಗೂ ಶ್ರೀಮತಿ ಸುಜಾತ ದಂಪತಿಯ ಪುತ್ರಿ.

ಸಮರ್ಥ್ ಉನ್ನತ ಶ್ರೇಣಿಯಲ್ಲಿ ತೇರ್ಗಡೆ



ಮೈಸೂರು: ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಆದಿಚುಂಚನಗಿರಿ ಬಿ.ಜಿ.ಎಸ್ ಪದವಿಪೂರ್ವ ಕಾಲೇಜಿನ ವಿಜ್ಞಾನ ವಿಭಾಗದ ವಿದ್ಯಾರ್ಥಿ ಎ.ಸಮರ್ಥ್ 600ಕ್ಕೆ 540 ಅಂಕಗಳನ್ನು ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಶಾರದಾ ವಿಲಾಸ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಸಿ.ಕೆ.ಅಶೋಕ್‌ಕುಮಾರ್ ಹಾಗೂ ಸುಮಾ ದಂಪತಿ ಪುತ್ರ.

ಎಂ.ಎಸ್. ಮಾನ್ಯಗೆ 537 ಅಂಕ



ಮೈಸೂರು: ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದಲ್ಲಿ ಮೈಸೂರು ನಗರದ ಶಾರದಾ ವಿದ್ಯಾ ಮಂದಿರದ ಪಿಯು ವಿದ್ಯಾರ್ಥಿನಿ ಕು. ಎಂ.ಎಸ್.ಮಾನ್ಯ 600ಕ್ಕೆ 537 ಅಂಕ ಪಡೆದು ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಆಗಿದ್ದಾರೆ. ಮೈಸೂರಿನ ಶ್ರೀರಾಂಪುರ ನಿವಾಸಿ ಆದ ಎಂ.ಎನ್.ಶಕ್ತಿಪ್ರಸಾದ್ ಹಾಗೂ ರಮ್ಯಶ್ರೀ ದಂಪತಿ ಪುತ್ರಿ.

ನಿಧನ



ಶತಾಯುಷಿ ಶ್ರೀಮತಿ ಎ.ಎನ್.ಪದ್ಮಮ್ಮ

ಮೈಸೂರು, ಏ.10–ಮೈಸೂರಿನ ವಿಜಯನಗರ 1ನೇ ಹಂತದ ನಿವಾಸಿ ಲೇಟ್ ನರಸಿಂಹ ಅಯ್ಯಂಗಾರ್ ಅವರ ಧರ್ಮಪತ್ನಿ ಶತಾಯುಷಿ ಶ್ರೀಮತಿ ಎ.ಎನ್.ಪದ್ಮಮ್ಮ ಏ.9ರಂದು ನಿಧನ ರಾದರು. ಮೃತರು ಇಬ್ಬರು ಪುತ್ರರು, ಮೂವರು ಪುತ್ರಿಯರು ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೈಸೂರಿನ ಮಹಾಜನ ಶಿಕ್ಷಣ ಸಂಸ್ಥೆಯ ನಿವೃತ್ತ ಮುಖ್ಯೋಪಾಧ್ಯಾಯ ಎ.ಎನ್.ರಘುರಾಂ ಮೃತರ ಪುತ್ರರಾಗಿದ್ದಾರೆ. ಮೃತರ ಅಂತ್ಯಕ್ರಿಯೆ ಬೆಂಗಳೂರಿನಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅನ್ನಪೂರ್ಣ



ಮೈಸೂರು: ಮೈಸೂರಿನ ಅರವಿಂದನಗರ ನಿವಾಸಿ ಹಾಗೂ ನವೀನ್ ಬಾರ್ ಅಂಡ್ ರೆಸ್ಟೋರೆಂಟ್ ಮಾಲೀಕರಾದ ದಿವಂಗತ ಬಿ.ಎಸ್.ಹನುಮಂತಯ್ಯ ಅವರ ಧರ್ಮಪತ್ನಿ ಶ್ರೀಮತಿ ಎನ್.ಅನ್ನಪೂರ್ಣ (62) ಅವರು ಇಂದು ರಾತ್ರಿ ನಿಧನರಾದರು.

ಮೃತರು ಪುತ್ರ, ಪುತ್ರಿ ಹಾಗೂ ಅಪಾರಬಂಧುವರ್ಗ ಅಗಲಿದ್ದಾರೆ. ಇವರ ಪಾರ್ಥಿವ ಶರೀರವನ್ನು ನಾಳೆ (ಶುಕ್ರವಾರ) ಬೆಳಗ್ಗೆ 7 ಗಂಟೆವರೆಗೆ ಅರವಿಂದನಗರದ ನಿವಾಸದಲ್ಲಿರಿಸಿ, (ಅರವಿಂದ ನರ್ಸಿಂಗ್ ಹೋಂ ಬಳಿ) ಬಳಿಕ ತುಮಕೂರು ಜಿಲ್ಲೆ ಬೆಲ್ಲಹಳ್ಳಿಗೆ ಕೊಂಡೊಯ್ದು ಅಲ್ಲಿ ಅಂತ್ಯಕ್ರಿಯೆ ನೆರವೇರಿಸುವುದಾಗಿ ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರಲ್ಲಿ ಅದ್ದೂರಿ ಮಹಾವೀರ ಜಯಂತಿ ಆಚರಣೆ





ಮಹಾವೀರ ಜಯಂತಿ ಪ್ರಯುಕ್ತ ಜೈನ ಸಮುದಾಯದ ವಿವಿಧ ಸಂಘಟನೆಗಳು ಗುರುವಾರ ಮೈಸೂರಲ್ಲಿ ಭಗವಾನ್ ಮಹಾವೀರರ ಮೂರ್ತಿಯೊಂದಿಗೆ ಅದ್ದೂರಿ ಮೆರವಣಿಗೆ ನಡೆಸಿದವು.

ಮೈಸೂರು, ಏ.10(ಆರ್‌ಕೆ)–ಜೈನ ಸಮುದಾಯದ ವಿವಿಧ ಸಂಘಟನೆಗಳು ಮೈಸೂರಲ್ಲಿ 24ನೇ ಜೈನ ತೀರ್ಥಂಕರರಾದ ಭಗವಾನ್ ಮಹಾವೀರ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಿದವು.

ಶ್ರೀ ಸುಮತಿನಾಥ ಜೈನ ಶ್ವೇತಾಂಬರ ಮೂರ್ತಿ ಪೂಜಕ ಸಂಘ, ಮಹಾವೀರ ಜನ್ಮ ಕಲ್ಯಾಣಕ ಮಹೋತ್ಸವ, ಶ್ರೀ ದಿಗಂಬರ ಜೈನ ಸಮಾಜ, ಮಹಾವೀರ ಮಂಡಳಿ, ಪದ್ಮಶ್ರೀ ಮಹಿಳಾ ಸಮಾಜ, ಸುಮತಿನಾಥ ಜೈನ ನವ ಯುವಕ ಮಂಡಳಿ ಸೇರಿದಂತೆ ವಿವಿಧ ಜೈನ ಸಂಘಟನೆಗಳ ಸಂಯುಕ್ತಾಶ್ರಯದಲ್ಲಿ ಮಹಾವೀರ ಜಯಂತಿಯನ್ನು ಆಚರಿಸಲಾಯಿತು.

ಮೈಸೂರಿನ ಹಳ್ಳದಕೇರಿಯಲ್ಲಿರುವ ಮಹಾವೀರ ಭವನದಲ್ಲಿ ಇಂದು ಬೆಳಗ್ಗೆ 7.30 ಗಂಟೆಗೆ ಅಭಿಷೇಕ ಪೂಜೆ, ಪ್ರಾರ್ಥನೆ ಹಾಗೂ ವಿವಿಧ ಧಾರ್ಮಿಕ ಕೈಂಕರ್ಯಗಳು ನಡೆದವು. ನಂತರ ಶ್ರೀ ಸುಮತಿನಾಥ ಜೈನ ದೇವಾಲಯದಿಂದ ಆರಂಭವಾದ ಮೆರವಣಿಗೆಯಲ್ಲಿ 7 ಮಹಿಳಾ ಮಂಡಲ್ ಸೇರಿದಂತೆ ಸುಮಾರು 3,000 ಮಂದಿ ಪಾಲ್ಗೊಂಡಿದ್ದರು. ಶ್ರೀ ಭಗವಾನ್ ಮಹಾವೀರರ ಮೂರ್ತಿಯೊಂದಿಗೆ ರಥದಲ್ಲಿ ಮಹಾವೀರನಗರ, ಅಶೋಕ ರಸ್ತೆ ಮೂಲಕ ಸಾಗಿದ ಮೆರವಣಿಗೆಯು ಮರಳಿ ಮಹಾವೀರ ಭವನ ತಲುಪಿತು.

ಮೈಸೂರಿನ ಹಿರಿಯ ನ್ಯಾಯವಾದಿ ಹಾಗೂ ಹೆಸರಾಂತ ಉದ್ಯಮಿ ಹರೀಶ್ ಕುಮಾರ್ ಹೆಗ್ಡೆ, ಶ್ರೀ ಸುಮತಿ ನಾಥ ಜೈನ ಮೂರ್ತಿ ಪೂಜಕ ಸಂಘದ ಕಾರ್ಯದರ್ಶಿ ಕಾಂತಿಲಾಲ್ ಗುಲೇಚ, ಖಜಾಂಚಿ ಪರನ್ ಮಲ್ ಸಾಂಗ್ವಿ, ಯೂತ್ ಅಸೋಸಿಯೇಷನ್ ಅಧ್ಯಕ್ಷ ಜಾಯ್ ಸಲೇಚ್ ಸೇರಿದಂತೆ ಎಲ್ಲಾ ಜೈನ ಸಂಘಟನೆಗಳ ಪ್ರಮುಖರು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

ಅಹಿಂಸಾ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ಅಪರಿಗ್ರಹವನ್ನು ನಾಡಿಗೆ ಪರಿಚಯಿಸಿದ 24ನೇ ತೀರ್ಥಂಕರನಾದ ಭಗವಾನ್ ಮಹಾವೀರನ ಜನ್ಮದಿನವನ್ನು ಭಕ್ತಿ ಭಾವದಿಂದ ಆಚರಿಸಲಾಯಿತು. ಲಷ್ಕರ್ ಠಾಣೆ ಇನ್ಸ್‌ಪೆಕ್ಟರ್ ಪ್ರಸಾದ್ ನೇತೃತ್ವದಲ್ಲಿ ಮೆರವಣಿಗೆಗೆ ಭಾರಿ ಬಿಗಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿತ್ತು.



ಕನ್ನಡ ಗೆಳೆಯರ ಬಳಗದಿಂದ ಕಡಕೊಳದಲ್ಲಿ ಮಹಾವೀರ್ ಜಯಂತಿಯನ್ನು ಸಂಘದ ಅಧ್ಯಕ್ಷ ಮಂಜುನಾಥ್ ಅಧ್ಯಕ್ಷತೆಯಲ್ಲಿ ಆಚರಿಸಲಾಯಿತು. ಈ ವೇಳೆ ಸಂಘದ ಸದಸ್ಯರು, ಕಡಕೊಳ ಮುಖಂಡರಾದ ಶ್ರೀಕಂಠ ಶಿವಕುಮಾರ್, ಮಿಲ್ಟ್ರಿ ಸ್ವಾಮಿನಾಯ್ಕ, ಎಸ್.ನಟರಾಜ, ಪುಟ್ಟಮಾದು, ಜವರನಾಯಕ, ಕೆ.ಟಿ.ಶಿವಪ್ಪ, ಶಿವಣ್ಣ, ಪಿ.ಮಹೇಶ, ನಂಜಪ್ಪ, ಚಂದ್ರಪ್ಪ, ವೇದಾಂತ್, ಲಕ್ಷ್ಮಿಕಾಂತ್, ಭೈರಪ್ಪ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ಕರ್ನಾಟಕ ಸಾಂಸ್ಕೃತಿಕ ವೈಭವ ಕಾರ್ಯಕ್ರಮದಲ್ಲಿ ಸಾಧಕರಿಗೆ, ಉತ್ತಮ ಶಾಲೆಗಳಿಗೆ ಪ್ರಶಸ್ತಿ ಪ್ರದಾನ



ಮೈಸೂರು ಜಿಲ್ಲಾ ಕಸಾಪ ಭವನದಲ್ಲಿ ಗುರುವಾರ ನಡೆದ ಕರ್ನಾಟಕ ಸಾಂಸ್ಕೃತಿಕ ವೈಭವ ಕಾರ್ಯಕ್ರಮದಲ್ಲಿ 'ಒಗಟುಗಳು ಮತ್ತು ನುಡಿ ಮುತ್ತುಗಳು' ಕೃತಿಯನ್ನು ಲೋಕಾರ್ಪಣೆಗೊಳಿಸಲಾಯಿತು.

ಮೈಸೂರು, ಏ.10(ಜಿಎ)–ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಕರ್ನಾಟಕ ಸಾಂಸ್ಕೃತಿಕ ವೈಭವ ಕಾರ್ಯಕ್ರಮ ನಡೆಯಿತು.

ಕಾವ್ಯಶ್ರೀ ಚಾರಿಟೆಬಲ್ ಟ್ರಸ್ಟ್ ವತಿಯಿಂದ ನಡೆದ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದ ಸಾಧಕರೊಂದಿಗೆ ಉತ್ತಮ ಸಾಧನೆ ಮಾಡಿದ ಶಾಲೆಗಳಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ರಾಮೋಹಳ್ಳಿ ಸಿದ್ಧಾರೂಢ ಮಿಷನ್ ಟ್ರಸ್ಟ್‌ನ ಡಾ.ಆರೂಢ ಭಾರತೀ ಸ್ವಾಮಿ ಮಾತನಾಡಿ, ಯುವ ಜನತೆ ಕನ್ನಡ ಸಾಹಿತ್ಯ, ಸಂಸ್ಕೃತಿಯನ್ನು ಪರಿಚಯ ಮಾಡುವ ಕಾರ್ಯವನ್ನು ಮಾಡಬೇಕಿದೆ ಎಂದು ಸಲಹೆ ನೀಡಿದರು.

ಈ ಸಂದರ್ಭದಲ್ಲಿ 82 ಮಂದಿ ಸಾಧಕರಿಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಸದ್ಭಾವನಾ ಪ್ರಶಸ್ತಿ, 24 ಮಂದಿ ಶಿಕ್ಷಕರಿಗೆ ಶಿಕ್ಷಣ ರತ್ನ ಪ್ರಶಸ್ತಿ, ಆರು ಮಂದಿಗೆ ರಾಷ್ಟ್ರೀಯ ಬಸವಶ್ರೀ ಪ್ರಶಸ್ತಿ, 10 ಮಂದಿಗೆ ಸುವರ್ಣ ಕನ್ನಡಿಗ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಜತೆಗೆ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿರುವ 13 ಶಾಲೆಗಳಿಗೆ ಅತ್ಯುತ್ತಮ ಶಾಲೆ ಪ್ರಶಸ್ತಿ ನೀಡಿ ಪುರಸ್ಕರಿಸಲಾಯಿತು. ಬಳಿಕ ಕರ್ನಾಟಕ ಸಾಂಸ್ಕೃತಿಕ ಪರಂಪರೆ ವಿಚಾರವಾಗಿ ವಿಚಾರಗೋಷ್ಠಿ ಮತ್ತು ಕವಿಗೋಷ್ಠಿ ನಡೆಯಿತು.

ವೇದಿಕೆಯಲ್ಲಿ ವೈ.ಬಿ.ಕಡಕೊಳ ಮತ್ತು ಲೂಸಿ ಸಲ್ಡಾನ ಸಂಗ್ರಹಿಸಿದ ಒಗಟುಗಳು ಮತ್ತು ನುಡಿಮುತ್ತುಗಳು ಕೃತಿಯನ್ನು ಲೋಕಾರ್ಪಣೆಗೊಳಿಸಲಾಯಿತು.

ಕಾರ್ಯಕ್ರಮದಲ್ಲಿ ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಸಾಹಿತಿ ಪಂಡಿತ ಬೀ. ಅವಜಿ, ಡಾ.ಚಂದ್ರಶೇಖರ ವಾಡಲಗೇರಿ, ಜಿಲ್ಲಾ ಕಸಾಪ ಉಪಾಧ್ಯಕ್ಷ ಡಾ.ಟಿ.ತ್ಯಾಗರಾಜ್, ರವ್ಯಾ ಚೆಲುವಮೂರ್ತಿ, ಸಂಗೀತಾ ಮಠಪತಿ, ಲೂಸಿ ಸಲ್ಡಾನ, ಕಾವ್ಯಶ್ರೀ ಚಾರಿಟೆಬಲ್ ಟ್ರಸ್ಟ್‌ನ ಡಾ.ಜಿ.ಶಿವಣ್ಣಪ್ಪ, ಡಾ.ಚಿಕ್ಕಹೆಜ್ಜಾಜಿ ಮಹದೇವ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಅತಿಥಿ ಉಪನ್ಯಾಸಕರ ನೇಮಕಕ್ಕೆ ಸರ್ಕಾರದಿಂದಲೇ ಅಡ್ಡಗಾಲು

ಮೈಸೂರು,ಏ.10(ಜಿಎ)–ರಾಜ್ಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಖಾಲಿ ಇರುವ ಅತಿಥಿ ಉಪನ್ಯಾಸಕರ ಹುದ್ದೆಗಳಿಗೆ ಆಯ್ಕೆ ಮಾಡಬೇಕೆಂದು ಕಾದು ಕುಳಿತಿರುವ ಯುಜಿಸಿ ಅರ್ಹತೆ ಹೊಂದಿರುವ ಅಭ್ಯರ್ಥಿಗಳ ನೇಮಕಕ್ಕೆ ಸರ್ಕಾರವೇ ಅಡ್ಡಗಾಲು ಹಾಕುತ್ತಿರುವುದು ಸರಿಯಲ್ಲ. ಕೂಡಲೇ ಈ ಸಂಬಂಧ ನ್ಯಾಯಾಲಯದಲ್ಲಿ ಇರುವ ತಡೆಯಾಜ್ಞೆ ತೆರವಿಗೆ ಸರ್ಕಾರ ಕ್ರಮವಹಿಸಬೇಕು ಎಂದು ಯುಜಿಸಿ ಅರ್ಹತೆ ಹೊಂದಿರುವ ನಿರುದ್ಯೋಗಿ ಎಚ್.ಡಿ. ಕೋಟೆ ತಾಲೂಕು ಮುಳ್ಳೂರಿನ ಎಂ.ಆರ್.ಮಹೇಶ ಆಗ್ರಹಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 2024 ರ ಮೇ ತಿಂಗಳಿನಲ್ಲಿ ಹೈಕೋರ್ಟ್ ಆದೇಶ ಹೊರಡಿಸಿ, ಯುಜಿಸಿ ಅರ್ಹತೆ ಪಡೆದಿರುವವರಿಗೆ ಮಾತ್ರ ಅತಿಥಿ ಉಪನ್ಯಾಸಕ ಹುದ್ದೆ ನೀಡಬೇಕೆಂದು ತಿಳಿಸಿದೆ. ಆದರೆ ಸರ್ಕಾರ ಈ ಅರ್ಹತೆ ಇಲ್ಲದವರಿಗೂ ಅನುಕೂಲವಾಗಲೆಂಬ ಉದ್ದೇಶದಿಂದ ವಿಭಾಗೀಯ ಪೀಠಕ್ಕೆ ಮೇಲ್ಮನವಿ ಸಲ್ಲಿಸಿದೆ. ಜೊತೆಗೆ ವಿದ್ಯಾರ್ಥಿಗಳ ಹಿತದೃಷ್ಟಿ ಎಂಬ ಕಾರಣ ನೀಡಿ ಆ ವೇಳೆಗಾಗಲೇ ಅತಿಥಿ ಉಪನ್ಯಾಸಕರಾಗಿದ್ದವರನ್ನು ತಾತ್ಕಾಲಿಕವಾಗಿ ಮುಂದುವರಿಸಿದೆ ಎಂದರು.


ಈ ನಡುವೆ ಅನೇಕ ಬೆಳವಣಿಗೆಗಳೂ ಆಗಿದ್ದು, ಯುಜಿಸಿ ಅರ್ಹತೆ ಹೊಂದಿರುವ ಸುಮಾರು ಐದು ಸಾವಿರ ಮಂದಿ ನೇಮಕಾತಿಗಾಗಿ ಕಾಯ್ದು ಕುಳಿತಿದ್ದಾರೆ. ಆದರೂ ಸರ್ಕಾರ ಈ ಸಂಬಂಧ ತಡೆಯಾಜ್ಞೆ ತೆರವಿಗೆ ಮುಂದಾಗಿಲ್ಲ. ಒಂದು ವೇಳೆ ಯುಜಿಸಿ ಅರ್ಹತೆ ಹೊಂದಿರುವವರನ್ನು ನೇಮಕ ಮಾಡಿಕೊಳ್ಳುವುದಿಲ್ಲ ಎಂದು ಸ್ಪಷ್ಟವಾಗಿ ತಿಳಿಸಿದರೂ ತಾವು ಕೂಲಿ ಕೆಲಸ ಮಾಡಿಕೊಂಡಾದರೂ ಬದುಕುತ್ತೇವೆ. ಆದ್ದರಿಂದ ಸರ್ಕಾರ ಯುಜಿಸಿ ಅರ್ಹತೆ ಹೊಂದಿರುವವರ ನೇಮಕಾತಿಗೆ ಕ್ರಮ ಕೈಗೊಳ್ಳಲಿ ಎಂದು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಡಾ.ಲಿಂಗರಾಜು, ಎ.ಸಿ.ಚಂದ್ರಶೇಖರ್ ಉಪಸ್ಥಿತರಿದ್ದರು.

ಅಪರಿಚಿತ ವ್ಯಕ್ತಿ ಶವ ಪತ್ತೆ

ಮೈಸೂರು,ಏ.10–ಮೈಸೂರಿನ ಪೈಲಟ್ ಸರ್ಕಲ್ ಬಳಿಯ ಪಾಳು ಬಿದ್ದ ಮನೆಯಲ್ಲಿ ಸುಮಾರು 50ರಿಂದ 55 ವರ್ಷದ ಅಪರಿಚಿತ ವ್ಯಕ್ತಿಯ ಶವ ಕೊಳೆತ ಸ್ಥಿತಿಯಲ್ಲಿ ಪತ್ತೆಯಾಗಿದೆ. ಈ ಸಂಬಂಧ ಲಷ್ಕರ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಈತನ ವಾರಸುದಾರರು ಠಾಣೆ ದೂ.ಸಂ. 0821–2418307 ಅಥವಾ ನಗರ ಪೊಲೀಸ್ ಕಂಟ್ರೋಲ್ ರೂಂ. ಸಂ. 0821–2418339 ಅನ್ನು ಸಂಪರ್ಕಿಸಲು ಪೊಲೀಸ್ ಪ್ರಕಟಣೆ ಕೋರಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

11.04.2025 ಶುಕ್ರವಾರ, ಮಳೆ ನಕ್ಷತ್ರ: ರೇವತಿ 31.03.2025 ರಿಂದ 12.04.2025
ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ,
ತಿಥಿ: ತ್ರಯೋದಶಿ, ನಕ್ಷತ್ರ: ಪುಬ್ಬ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಯಕೃತ್ತಿನ ಸಮಸ್ಯೆಗಳು, ಕುತ್ತಿಗೆ ಹಾಗೂ ಬೆನ್ನುನೋವಿಗೆ ಆಕ್ಯೂಪಂಕ್ಚರ್ ಮತ್ತು ಯೋಗ ಶಿಬಿರ, ಅಧಿಕ ರಕ್ತದೊತ್ತಡ ಮತ್ತು ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆ 9ರಿಂದ.

■ **ರಾಮ್‌ಸನ್ಸ್ ಪ್ರತಿಷ್ಠಾನ:** ಬೊಂಬೆ ಮನೆ, ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10 ಗಂಟೆಗೆ.

■ **ನಟನಾ ರಂಗ ಶಾಲೆ :** ಮಕ್ಕಳ ಬೇಸಿಗೆ ಶಿಬಿರ ಉದ್ಘಾಟನಾ ಸಮಾರಂಭ, ಉಪಸ್ಥಿತರು : ಚಲನಚಿತ್ರ ನಿರ್ದೇಶಕ ಯೋಗರಾಜ್ ಭಟ್, ಉದ್ಯಮಿ ರಾಘವೇಂದ್ರರಾವ್, ಕಿರುತೆರೆ ನಟಿ ಭೂಮಿಕಾ ರಮೇಶ್, ಶಿಕ್ಷಣ ತಜ್ಞ ರವೀಂದ್ರಸ್ವಾಮಿ, ನಟನಾ ಅಧ್ಯಕ್ಷ ಕೆ.ಎಸ್. ಆನಂದಬಾಬು, ನಟನ ಸಂಸ್ಥಾಪಕ ಕಾರ್ಯದರ್ಶಿ ಮಂಡ್ಯ ರಮೇಶ್, ನಟನ ಪ್ರಶಸ್ತಿ ಪುರಸ್ಕೃತರು : ವೃತ್ತಿ ರಂಗಭೂಮಿ ಹಿರಿಯ ಕಲಾವಿದೆಯರಾದ ಶ್ರೀಮತಿ ರಾಧಾ–ಶ್ರೀಮತಿ ರುಕ್ಮಿಣಿ, ಸ್ಥಳ: ಸುಪ್ರೀಮ್ ಪಬ್ಲಿಕ್ ಶಾಲೆ, ದಟ್ಟಗಳ್ಳಿ, ಬೆಳಗ್ಗೆ 10ಕ್ಕೆ

■ **ಕಾಲೇಜು ಶಿಕ್ಷಣ ಇಲಾಖೆ, ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ವಿಜಯನಗರ :** ಕಾಲೇಜಿನ ಎರಡನೇ ದಶಮಾನೋತ್ಸವ ಹಾಗೂ ಜಾನಪದೋತ್ಸವ, ಉದ್ಘಾಟನೆ: ಶಾಸಕ ಜಿ.ಟಿ. ದೇವೇಗೌಡ, ಮುಖ್ಯ ಅತಿಥಿಗಳು : ಸಂಸ್ಕೃತಿ ಚಿಂತಕ ಪ್ರೊ. ಎಂ. ಕೃಷ್ಣೇಗೌಡ, ಅಧ್ಯಕ್ಷತೆ : ಕಾಲೇಜು ಪ್ರಿನ್ಸಿಪಾಲ್ ಜಿ.ಆರ್. ನಟರಾಜ, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 10.30ಕ್ಕೆ.

■ **ವಿದ್ಯಾವರ್ಧಕ ಪಾಲಿಟೆಕ್ನಿಕ್ :** ವಿಶಿಷ್ಟ–2025 ಉದ್ಘಾಟನಾ ಸಮಾರಂಭ, ಮುಖ್ಯ ಅತಿಥಿಗಳು : ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜು ಪ್ರಿನ್ಸಿಪಾಲ್ ಡಾ. ಸದಾಶಿವೇಗೌಡ, ಅಧ್ಯಕ್ಷತೆ : ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಗೌರವ ಅತಿಥಿಗಳು : ಕಾರ್ಯದರ್ಶಿ ಪಿ. ವಿಶ್ವನಾಥ್, ಸ್ಥಳ: ಸಾಹುಕಾರ್ ಚನ್ನಯ್ಯ ಸಭಾಂಗಣ, ಬೆಳಗ್ಗೆ 11ಕ್ಕೆ.

■ **ಶ್ರೀ ಸೀತಾರಾಮ ದೇವಾಲಯ:** ಶ್ರೀ ರಾಮನವಮಿ, ಶ್ರೀಮತಿ ಎಂ.ಎಸ್. ರಮ್ಯಶ್ರೀ ಮೇಲುಕೋಟೆ ಅವರಿಂದ ಸ್ಯಾಕ್ಸೋಫೋನ್ ವಾದನ, ಪಕ್ಕವಾದ್ಯ : ಶ್ರೀನಿವಾಸ್ ಅರಮನೆ ಆಸ್ಥಾನ ವಿದ್ವಾಂಸರು, ಸ್ಥಳ: ಶ್ರೀ ಸೀತಾರಾಮ ದೇವಾಲಯ, ಸಿದ್ಧಾರ್ಥನಗರ, ಸಂಜೆ 6 ರಿಂದ.

■ **ಅರಳಿಕಟ್ಟೆ ಶ್ರೀ ರಾಮ ದೇವಸ್ಥಾನ ಧಾರ್ಮಿಕ ಮತ್ತು ದಾನದತ್ತಿ :** ಶ್ರೀರಾಮನವಮಿ, ಸಂಜೆ 6.30 ರಿಂದ ಲಕ್ಷ್ಮೀಪುರಂನ ಶ್ರೀ ಶಾರದಾಂಭ ಭಜನಾ ಮಂಡಳಿಯಿಂದ ಭಜನೆ, ಸ್ಥಳ: ದೇವಸ್ಥಾನದ ಆವರಣ, ಚಾಮರಾಜಪುರಂ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಾಧನ – ಶೋಧನ–ಗ್ರಾಮೀಣ ಪರಿಸರದ ಉಪಕರಣಗಳು, ಪ್ರಸ್ತುತಿ: ಡಾ.ಎಂ.ಎನ್. ಚಿಕ್ಕಮಾದು, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಯೋಗ ಕುರಿತ ವಿಶೇಷ ಸರಣಿ– ಮಹಾಯೋಗ, 8.35 ಕನ್ನಡ ಚಿತ್ರಗೀತೆಗಳು, 9.00 ನಮ್ಮ ಆರೋಗ್ಯ, 9.30 ಗಾಂಧಿ ಸ್ಮೃತಿ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಎಸ್.ವಿ.ಸಹನಾ– ವೀಣಾ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ– ಸಂಗೀತ ಸಂಭ್ರಮ ನಾದಲಯ ಸಂಗಮ, ಪ್ರಸ್ತುತಿ : ಹೆಚ್.ಎಲ್. ಶಿವಶಂಕರಸ್ವಾಮಿ

ಮಧ್ಯಾಹ್ನ: 12.35 ದೇವರನಾಮ, 12.45 ಕಾದಂಬರಿ ವಿಹಾರ – ಎಂ. ಆರ್. ಶ್ರೀನಿವಾಸಮೂರ್ತಿಯವರ ರಂಗಣ್ಣನ ಕನಸಿನ ದಿನಗಳು ಕಾದಂಬರಿಯ ಬಾನುಲಿ ಓದು. ಪ್ರಸ್ತುತಿ : ಉಮೇಶ್. ಎಸ್.ಎಸ್., 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು–ಇಂದ್ರಾಣಿ ಅನಂತರಾವ್, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿದೀಪ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ : ಜಿ.ಕೆ. ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಕರ್ನಾಟಕ ಪೊಲೀಸ್ ಬ್ಯಾಂಡ್, 4.00 ಮಹಿಳಾರಂಗ, 4.30 ವೃತ್ತಿ ಮಾರ್ಗದರ್ಶನ–ಪ್ರಾಚ್ಯವಿದ್ಯಾ ಸಂಶೋಧನೆಯ ಮಹತ್ವ ಕುರಿತು ಮೈಸೂರು ವಿಶ್ವವಿದ್ಯಾಲಯದ ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್ ಅಂದರೆ ಪ್ರಾಚ್ಯವಿದ್ಯಾ ಸಂಶೋಧನಾ ಸಂಸ್ಥೆಯ ನಿರ್ದೇಶಕರಾದ ಡಾ. ಡಿ.ಪಿ. ಮಧುಸೂದನಾಚಾರ್ಯ ಅವರೊಂದಿಗೆ ಮಾತುಕತೆ. (ಭಾಗ–2) ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 6.50 ಕೃಷಿರಂಗ : ಲಾಭದಾಯಕ ಕುರಿ ಸಾಕಾಣಿಕೆ ಉದ್ಯಮಿಗೆ ಅನುಸರಿಸಬೇಕಾದ ಕ್ರಮಗಳು. ಈ ಕುರಿತು ಪಶುಪಾಲನಾ ಇಲಾಖೆಯ ನಿವೃತ್ತ ಉಪನಿರ್ದೇಶಕರಾದ ಡಾ. ಬಿ. ಎನ್. ಷಡಕ್ಷರಮೂರ್ತಿ ಅವರೊಂದಿಗೆ ಸಂದರ್ಶನ. ಸಂದರ್ಶಕರು : ಎನ್. ಕೇಶವಮೂರ್ತಿ, 7.45 ಕನ್ನಡದಲ್ಲಿ ಭಾಷಣ ಇದು ಪತ್ರದ ಕಥೆ–ದೀಪಾ ಫಡ್ಕೆ ಅವರಿಂದ ಪ್ರಬಂಧ, 8.00 ಕನ್ನಡ ಭಾರತೀ, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ : ಪದ್ಮಶಂಕರ್ –ವಯೋಲಿನ್ ವಾದನ, 10.00 ಜನಪದ ಸಂಗೀತ, 10.30 ಸವಿನೆನಪು –ಹಳೆಯ ಕನ್ನಡ ಚಿತ್ರಗೀತೆಗಳು

■ **ಶ್ರೀ ರಾಮಾಭ್ಯುದಯ ಮಹಾಸಭಾ:** ಶ್ರೀ ರಾಮೋತ್ಸವ, ವಿದ್ವಾನ್ ಹರೀಶ್ ಶಿವರಾಮಕೃಷ್ಣನ್ ಅವರಿಂದ ಶಾಸ್ತ್ರೀಯ ಸಂಗೀತ, ವಿದ್ವಾನ್ ಕಾರ್ತಿಕ್ ನಾಗರಾಜ್ –ಪಿಟೀಲು, ವಿದ್ವಾನ್ ಅರ್ಜುನ್ ಕುಮಾರ್–ಮೃದಂಗ, ವಿದ್ವಾನ್ ಜಿ.ಎಸ್. ರಾಮಾನುಜಂ–ಘಟಂ, ಸ್ಥಳ: ಶ್ರೀಮತಿ ಆಲಮ್ಮನವರ ಛತ್ರ ಕುಂಚಿಟಿಗರ ಸಂಘ, ಶ್ರೀರಾಮಪೇಟೆ, ಸಂಜೆ 6.30ಕ್ಕೆ.

■ **ಶ್ರೀರಾಮ ಸೇವಾ ಮಂಡಲಿ:** ಶ್ರೀ ರಾಮೋತ್ಸವ, ವಿದುಷಿ ಶ್ರೀಮತಿ ಅರ್ಚನಾ ಎಲ್. ರಾವ್ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ಸ್ಥಳ: ಶ್ರೀರಾಮ ಸೇವಾ ಮಂಡಲಿ, ವಿದ್ಯಾರಣ್ಯಪುರಂ, ಸಂಜೆ 6.30ಕ್ಕೆ

■ **ಶ್ರೀರಾಮ ಮಂದಿರ :** ಶ್ರೀ ರಾಮೋತ್ಸವ, ಬೆಳಗ್ಗೆ 9ಕ್ಕೆ ಶುಕ್ರ ಗ್ರಹ ಮತ್ತು ಚಂಡಿಕಾ ಹೋಮ, ಸಂಜೆ 6.30ಕ್ಕೆ ಡಾ. ಮಾಲಿನಿ, ನೃತ್ಯ ಸಂಗೀತ, ಹರಿಕಥಾ ವಿದುಷಿ ಅವರಿಂದ ಹರಿಕಥೆ, ಸ್ಥಳ: ಶ್ರೀ ರಾಮಮಂದಿರ, ಜಯನಗರ.

ಕೆ.ಆರ್.ನಗರದಲ್ಲಿಂದು

■ **ಶ್ರೀರಾಮ ಸೇವಾ ಸಮಿತಿ ಕೆ.ಆರ್.ನಗರ:** ಶ್ರೀ ರಾಮೋತ್ಸವ, ವಿದ್ವಾನ್ ಎಂ.ಎಸ್. ಕೇಶವಪ್ರಸಾದ್ ಮತ್ತು ವಿದ್ವಾನ್ ಎಂ.ಎಸ್. ರಾಮಪ್ರಸಾದ್ ಅವರಿಂದ ಹಾಡುಗಾರಿಕೆ, ವಿದ್ವಾನ್ ಜಗದೀಶ್–ಮೃದಂಗ, ವಿದ್ವಾನ್ ಚಂದನ್ ಕುಮಾರ್–ಪಿಟೀಲು, ಸ್ಥಳ: ಶ್ರೀರಾಮ ಸೇವಾ ಸಮಿತಿ, ಕೆ.ಆರ್.ನಗರ, ಸಂಜೆ 6.30 ರಿಂದ.

ಮಹಿಳಾ ಸ್ವಸಹಾಯ ಸಂಘಗಳ 25ನೇ ವಾರ್ಷಿಕೋತ್ಸವ



ಮೈಸೂರಿನ ಹಿನಕಲ್‌ನಲ್ಲಿರುವ ಹೋಲಿ ಫ್ಯಾಮಿಲಿ ಚರ್ಚ್ ಆವರಣದಲ್ಲಿ ಮಹಿಳಾ ಸ್ವಸಹಾಯ ಸಂಘಗಳ 25ನೇ ವಾರ್ಷಿಕೋತ್ಸವ ನೆರವೇರಿತು.

ಮೈಸೂರು, ಏ.10– ಮೈಸೂರಿನ ಹಿನಕಲ್‌ನಲ್ಲಿರುವ ಹೋಲಿ ಫ್ಯಾಮಿಲಿ ಚರ್ಚ್ ಆವರಣದಲ್ಲಿ ಮೂರು ಮಹಿಳಾ ಸ್ವಸಹಾಯ ಸಂಘಗಳ 25ನೇ ವಾರ್ಷಿಕೋತ್ಸವ ನೆರವೇರಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ದಿ ಆರ್ಗನೈಸೇಷನ್ ಫಾರ್ ದ ಡೆವಲಪ್ಮೆಂಟ್ ಆಫ್ ಪೀಪಲ್(ಒಡಿಪಿ) ಸಂಸ್ಥೆಯ ನಿರ್ದೇಶಕ ಫಾ.ಅಲೆಕ್ಸ್ ಪ್ರಶಾಂತ್ ಸೀಕ್ವೆರಾ ಮಾತನಾಡಿ, ಈ ಎರಡೂವರೆ ದಶಕಗಳಲ್ಲಿ ಸ್ವಸಹಾಯ ಸಂಘಗಳ ಮೂಲಕ ಮಹಿಳೆಯರ ಆರ್ಥಿಕ ಶಕ್ತಿ ಹೆಚ್ಚಿದೆ. ಜೊತೆಗೆ ನಾಯಕತ್ವ ಗುಣ, ವ್ಯವಹಾರಿಕ ಜ್ಞಾನದ ಜೊತೆಗೆ ಸ್ವಾವಲಂಬಿಗಳಾಗಿ ಜೀವನ ನಡೆಸುವ ಧೈರ್ಯ ಬೆಳೆಸಿಕೊಂಡಿದ್ದಾರೆ ಎಂದು ಶ್ಲಾಘಿಸಿದರು.

ಹೂಟಗಳ್ಳಿ ಪುರಸಭೆಯ ಆರ್.ನಾಗೇಂದ್ರ ಮಾತನಾಡಿ, ಪುರಸಭೆಯಲ್ಲಿ ಲಭ್ಯವಿರುವ ಮಹಿಳೆಯರ ಅಭಿವೃದ್ಧಿಗೆ ಪೂರಕವಾದ ಸೌಲಭ್ಯಗಳ ಪ್ರಯೋಜನ ಪಡೆಯುವಂತೆ ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಮಹಿಳೋದಯ ಮಹಿಳಾ ಒಕ್ಕೂಟದ ಸಂಯೋಜಕಿ ಡೋಲಿ ಪುಟಾಡೋ, ಪುರಸಭೆ ಉದ್ಯೋಗಿ ಶ್ರೀಮತಿ ಮುನಿಲಕ್ಷ್ಮಮ್ಮ, ಹಿನಕಲ್ ಸರ್ಕಾರಿ ಆಯುರ್ವೇದ ಆಸ್ಪತ್ರೆಯ ಡಾ.ಸುನೀತಾ, ವಲಯ ಸಂಯೋಜಕಿ ಶ್ರೀಮತಿ ಆರೋಕ್ಯ ಮೇರಿ, ಎಸ್‌ಯುಎಫ್ ಕಂಪನಿಯ ಪ್ರಕಾಶ್ ಮೇರಿ, ಕಾರ್ಯಕರ್ತೆಯರಾದ ಪುಷ್ಪ ಮೇರಿ ಹಾಗೂ ಮೇರಿ ಸ್ಟೆಲ್ಲಾ ಮತ್ತಿತರರು ಉಪಸ್ಥಿತರಿದ್ದರು.

ಹಿಂಸೆಯೇ ತಾಂಡವವಾಡುತ್ತಿರುವ ಈ ಕಾಲಘಟ್ಟದಲ್ಲಿ ಮಹಾವೀರರ ಸಂದೇಶ ಪಾಲನೆ ಅತ್ಯಂತ ಪ್ರಸ್ತುತ

• ಸಾಹಿತಿ ಪ್ರೊ.ಶಿವರಾಜಪ್ಪ ಪ್ರತಿಪಾದನೆ • ಮೈಸೂರಲ್ಲಿ ಭಗವಾನ್ ಮಹಾವೀರ ಜಯಂತಿ ಆಚರಣೆ

ಮೈಸೂರು, ಏ.10(ಎಂಕೆ)– ಜಗತ್ತಿನ ಎಲ್ಲಾ ಜೀವಿಗಳಿಗೂ ಲೇಸನ್ನು ಬಯಸಿದ ಭಗವಾನ್ ಮಹಾವೀರ ತೀರ್ಥಂಕರರ ತತ್ವಾದರ್ಶಗಳು ಮತ್ತು ಸಂದೇಶಗಳು, ಹಿಂಸೆಯೇ ತಾಂಡವವಾಡುತ್ತಿರುವ ಈ ಕಾಲಘಟ್ಟದಲ್ಲಿ ಅತ್ಯಂತ ಪ್ರಸ್ತುತವಾಗಿವೆ ಎಂದು ಸಾಹಿತಿ ಪ್ರೊ.ಶಿವರಾಜಪ್ಪ ಹೇಳಿದರು.

ಮೈಸೂರಿನ ಕರ್ನಾಟಕ ಕಲಾಮಂದಿರದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಗುರುವಾರ ಆಯೋಜಿಸಿದ್ದ ಭಗವಾನ್ ಮಹಾವೀರ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮಹಾವೀರರು ಜೈನರಿಗೆ ಮಾತ್ರ ಸೀಮಿತ ಅಂದುಕೊಳ್ಳಬಾರದು. ಎಲ್ಲಾ ಧರ್ಮಗಳನ್ನು, ಮಹನೀಯರನ್ನು ಭಕ್ತಿಯಿಂದ ಪೂಜಿಸಿದಾಗ ಮಾತ್ರ ಸಮಾಜದ ಪ್ರತಿಯೊಬ್ಬರು ಪ್ರೀತಿ ವಾತ್ಸಲ್ಯದಿಂದ ಬದುಕಲು ಸಾಧ್ಯವಾಗುತ್ತದೆ. ಮನಸುಗಳು ಒಡೆದು, ದ್ವೇಷ ಅಸೂಯೆ ಹೆಚ್ಚಾಗುತ್ತಿರುವ ಕಾಲಘಟ್ಟದಲ್ಲಿ ಮಹಾವೀರರ ಸಂದೇಶಗಳ ಪಾಲನೆ ಅತ್ಯವಶ್ಯವಾಗಿದೆ ಎಂದು ತಿಳಿಸಿದರು.

ಇಂದು ಮಹಾತ್ಮರ ಜಯಂತಿಗಳನ್ನು ಆಚರಿಸುತ್ತಿದ್ದೇವೆಯೇ ಹೊರತು ಅವರ ತತ್ವ ಸಿದ್ಧಾಂತಗಳನ್ನು ಅನುಸರಿಸುತ್ತಿಲ್ಲ. ಮಹಾವೀರ, ಬುದ್ಧ, ಬಸವಣ್ಣ, ಸ್ವಾಮಿ ವಿವೇಕಾನಂದರ ತತ್ವಾದರ್ಶ ಮತ್ತು ಸಂದೇಶಗಳನ್ನು ಪಾಲಿಸದಿರುವುದಕ್ಕೆ ಹಣ ಮತ್ತು ಅಧಿಕಾರದ ವ್ಯಾಮೋಹವೇ ಮುಖ್ಯ ಕಾರಣ ಎಂದು ಬೇಸರ ವ್ಯಕ್ತಪಡಿಸಿದರು.

ಅಹಿಂಸೆಯ ಸಾಕ್ಷಾತ್ಕಾರ: ವ್ಯಕ್ತಿಯ ವ್ಯಕ್ತಿತ್ವ ವಿಕಸನದ ಗುರಿಯೇ ಜೈನ ಧರ್ಮದ ಮೂಲ. ಅಹಿಂಸೆಯೇ ಪರಮಧರ್ಮ ಎನ್ನುವ ಜೈನಧರ್ಮವು ಗಾಂಧೀಜಿಯವರ ಮೇಲೆ ಪ್ರಭಾವ ಬೀರಿ, ಅವರು ಮಹಾತ್ಮರಾಗಲು ಕಾರಣವಾಯಿತು. ಸತ್ಯ, ಅಹಿಂಸೆಯ ಸಾಕ್ಷಾತ್ಕರ ನೀಡಿದ ಮೊದಲಿಗರು ಮಹಾವೀರರು. ಅಹಿಂಸೆ ಎಂಬುದು ಆದರ್ಶವಲ್ಲ, ಅದು ಆಚರಣೆ ಎಂದು ಪ್ರತಿಪಾದಿಸಿದರು. ಭಗವಾನ್ ಮಹಾವೀರ ಮತ್ತು ಭಗವಾನ್ ಗೌತಮ ಬುದ್ಧರು ಮೊಟ್ಟ ಮೊದಲು ವರ್ಣಾಶ್ರಮಗಳನ್ನು ತಿರಸ್ಕರಿಸಿ, ಮೌಢ್ಯ, ಅಂಧಕಾರ, ಹಿಂಸೆಯನ್ನು ಧಿಕ್ಕರಿಸಿದ ಮಹನೀಯರಾಗಿದ್ದಾರೆ ಎಂದು ಸ್ಮರಿಸಿದರು.

ವಿವಿಧತೆಯಲ್ಲಿ ಏಕತೆ: ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ಮಾತನಾಡಿ, ವಿವಿಧತೆಯಲ್ಲಿ ಏಕತೆ ಎಂಬುದು ಮೈಸೂರಿನಲ್ಲಿ ಕಾರ್ಯರೂಪದಲ್ಲಿದೆ. ಜಿಲ್ಲಾಡಳಿತದಿಂದ ಎಲ್ಲಾ ಮಹನೀಯರ ಜಯಂತಿಗಳನ್ನು ಆಚರಣೆ ಮಾಡಲು ಸಮಿತಿಯನ್ನು ರಚಿಸಿ, ಪೂರ್ವಭಾವಿ ಸಭೆಗಳನ್ನು ಮಾಡುತ್ತಿದ್ದೇವೆ. ಆ ಮೂಲಕ ಎಲ್ಲರಿಗೂ ಆದ್ಯತೆ ನೀಡುತ್ತಿದ್ದೇವೆ. ಪ್ರತಿ ಸಮುದಾಯಗಳು ಒಗ್ಗಟ್ಟಿನಿಂದ ಒಂದೆಡೆ ಆಚರಣೆಗೆ ಮುಂದಾಗಬೇಕು. ಜಿಲ್ಲಾಡಳಿತ ಅಗತ್ಯ ಎಲ್ಲಾ ಸಹಕಾರ ನೀಡಲಿದ್ದು, ಮುಂದಿನ ವರ್ಷ ಇನ್ನಷ್ಟು ವಿಜೃಂಭಣೆಯಿಂದ ಭಗವಾನ್ ಮಹಾವೀರರ ಜಯಂತಿ ಆಚರಣೆ ಮಾಡಬೇಕು ಎಂದು ತಿಳಿಸಿದರು.

ಗಾಯಕಿ ಸ್ನೇಹಶ್ರೀ ನಿರ್ಮಲ್ ಕುಮಾರ್ ಮತ್ತು ತಂಡದಿಂದ ಸಂಗೀತ ಕಾರ್ಯಕ್ರಮ ನಡೆಯಿತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮೈಸೂರು ವಿಭಾಗದ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ, ಸಹಾಯಕ ನಿರ್ದೇಶಕ ಸುದರ್ಶನ್, ಶ್ರೀ ದಿಗಂಬರ ಜೈನ ಸಮಾಜದ ಜಿಲ್ಲಾಧ್ಯಕ್ಷ ಎಂ.ಆರ್.ಸುನೀಲ್ ಕುಮಾರ್, ಪದ್ಮಶ್ರೀ ಜೈನ ಮಹಿಳಾ ಸಮಾಜದ ಶೀಲಾ ಅನಂತರಾಜ್, ಭಾರತೀಯ ಜೈನ್ ಮಿಲನ್ ಜೋನ್–8ರ ಅಧ್ಯಕ್ಷ ಯುವರಾಜ್ ಭಂಡಾರಿ ಉಪಸ್ಥಿತರಿದ್ದರು.



ಕಲಾಮಂದಿರದಲ್ಲಿ ನಡೆದ ಭಗವಾನ್ ಮಹಾವೀರ ಜಯಂತಿ ಕಾರ್ಯಕ್ರಮದಲ್ಲಿ ಮಹಾವೀರರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಲಾಯಿತು.

ಬೋಧನೆಯಂತೆ ಆಚರಣೆ ಮಾಡಿದ ಮಹನೀಯ ಮಹಾವೀರ...

ಅಹಿಂಸೆ ಪ್ರತಿಪಾದಿಸಿದ ಅಗ್ರಗಣ್ಯರಲ್ಲಿ ಮೊದಲಿಗರಾದ ಮಹಾವೀರರು ತಾವು ಬೋಧನೆ ಮಾಡಿದಂತೆಯೇ ಆಚರಣೆ ಮಾಡಿದವರು. ಒಳ್ಳೆಯ ಅಂಶಗಳನ್ನು ಮೈಗೂಡಿಸಿಕೊಂಡಿರುವ ಧರ್ಮ ಜೈನ ಧರ್ಮ. ಎಲ್ಲಾ ಧರ್ಮಗಳು ಮಾನವ ಕುಲ ಚೆನ್ನಾಗಿರಬೇಕು ಎಂದೇ ಹೇಳುತ್ತವೆ. ಅಹಿಂಸಾ ತತ್ವಕ್ಕೆ ವಿಶ್ವದ ಇಡೀ ಮಾನವ ಕುಲವನ್ನು ಒಂದುಗೂಡಿಸುವ ಶಕ್ತಿಯಿದೆ. ಅಂತಹ ಅಹಿಂಸಾ ತತ್ವ ಬೋಧಿಸಿದ ಭಗವಾನ್ ಮಹಾವೀರರ ಸಂದೇಶಗಳನ್ನು ನಾವೆಲ್ಲರೂ ಪಾಲಿಸಬೇಕಿದೆ.

- ಡಾ.ಪಿ.ಶಿವರಾಜು, ಅಪರ ಜಿಲ್ಲಾಧಿಕಾರಿ

ಬಿಟಿಎಲ್ ಸಂಯುಕ್ತ ಪಿಯು ಕಾಲೇಜಿಗೆ ಉತ್ತಮ ಫಲಿತಾಂಶ








ಮೈಸೂರು, ಏ.10–ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಮೈಸೂರಿನ ಕೆಸರೆ, ನಾಯ್ಡುನಗರ ಮುಖ್ಯ ರಸ್ತೆಯಲ್ಲಿರುವ ಬಿಟಿಎಲ್ ಸಂಯುಕ್ತ ಪದವಿ ಪೂರ್ವ ಕಾಲೇಜು ಉತ್ತಮ ಫಲಿತಾಂಶ ಗಳಿಸಿದೆ. ಈ ಕಾಲೇಜಿನ ವಿದ್ಯಾರ್ಥಿಗಳಾದ ಮೊಹಮ್ಮದಿ ರಾಬಿಯಾ ಶೇ.86.33 ಅಂಕ, ಎಸ್.ರಕ್ಷಿತಾ ಶೇ.84, ಸಿ.ಅಮೂಲ್ಯ ಶೇ.71, ಸೈಯ್ಯದ್ ಮೊಹಮ್ಮದ್ ಝೈನ್ ಶೇ.66.50, ಮೊಹಮ್ಮದ್ ನವಾಜ್ ಶೇ.65.33, ಸೈಯ್ಯದ್ ಅವೇಸ್ ಸುಲ್ತಾನ ಶೇ.62.83 ಅಂಕ ಗಳಿಸಿದ್ದಾರೆ ಈ ವಿದ್ಯಾರ್ಥಿಗಳನ್ನು ಕಾಲೇಜಿನ ಆಡಳಿತ ಮಂಡಳಿ ಹಾಗೂ ಬೋಧಕ ವೃಂದ ಅಭಿನಂದಿಸಿದೆ.

ಎಸ್.ಇಂಚರಾಗೆ 525 ಅಂಕ



ಮೈಸೂರು, ಏ.10–ದ್ವಿತೀಯ ಪಿಯುಸಿಯಲ್ಲಿ ಮೈಸೂರಿನ ಲರ್ನರ್ಸ್ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿನಿ ಎಸ್.ಇಂಚರ, ವಿಜ್ಞಾನ ವಿಭಾಗದಲ್ಲಿ 525 ಅಂಕ ಗಳಿಸಿ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ. ಈಕೆ ಹೆಬ್ಬಾಳು ನಿವಾಸಿ ತೋಟಗಾರಿಕೆ ಇಲಾಖೆಯ ಅಧಿಕಾರಿ ಕೆ.ಎಂ.ಸತೀಶ್ ಮತ್ತು ಎಂ.ಆರ್.ಶೀಲ ದಂಪತಿ ಪುತ್ರಿ. ಈಕೆಯನ್ನು ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷ ಕೆ.ಬಿ.ಲಿಂಗರಾಜು ಅಭಿನಂದಿಸಿದ್ದಾರೆ.

ಚೈತ್ರಾ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ



ಮಂಡ್ಯ, ಏ.10(ಎಂಕೆ)– ದ್ವಿತೀಯ ಪಿಯುಸಿ ಪರೀಕ್ಷೆ ವಿಜ್ಞಾನ ವಿಭಾಗದಲ್ಲಿ ಮಂಡ್ಯ ತಾಲೂಕಿನ ಸಿದ್ದಯ್ಯನಕೊಪ್ಪಲು ಗ್ರಾಮದ ದಿ.ನಂಜೇಗೌಡ ಹಾಗು ಶಿವಮ್ಮರವರ ಪುತ್ರಿ ಹಾಗೂ ಮಂಡ್ಯ ಅನಿಕೇತನ ಕಾಲೇಜಿನ ವಿದ್ಯಾರ್ಥಿನಿ ಚೈತ್ರಾ, 578(ಶೇ.96.33) ಅಂಕಗಳಿಸಿ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ.

ಕನ್ನಡದಲ್ಲಿ 100ಕ್ಕೆ 98, ಇಂಗ್ಲಿಷ್‌ನಲ್ಲಿ 93, ಭೌತಶಾಸ್ತ್ರ–95, ರಸಾಯನಶಾಸ್ತ್ರ–96, ಗಣಿತಶಾಸ್ತ್ರ–100ಕ್ಕೆ 100 ಹಾಗೂ ಜೀವಶಾಸ್ತ್ರದಲ್ಲಿ 96 ಅಂಕ ಗಳಿಸಿದ್ದಾರೆ. ವಿದ್ಯಾರ್ಥಿನಿಯ ಸಾಧನೆಗೆ ನಿವೃತ್ತ ಜನರಲ್ ಮ್ಯಾನೇಜರ್ ಡಾ.ಎಸ್.ಟಿ.ರಾಮಚಂದ್ರ ಅಭಿನಂದಿಸಿದ್ದಾರೆ.

ಗಂಡು ಮಗುವಿನ ಭ್ರೂಣ ಪತ್ತೆ

ಮೈಸೂರು, ಏ.10– ಮನೆಯೊಂದರ ಬಳಿ ನಿರ್ಜೀವ ಗಂಡು ಮಗುವಿನ ಭ್ರೂಣ ಪತ್ತೆಯಾಗಿರುವ ಬಗ್ಗೆ ಮೈಸೂರಿನ ಹೆಬ್ಬಾಳ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಹೆಬ್ಬಾಳದ ಲಕ್ಷ್ಮಿಕಾಂತನಗರದ ಶಿವಶಂಕರ್ ಎಂಬುವವರ ಮನೆ ಬಳಿ ಯಾರೋ ಭ್ರೂಣವನ್ನಿಟ್ಟು ಹೋಗಿದ್ದಾರೆ. ಈ ಸಂಬಂಧ ದೂರು ನೀಡಿರುವ ಶಿವಶಂಕರ್, ಮನೆಯ ಹಿಂದಿನ ರಸ್ತೆಯಲ್ಲಿ ಅಂಗಡಿ ನಡೆಸಿಕೊಂಡಿದ್ದು ಬೆಳಗ್ಗೆ 5.45ಕ್ಕೆ ಅಲ್ಲಿಗೆ ಹೋಗಿ ಬೆಳಗ್ಗೆ 10 ಗಂಟೆಯಲ್ಲಿ ಉಪಾಹಾರಕ್ಕೆಂದು ಮನೆಗೆ ಬಂದೆನು. ಆಗ ಮನೆ ಮೋರಿಯ ಮೇಲೆ ಕೋಳಿ ಸಾಕಾಣಿಕೆಗೆ ಇಟ್ಟಿದ್ದ ಕಬ್ಬಿಣದ ಕೇಜ್ ಮೇಲೆ ಕೆಲವು ಗಂಟೆಗಳ ಹಿಂದೆ ಜನಿಸಿರುವ ಗಂಡು ಮಗುವಿನ ಭ್ರೂಣ ಕಾಣಿಸಿತು. ಅಕ್ಕಪಕ್ಕ ವಿಚಾರಿಸಿದರೂ ಈ ಬಗ್ಗೆ ಯಾರಿಗೂ ಮಾಹಿತಿ ಇಲ್ಲ ಎಂದು ತಿಳಿಸಿದ್ದಾರೆ. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿರುವ ಹೆಬ್ಬಾಳ್ ಠಾಣೆ ಪೊಲೀಸರು, ಮುಂದಿನ ಕ್ರಮ ಕೈಗೊಂಡಿದ್ದಾರೆ.

ಕಲಿಸು ಫೌಂಡೇಷನ್ ಸಂಸ್ಥಾಪಕ ನಿಖಿಲೇಶ್‌ಗೆ ಶ್ರೀ ಮಹಾವೀರ ಅಹಿಂಸಾ ಪ್ರಶಸ್ತಿ ಪ್ರದಾನ



ಶ್ರೀ ಮಹಾವೀರ ಸೇವಾ ಸಂಸ್ಥಾನ್ ಮೈಸೂರು ವತಿಯಿಂದ ಕಲಿಸು ಫೌಂಡೇಶನ್ ಸಂಸ್ಥಾಪಕ ಎಂ.ಎಂ.ನಿಖಿಲೇಶ್‌ಗೆ 'ಶ್ರೀ ಮಹಾವೀರ ಅಹಿಂಸಾ ಪ್ರಶಸ್ತಿ' ಪ್ರದಾನ ಮಾಡಲಾಯಿತು.

ಮೈಸೂರು, ಏ.10(ಎಂಕೆ)– ಭಗವಾನ್ ಶ್ರೀ ಮಹಾವೀರ ತೀರ್ಥಂಕರ 2624ನೇ ಜಯಂತಿ ಅಂಗವಾಗಿ ಶ್ರೀ ಮಹಾವೀರ ಸೇವಾ ಸಂಸ್ಥಾನ್ ಮೈಸೂರು ವತಿಯಿಂದ ಕಲಿಸು ಫೌಂಡೇಶನ್ ಸಂಸ್ಥಾಪಕ ಎಂ.ಎಂ. ನಿಖಿಲೇಶ್ ಅವರಿಗೆ 'ಶ್ರೀ ಮಹಾವೀರ ಅಹಿಂಸಾ ಪ್ರಶಸ್ತಿ' ಪ್ರದಾನ ಮಾಡಲಾಯಿತು.

ನಗರದ ಚಂದ್ರಗುಪ್ತ ರಸ್ತೆಯಲ್ಲಿರುವ ಎಂ.ಎಲ್.ವರ್ಧಮಾನಯ್ಯ ಸ್ಮಾರಕ ಭವನದಲ್ಲಿ ಗುರುವಾರ ಆಯೋಜಿಸಿದ್ದ ಸಮಾರಂಭದಲ್ಲಿ ಸಾನ್ನಿಧ್ಯ ವಹಿಸಿದ್ದ ಶ್ರೀ ಕನಕಗಿರಿ ಜೈನ ಮಠದ ಶ್ರೀ ಸಿದ್ಧಾಂತ ಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ ಪ್ರಶಸ್ತಿ ಪ್ರದಾನ ಮಾಡಿದರು.

ಸಮಾರಂಭದಲ್ಲಿ ಭಾಗವಹಿಸಿದ್ದ ಮಾಜಿ ಶಾಸಕರೂ ಆದ ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ ಮಾತನಾಡಿ, ಮಹಾವೀರರ ಜಯಂತಿ ಅಂಗವಾಗಿ ಬೆಳಗ್ಗೆಯಿಂದ ಆರಂಭವಾಗಿರುವ ಧಾರ್ಮಿಕ ಕೈಂಕರ್ಯಗಳು ಇಡೀ ದಿನ ನಿರಂತರವಾಗಿ ನಡೆದಿದ್ದು, ಜೈನ ಸಮುದಾಯದ ಒಗ್ಗಟ್ಟು ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ದೇಶದಲ್ಲಿ ಅನೇಕ ಜೈನ ದೇವಾಲಯಗಳು ಇದ್ದು, ವಿಶೇಷ ಆಕರ್ಷಣೆ ಕಲೆಯನ್ನು ಹೊಂದಿವೆ. ಜೈನ ಸಮಾಜ ಶ್ರೇಷ್ಠ ಸಮಾಜವಾಗಿದ್ದು, ಈ ಜೈನ ಸಮಾಜದಿಂದ ದೇಶಕ್ಕೆ ಯಾವುದೇ ತೊಂದರೆ ಇಲ್ಲ. ಯಾರಿಗೂ ತೊಂದರೆ ನೀಡದ ಜೈನರೊಂದಿಗೆ ಇರುವುದೇ ವಿಶೇಷ. ಶಾಸಕನಾಗಿದ್ದ ಅವಧಿಯಲ್ಲಿ ಸಮಾಜಕ್ಕೆ ಅನುಕೂಲವಾಗುವ ಕೆಲ ಕಾಮಗಾರಿಗಳನ್ನು ನಡೆಸಿದ್ದು, ತೃಪ್ತಿ ತಂದಿದೆ ಎಂದು ತಿಳಿಸಿದರು.

ಸಮಾರಂಭದಲ್ಲಿ ಶ್ರೀ ದಿಗಂಬರ ಜೈನ ಸಮಾಜದ ಜಿಲ್ಲಾಧ್ಯಕ್ಷ ಎಂ.ಆರ್. ಸುನೀಲ್ ಕುಮಾರ್, ಪದ್ಮಶ್ರೀ ಜೈನ ಮಹಿಳಾ ಸಮಾಜ ಹಂಗಾಮಿ ಜಿಲ್ಲಾಧ್ಯಕ್ಷರಾದ ಪದ್ಮ ಧನ್ಯಕುಮಾರ್, ಎಂ.ಎಲ್. ಬೋರ್ಡಿಂಗ್ ಹೋಂ ಸಹ ಕಾರ್ಯದರ್ಶಿ ಜಯರತ್ನ ಮತ್ತಿತರರಿದ್ದರು.

ಹುಟ್ಟುಹಬ್ಬ ಆಚರಣೆ...



ಮೈಸೂರು ಮಹಾ ನಗರಪಾಲಿಕೆ ವಾರ್ಡ್ ನಂ.4ರ ಜೆಡಿಎಸ್ ಮುಖಂಡ ಡಾ.ಎಸ್.ಎ.ನರಸಿಂಹೇಗೌಡ ಅವರ ಹುಟ್ಟುಹಬ್ಬವನ್ನು ವಾರ್ಡ್‌ನಲ್ಲಿ ಅಭಿಮಾನಿಗಳು ಹಾಗೂ ಹಿತೈಷಿಗಳು ವಿಜೃಂಭಣೆಯಿಂದ ನಾನಾ ಸೇವಾ ಕಾರ್ಯಗಳ ಮೂಲಕ ಆಚರಿಸಿದರು. ಇದೇ ವೇಳೆ ವಿವಿಧ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಹಣ್ಣು ಹಂಪಲು ವಿತರಿಸಲಾಯಿತು.

ನಕಲಿ ದಾಖಲೆ ಸೃಷ್ಟಿಸಿ ಇಲ್ಲದ ನಿವೇಶನದ ಮೇಲೆ ಸಾಲ ಪಡೆದು ವಂಚನೆ

ದಂಪತಿ ವಿರುದ್ಧ ಪ್ರಕರಣ ದಾಖಲು

ಕ್ರೈಂ ಬಾಕ್ಸ್

ಮೈಸೂರು, ಏ.10– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ)ಕ್ಕೆ ಸೇರಿದ ಜಾಗಕ್ಕೆ ನಕಲಿ ದಾಖಲೆ ಸೃಷ್ಟಿಸಿಕೊಂಡು ಬ್ಯಾಂಕ್‌ನಲ್ಲಿ ಲಕ್ಷಾಂತರ ರೂ. ಸಾಲ ಪಡೆದು ವಂಚಿಸಿರುವ ಆರೋಪದಡಿ ದಂಪತಿ ವಿರುದ್ಧ ಸರಸ್ವತಿಪುರಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕುವೆಂಪುನಗರ ಕೆಹೆಚ್‌ಬಿ ಕಾಲೋನಿ ಕಾಂಪ್ಲೆಕ್ಸ್‌ನ ಬಾಲು ಹಾಗೂ ಶಿಲ್ಪಾ ದಂಪತಿ ವಿರುದ್ಧ ಕರ್ನಾಟಕ ಬ್ಯಾಂಕ್, ರಾಮಾನುಜ ರಸ್ತೆ ಶಾಖೆಯ ಮ್ಯಾನೇಜರ್ ಸರಸ್ವತಿಪುರಂ ಪೊಲೀಸ್ ಠಾಣೆಯಲ್ಲಿ ವಂಚನೆ ಪ್ರಕರಣ ದಾಖಲಿಸಿದ್ದಾರೆ.

ಈ ದಂಪತಿ ಬೋಗಾದಿಯ ರಾಜರಾಜೇಶ್ವರಿನಗರದ ನಿವೇಶನವೊಂದರ ದಾಖಲೆಗಳನ್ನು ಬ್ಯಾಂಕ್‌ನಲ್ಲಿ ಅಡಮಾನವಿಟ್ಟು ಸಾಲ ಪಡೆದಿದ್ದರು. ಮಂಜೂರಾಗಿದ್ದ 82.22 ಲಕ್ಷ ರೂ.ಗಳಲ್ಲಿ 60.55 ಲಕ್ಷ ಹಣವನ್ನು ಅವರ ಖಾತೆಗೆ ವರ್ಗಾವಣೆ ಮಾಡಲಾಗಿತ್ತು. ಆದರೆ ಲೋನ್ ಹಣವನ್ನು ಸರಿಯಾಗಿ ಪಾವತಿಸದ ಕಾರಣ ಅಡಮಾನ ಇಟ್ಟಿರುವ ನಿವೇಶನದ ಪರಿಶೀಲನೆಗೆ ಹೋದಾಗ ಸದರಿ ಜಾಗದಲ್ಲಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಸ್ವತ್ತು ಎಂಬ ಫಲಕ ಹಾಕಲಾಗಿತ್ತು. ಬಳಿಕ ಮುಡಾದಿಂದ ದಾಖಲಾತಿ ಪಡೆದು ಪರಿಶೀಲಿಸಿದಾಗ ಅನುಮೋದಿತ ಯೋಜನೆ ಪ್ರಕಾರ ಸರ್ವೆ ನಂ.268/4/5ರಲ್ಲಿ ನಂ.1ಸಿ ಸೈಟ್ ಇಲ್ಲದಿದ್ದರೂ ಈ ದಂಪತಿ ದಾಖಲಾತಿ ಸೃಷ್ಟಿಸಿಕೊಂಡು, ಅದನ್ನು ಬ್ಯಾಂಕ್‌ನಲ್ಲಿ ಅಡಮಾನವಿಟ್ಟು ಸಾಲ ಪಡೆದಿದ್ದು, ಅದರಲ್ಲಿ 58.46 ಲಕ್ಷ ರೂ. ಪಾವತಿ ಮಾಡದೆ ವಂಚಿಸಿದ್ದಾರೆ ಎಂದು ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

ವಾರದಲ್ಲಿ 2ನೇ ಪ್ರಕರಣ: ನಿವೇಶನದ ನಕಲಿ ದಾಖಲೆಗಳನ್ನು ಕರ್ನಾಟಕ ಬ್ಯಾಂಕ್ ಸರಸ್ವತಿಪುರಂ ಶಾಖೆಯಲ್ಲಿ ಅಡಮಾನವಿಟ್ಟು 26 ಲಕ್ಷ ರೂ. ಸಾಲ ಪಡೆದು ವಂಚಿಸಿರುವುದಾಗಿ ಮೀನಾಕ್ಷಿ ಹಾಗೂ ಗಣೇಶ್ ಬಾಬು ದಂಪತಿ ವಿರುದ್ಧ ಕೆಲ ದಿನಗಳ ಹಿಂದೆ ಕುವೆಂಪುನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಆ ಪ್ರಕರಣದಲ್ಲೂ ಬೋಗಾದಿ ರಾಜರಾಜೇಶ್ವರಿ ನಗರದಲ್ಲಿ ಇಲ್ಲದ ನಿವೇಶನಕ್ಕೆ ನಕಲಿ ದಾಖಲೆಗಳನ್ನು ಸೃಷ್ಟಿಸಿಕೊಂಡು ವಂಚಿಸಿರುವುದು ಗಮನಾರ್ಹವಾಗಿದೆ.

ಮಾತನಾಡುತ್ತಿದ್ದ ವೈದ್ಯರ ಮೊಬೈಲ್ ಕಿತ್ತುಕೊಂಡು ಖದೀಮ ಪರಾರಿ



ಮೈಸೂರು, ಏ.10– ವೈದ್ಯರೊಬ್ಬರ ಮೊಬೈಲ್ ಕಿತ್ತುಕೊಂಡು ಹೋಗಿರುವ ಘಟನೆ ಮೈಸೂರಿನ ಜಯಲಕ್ಷ್ಮೀಪುರಂನಲ್ಲಿ ಬುಧವಾರ ರಾತ್ರಿ ನಡೆದಿದೆ. ವಿಜಯನಗರ ಮೂರನೇ ಹಂತದ ನಿವಾಸಿ ಡಾ.ಭಾಸ್ಕರ್, ಜಯಲಕ್ಷ್ಮಿಪುರಂ ಜುಡಿಯೋ ಷೋರೂಮ್ ಎದುರಿನ ಟ್ರಯಾಂಗಲ್ ಪಾರ್ಕ್ ಬಳಿ ಇರುವ ಸ್ನೇಹಿತರನ್ನು ಮಾತನಾಡಿಸಿ, ಯಾವುದೋ ಕರೆ ಬಂದಿದ್ದರಿಂದ ಅವರ ಮನೆ ಮುಂದೆ ಮಾತನಾಡುತ್ತಿದ್ದಾಗ ಕಪ್ಪು ಬಣ್ಣದ ಹೋಂಡಾ ಡಿಯೋ ಸ್ಕೂಟರ್‌ನಲ್ಲಿ ಬಂದ ಖದೀಮ, ಏಕಾಏಕಿ ಮೊಬೈಲ್ ಕಿತ್ತುಕೊಂಡು ಪರಾರಿಯಾಗಿದ್ದಾನೆ. ಕಳ್ಳತನವಾಗಿರುವುದು 80 ಸಾವಿರ ರೂ. ಸ್ಯಾಮ್ಸಂಗ್ ಗ್ಯಾಲಕ್ಸಿ ಎಸ್ 25 ಅಲ್ಟ್ರಾ ಮೊಬೈಲ್ ಆಗಿದ್ದು, ಎರಡು ತಿಂಗಳ ಹಿಂದಷ್ಟೇ ಖರೀದಿಸಿದ್ದಾಗಿ ಅವರು ದೂರಿನಲ್ಲಿ ತಿಳಿಸಿದ್ದಾರೆ. ಈ ಸಂಬಂಧ ಜಯಲಕ್ಷ್ಮೀಪುರಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅವ ನಮ್ಮವನಲ್ಲ; ರಾಣಾನಿಂದ ಅಂತರ ಕಾಯ್ದುಕೊಂಡ ಪಾಕ್!



ತಹವೂರ್ ರಾಣಾ

ನವದೆಹಲಿ, ಏ.10– ಅಮೆರಿಕದಿಂದ ಗಡಿಪಾರಾಗಿ ಭಾರತಕ್ಕೆ ಕರೆತಂದಿರುವ 26/11 ಮುಂಬೈ ದಾಳಿ ರೂವಾರಿ ತಹವೂರ್ ರಾಣಾ ಪಾಕಿಸ್ತಾನಿ ಪ್ರಜೆಯಲ್ಲ, ಆತ ಕೆನಡಾ ಪ್ರಜೆ ಎಂದು ಪಾಕಿಸ್ತಾನ ಸರ್ಕಾರ ಹೇಳಿದೆ.

160 ಮಂದಿಯ ಸಾವಿಗೆ ಕಾರಣವಾದ 26/11 ಮುಂಬೈ ದಾಳಿ ಪ್ರಕರಣದ ಪ್ರಮುಖ ರೂವಾರಿಯಾಗಿರುವ ಆರೋಪಿ ತಹವೂರ್ ರಾಣಾ ಪಾಕಿಸ್ತಾನ ಮೂಲದವನೇ ಆಗಿದ್ದರೂ ಆತ ಕೆನಡಾ ಪ್ರಜೆ ಎಂದು ಹೇಳುವ ಮೂಲಕ ಪ್ರಕರಣದಿಂದ ಪಾಕಿಸ್ತಾನ ಅಂತರ ಕಾಯ್ದುಕೊಂಡಿದೆ.

ಭಾರತದ ಮೇಲೆ ನಡೆದ ಅತ್ಯಂತ ಭಯಾನಕ ಭಯೋತ್ಪಾದಕ ದಾಳಿಗಳಲ್ಲಿ ಒಂದಾದ ಮುಂಬೈ ದಾಳಿ ಪ್ರಕರಣದ ಪ್ರಮುಖ ಆರೋಪಿ ತಹವೂರ್ ರಾಣಾನನ್ನು ಅಮೆರಿಕ ಭಾರತಕ್ಕೆ ಗಡಿಪಾರು ಮಾಡಿದೆ. ಇದೇ ವಿಚಾರವಾಗಿ ಮೊದಲ ಬಾರಿಗೆ ಪಾಕಿಸ್ತಾನ ವಿದೇಶಾಂಗ ಇಲಾಖೆ ಪ್ರತಿಕ್ರಿಯೆ ನೀಡಿದೆ.

ತಹವೂರ್ ರಾಣಾ ಪಾಕಿಸ್ತಾನದವನಲ್ಲ, ಆತ ಕೆನಡಾ ಪ್ರಜೆಯಾಗಿದ್ದಾನೆ. ಆತನಿಗೆ ಕೆನಡಾ ಪೌರತ್ವ ಇದೆ. ಕಳೆದ ಎರಡು ದಶಕಗಳಿಂದ ತಹವೂರ್ ರಾಣಾ ತನ್ನ ಪಾಕಿಸ್ತಾನಿ ದಾಖಲೆಗಳನ್ನು ನವೀಕರಿಸಿಲ್ಲ. ಹೀಗಾಗಿ ಆತ ಪಾಕಿಸ್ತಾನದ ಪ್ರಜೆಯಲ್ಲ, ಕೆನಡಾದ ಪ್ರಜೆಯಾಗಿದ್ದಾನೆ ಎಂದು ಹೇಳಿದೆ.

ಅತ್ತ ಪಾಕಿಸ್ತಾನ ವಿದೇಶಾಂಗ ಇಲಾಖೆ ತಹವೂರ್ ರಾಣಾ ಪಾಕಿಸ್ತಾನದವನಲ್ಲ ಎಂದು ಹೇಳುತ್ತಿದ್ದರೂ ಇತ್ತ ಪ್ರಕರಣದ ತನಿಖೆ ನಡೆಸುತ್ತಿರುವ ಭಾರತೀಯ ಅಧಿಕಾರಿಗಳು ಮಾತ್ರ ತಹವೂರ್ ರಾಣಾ ಪಾಕಿಸ್ತಾನದವನೇ, ಮುಂಬೈ ದಾಳಿ ಪ್ರಕರಣದಲ್ಲಿ ಪಾಕಿಸ್ತಾನದ ನೇರ ಕೈವಾಡವಿದೆ. ಅಕ್ಟೋಬರ್ 2009 ರಲ್ಲಿ ಮತ್ತೊಬ್ಬ ಸಂಚುಕೋರ ಡೇವಿಡ್ ಕೋಲ್ಮನ್ ಹೆಡ್ಲಿಯೊಂದಿಗೆ ಸೇರಿ ತಹವೂರ್ ರಾಣಾ ಭೀಕರ ಉಗ್ರ ದಾಳಿ ನಡೆಸಿದ್ದ ಎಂದು ಆರೋಪಿಸಿದೆ. ಅಲ್ಲದೆ ಮುಂಬೈ ದಾಳಿ ಪ್ರಕರಣ ಪ್ರಮುಖ ರೂವಾರಿ ಈತನೇ ಆಗಿದ್ದು, ಈತ ಪಾಕಿಸ್ತಾನದ ಸೇನೆ ಮತ್ತು ಪಾಕಿಸ್ತಾನದ ಗುಪ್ತಚರ ಸಂಸ್ಥೆ ಐಎಸ್‌ಐನೊಂದಿಗೆ ಸಂಪರ್ಕಹೊಂದಿದ್ದ. ಹೀಗಾಗಿ 26/11 ಮುಂಬೈ ದಾಳಿಯಲ್ಲಿ ಪಾಕಿಸ್ತಾನದ ನೇರ ಕೈವಾಡವಿದೆ ಎಂದು ಹೇಳಿದ್ದಾರೆ.

ಪಾಕಿಸ್ತಾನಕ್ಕೆ ಸಿಕ್ಕಿ ಬೀಳುವ ಭೀತಿ: ತಹವೂರ್ ರಾಣಾನನ್ನು ಭಾರತೀಯ ಅಧಿಕಾರಿಗಳು ತೀವ್ರ ವಿಚಾರಣೆಗೊಳಪಡಿಸಿದ ವೇಳೆ ಆತ ಪಾಕಿಸ್ತಾನದ ಕೈವಾಡದ ಬಗ್ಗೆ ಮಾಹಿತಿ ನೀಡುವ ಸಾಧ್ಯತೆ ಇದೆ. ಇದೇ ಕಾರಣಕ್ಕೆ ತಹವೂರ್ ರಾಣಾನಿಂದ ಪಾಕಿಸ್ತಾನ ಅಂತರ ಕಾಯ್ದುಕೊಳ್ಳುತ್ತಿದೆ ಎಂದು ಹೇಳಲಾಗಿದೆ.

ಪಾಕಿಸ್ತಾನಿ–ಕೆನಡಾದ ವೈದ್ಯ ತಹವೂರ್ ರಾಣಾ ಚಿಕಾಗೋದಲ್ಲಿ ಟ್ರಾವೆಲ್ ಏಜೆನ್ಸಿಯನ್ನು ಹೊಂದಿದ್ದ. ಇದೇ ಸಂಸ್ಥೆಯನ್ನು ಮುಂಬೈ ದಾಳಿಯ ಮಾಸ್ಟರ್ ಮೈಂಡ್‌ಗಳಲ್ಲಿ ಒಬ್ಬನಾದ ಡೇವಿಡ್ ಕೋಲ್ಮನ್ ಹೆಡ್ಲಿ ದಾಳಿಗೆ ಮೊದಲು ಭಾರತ ಪ್ರಯಾಣಕ್ಕಾಗಿ ಬಳಸಿಕೊಂಡಿದ್ದ ಎಂದು ಹೇಳಲಾಗಿದೆ.

ರಾಣಾ ಗಡಿಪಾರು: ಯುಪಿಎ ಸರ್ಕಾರದ ನಿಪುಣ ರಾಜತಾಂತ್ರಿಕ ಪ್ರಯತ್ನದ ಫಲ

ಪಿ.ಚಿದಂಬರಂ ಪ್ರತಿಪಾದನೆ



ನವದೆಹಲಿ, ಏ.10– 2008ರಲ್ಲಿ ಮುಂಬೈಯಲ್ಲಿ ನಡೆದಿದ್ದ ಭಯೋತ್ಪಾದಕರ ದಾಳಿ (26/11) ಪ್ರಕರಣದಲ್ಲಿ ಭಾರತಕ್ಕೆ ಬೇಕಾಗಿರುವ ಪ್ರಮುಖ ಆರೋಪಿ ಪಾಕಿಸ್ತಾನ ಮೂಲದ ಕೆನಡಾ ಉದ್ಯಮಿ ತಹವೂರ್ ರಾಣಾ ಅಮೆರಿಕದಿಂದ ಗಡಿಪಾರಾಗಿದ್ದು ಹಿಂದಿನ ಯುಪಿಎ ಸರ್ಕಾರದ ಪ್ರಬುದ್ಧ ಮತ್ತು ನಿಪುಣ ರಾಜತಾಂತ್ರಿಕ ಪ್ರಯತ್ನದ ಫಲವಾಗಿದೆ. ಆದರೆ ಈ ನಿಟ್ಟಿನಲ್ಲಿ ಯಾವುದೇ ಪ್ರಯತ್ನ ಮಾಡದ ಪ್ರಧಾನಿ ನರೇಂದ್ರ ಮೋದಿ ಸರ್ಕಾರ ಫಲ ಅನುಭವಿಸುತ್ತಿದೆ ಎಂದು ಕಾಂಗ್ರೆಸ್ ಹೇಳಿದೆ.

ಕಾಂಗ್ರೆಸ್ ಮುಖಂಡ ಪಿ. ಚಿದಂಬರಂ ಈ ಕುರಿತು ಹೇಳಿಕೆ ಬಿಡುಗಡೆ ಮಾಡಿದ್ದು, ರಾಣಾ ಹಸ್ತಾಂತರದಲ್ಲಿ ಈಗಿನ ಕೇಂದ್ರ ಸರ್ಕಾರ ಯಾವುದೇ ಪ್ರಯತ್ನವನ್ನೂ ನಡೆಸಿಲ್ಲ. ಜತೆಗೆ ಅದರ ಫಲಿತಾಂಶವನ್ನೂ ನಿರೀಕ್ಷಿಸಿರಲಿಲ್ಲ. ಹೀಗಿದ್ದರೂ ನರೇಂದ್ರ ಮೋದಿ ಸರ್ಕಾರವು ಇದರ ಲಾಭ ಪಡೆಯಲು ತುದಿಗಾಲಲ್ಲಿ ನಿಂತಿದೆ. ಆದರೆ ಇದರ ವಾಸ್ತವವೇ ಬೇರೆ ಇದೆ ಎಂದಿದ್ದಾರೆ.

ರಾಣಾನ ಗಡಿಪಾರು ಪ್ರಕ್ರಿಯೆಯ ಹಿಂದೆ ಒಂದೂವರೆ ದಶಕದ ಹಿಂದೆ ನಡೆಸಿದ ಕಠಿಣ ರಾಜತಾಂತ್ರಿಕ ಪ್ರಯತ್ನಗಳು ಅಡಗಿವೆ. ಕಾನೂನು ಮತ್ತು ಗುಪ್ತಚರ ಇಲಾಖೆಗಳ ಪ್ರಯತ್ನವೂ ಇದೆ. ಯುಪಿಎ ಸರ್ಕಾರವು ಅಮೆರಿಕದೊಂದಿಗೆ ನಿರಂತರ ಮಾತುಕತೆಯ ಫಲ ಈಗ ಲಭಿಸಿದೆ ಎಂದಿದ್ದಾರೆ.

ರಾಣಾ ಗಡಿಪಾರಿನಲ್ಲಿ ಪ್ರಮುಖ ಪಾತ್ರ ವಹಿಸಿದ ವಕೀಲ ದಯಾನ್ ಕೃಷ್ಣನ್ ಕರ್ನಾಟಕ ನಂಟು!



ನವದೆಹಲಿ, ಏ.10– 2008ರಲ್ಲಿ ಮುಂಬೈಯಲ್ಲಿ ನಡೆದಿದ್ದ ಭಯೋತ್ಪಾದಕರ ದಾಳಿ (26/11) ಪ್ರಕರಣದಲ್ಲಿ ಭಾರತಕ್ಕೆ ಬೇಕಾಗಿದ್ದ ಪ್ರಮುಖ ಆರೋಪಿ ತಹವೂರ್ ರಾಣಾ ಅಮೆರಿಕದಿಂದ ಗಡಿಪಾರಾಗಲು ಅಲ್ಲಿನ ನ್ಯಾಯಾಲಯದಲ್ಲಿ ವಾದ ಮಂಡಿಸಿದ ಹಿರಿಯ ವಕೀಲ ದಯಾನ್ ಕೃಷ್ಣನ್ ಅವರೇ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ವಕೀಲರಾಗಿ ದೆಹಲಿಯಲ್ಲಿ ವಾದ ಮಂಡಿಸಲಿದ್ದಾರೆ.

ಇದೇ ಪ್ರಕರಣದಲ್ಲಿ ಭಾಗಿಯಾಗಿದ್ದ ರಾಣಾ ಆಪ್ತ ಡೇವಿಡ್ ಹೆಡ್ಲಿ ಅಲಿಯಾಸ್ ದಾವೂದ್ ಗಿಲಾನಿ ಅರ್ಜಿಯನ್ನು ಅಮೆರಿಕ ನ್ಯಾಯಾಲಯ ವಜಾಗೊಳಿಸಿದ್ದು, ಈತನನ್ನೂ ಶೀಘ್ರದಲ್ಲಿ ಭಾರತಕ್ಕೆ ಕರೆತರಲಾಗುವುದು. 26/11 ಪ್ರಕರಣದ ಪ್ರಮುಖ ರೂವಾರಿ ರಾಣಾನನ್ನು ಭಾರತಕ್ಕೆ ಕರೆತಂದು ನ್ಯಾಯಾಂಗ ಪ್ರಕ್ರಿಯೆಗೆ ಒಳಪಡಿಸುವ ಹಲವು ವರ್ಷಗಳ ಪ್ರಯತ್ನ ಕಡೆಗೂ ಕೈಗೂಡಿದೆ ಎಂದು ಎನ್‌ಐಎ ಗುರುವಾರ ಹೇಳಿದೆ.

ಕೃಷ್ಣನ್ ಅವರು 1993ರಲ್ಲಿ ಬೆಂಗಳೂರಿನ ರಾಷ್ಟ್ರೀಯ ಕಾನೂನು ಶಾಲೆ ವಿಶ್ವವಿದ್ಯಾಲಯದಿಂದ ಪದವಿ ಪಡೆದವರು. ಸುಪ್ರೀಂ ಕೋರ್ಟ್‌ನಲ್ಲಿ ನ್ಯಾಯಮೂರ್ತಿಯಾಗಿದ್ದ ಸಂತೋಷ್ ಹೆಗ್ಡೆ ಅವರು ವಕೀಲರಾಗಿದ್ದಾಗ ಅವರೊಂದಿಗೆ ಕೆಲಸ ಮಾಡಿ ಅನುಭವ ಪಡೆದವರು. 1999ರಲ್ಲಿ ಸ್ವತಂತ್ರ ವಕೀಲರಾಗಿ ಕೆಲಸ ಆರಂಭಿಸಿದರು.

2001ರ ಸಂಸತ್ ಭವನದ ಮೇಲಿನ ದಾಳಿ, ಕಾವೇರಿ ನದಿ ನೀರು ಹಂಚಿಕೆ ವಿವಾದ, ದೂರ ಸಂಪರ್ಕಕ್ಕೆ ಸಂಬಂಧಿಸಿದ ಪ್ರಕರಣಗಳನ್ನು ಇವರು ನಿರ್ವಹಿಸಿದ್ದಾರೆ. 2012ರ ದೆಹಲಿ ಸಾಮೂಹಿಕ ಅತ್ಯಾಚಾರ ಪ್ರಕರಣದಲ್ಲಿ ಸ್ಪೆಷಲ್ ಪಬ್ಲಿಕ್ ಪ್ರಾಸಿಕ್ಯೂಟರ್ ಆಗಿ ನೇಮಕಗೊಂಡಿದ್ದರು. ಇನ್ನೂ ಹಲವು ಪ್ರಮುಖ ಪ್ರಕರಣಗಳಲ್ಲಿ ಇವರು ಎನ್‌ಐಎ, ದೆಹಲಿ ಸರ್ಕಾರ ಮತ್ತು ದೆಹಲಿ ಪೊಲೀಸರ ಪರ ವಾದ ಮಂಡಿಸಿದ್ದಾರೆ.

ರವಿಶಂಕರನ್ ಗಡಿಪಾರು ಪ್ರಕರಣದಲ್ಲಿ ಬ್ರಿಟನ್ ನ್ಯಾಯಾಲಯದಲ್ಲಿ 2011ರಲ್ಲಿ ಭಾರತದ ಪರ ವಾದ ಮಂಡಿಸಿದ್ದರು. 26/11ರ ಪ್ರಕರಣದ ಪ್ರಮುಖ ರೂವಾರಿ ಡೇವಿಡ್ ಹೆಡ್ಲಿ ಗಡಿಪಾರು ವಿಷಯವಾಗಿ ಎನ್‌ಐಎ ರಚಿಸಿದ್ದ ನಾಲ್ವರು ಸದಸ್ಯರ ತಂಡದಲ್ಲಿ ದಯಾನ್ ಕೃಷ್ಣನ್ ಕೂಡ ಒಬ್ಬರಾಗಿದ್ದರು. ಷಿಕಾಗೊದಲ್ಲಿ ನಡೆದ ವಿಚಾರಣೆಯಲ್ಲಿ ಭಾಗವಹಿಸಿದ್ದರು.

ನಕ್ಕರೆ ಅದೇ ಸ್ವರ್ಗ

ಟೀಚರ್ : ಹದಿನೈದು ಹಣ್ಣುಗಳ ಹೆಸರು ಹೇಳು.

ವಿದ್ಯಾರ್ಥಿ : ಮೂಸಂಬಿ, ಕಲ್ಲಂಗಡಿ, ಸೇಬು ಮತ್ತು ಒಂದು ಡಜನ್ ಬಾಳೆಹಣ್ಣು

ಮೈಸೂರು ಮಿತ್ರ

ಶುಕ್ರವಾರ, 11 ಏಪ್ರಿಲ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ..........

ಪೂಜೆ ಮಾಡುವಾಗ ದೇವರು ಕೇಳಿಸಿಕೊಳ್ಳುತ್ತಾನೆ ಎಂದು ನಂಬೋ ನಾವುಗಳು. ಇನ್ನೊಬ್ಬರಿಗೆ ಮೋಸ ಮಾಡುವಾಗ ದೇವರು ನೋಡುತ್ತಾನೆ ಎಂದು ಏಕೆ ಯೋಚಿಸುವುದಿಲ್ಲ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಮಂತ್ರಕ್ಕಿಂತ ಉಗುಳೇ ಹೆಚ್ಚು.

ನಿಮ್ಮ ಪತ್ರಗಳು

■ ರಂಗಾಯಣದ ಚಿಣ್ಣರ ಮೇಳ ಅರ್ಜಿಗೆ ನಿಯಮ ರೂಪಿಸಿ

ಮಾನ್ಯರೆ,

ರಂಗಾಯಣದಲ್ಲಿ ಚಿಣ್ಣರ ಮೇಳಕ್ಕೆ ಅರ್ಜಿ ನೀಡಿದ್ದು 300 ಅರ್ಜಿಗಳಲ್ಲಿ ಪ್ರತಿ ವರ್ಷ 250 ಅರ್ಜಿ ಸಾರ್ವಜನಿಕರಿಗೆ, 10 ರಿಂದ 20 ಬಾಲ ಭವನ್ ಮಕ್ಕಳಿಗೆ, ಉಳಿಕೆಯಲ್ಲಿ ಉಳ್ಳವರಿಗೆ ಹಾಗೂ ರಂಗಾಯಣದಲ್ಲಿ ಕೆಲಸ ಮಾಡುವವರ ಮಕ್ಕಳಿಗೆಂದು ಕಾಯ್ದಿರಿಸಿರುತ್ತಾರೆ.

ಆದರೆ ರಂಗಾಯಣದಲ್ಲಿ ಕೆಲಸ ಮಾಡುತ್ತಿರುವವರು ಬಹುತೇಕ ನಿವೃತ್ತಿ ಹಂತದಲ್ಲಿದ್ದಾರೆ. ಅವರ ಅರ್ಜಿಗಳು ಕೂಡ ಉಳ್ಳವರ ಪಾಲಾಗುತ್ತಿದೆ. ಪ್ರತಿವರ್ಷ ಈ 250 ಅರ್ಜಿಗಳಿಗೆ ಮಧ್ಯರಾತ್ರಿಯಿಂದಲೇ ಹಲವಾರು ಜನ ಕಾಯ್ದು ಕುಳಿತ್ತಿದ್ದಾರೆ. ಆದರೆ ಇದರಲ್ಲಿ ಬಹುತೇಕರು ಅವರ ಮಕ್ಕಳನ್ನು ಒಂದಕ್ಕಿಂತ ಹೆಚ್ಚು ಬಾರಿ ಇಲ್ಲಿಗೆ ಸೇರಿಸಬೇಕೆಂದು ಹಠ ತೊಟ್ಟವರಂತೆ ಇರುತ್ತಾರೆ. ಆದರೆ ಈ ವಿಷಯದ ಬಗ್ಗೆ ತಿಳಿಯದೇ ಇರುವವರು ತಡವಾಗಿ ಬಂದರು ಅವರಿಗೆ ಅರ್ಜಿ ಸಿಗುವುದಿಲ್ಲ. ಅರ್ಜಿ ನೀಡುವುದು ಬೆಳಗ್ಗೆ 10 ಗಂಟೆಗೆ ಆದರೆ ಸುಮಾರು ನಾಲ್ಕೈದು ಗಂಟೆ ಅಷ್ಟೊತ್ತಿಗೆ ಇನ್ನೂರು ಜನ ಮೀರುತ್ತಾರೆ. ಅದರಲ್ಲಿ ಬಹುತೇಕ ಒಂದಕ್ಕಿಂತ ಹೆಚ್ಚು ಬಾರಿ ಕೆಲವರು ನಾಲ್ಕನೇ ಐದನೇ ಬಾರಿ ಅವರ ಮಕ್ಕಳನ್ನು ಇಲ್ಲಿಗೆ ಸೇರಿಸಿದ್ದರು ಮತ್ತೆ ಬೆಳಗ್ಗೆಯೇ ಬಂದು ಕುಳಿತಿರುತ್ತಾರೆ. ಮೈಸೂರಿನಲ್ಲಿ ಸುಮಾರು ಹತ್ತು ಲಕ್ಷದ ಮೇಲೆ ಜನಸಂಖ್ಯೆ ಇದ್ದು, ಇದರಲ್ಲಿ ಗ್ರಾಮೀಣ ಪ್ರದೇಶದ ಮಕ್ಕಳಿಗಂತೂ ಅವಕಾಶವಿಲ್ಲ. ಅವರಿಗೆ ಮಾಹಿತಿಯೂ ತಿಳಿಯುವುದಿಲ್ಲ. ಅವಕಾಶವೂ ಸಿಗುವುದಿಲ್ಲ. ನಗರ ಹಾಗೂ ಗ್ರಾಮೀಣ ಪ್ರದೇಶದ ಹಲವಾರು ಮಕ್ಕಳು ಹೀಗೆ ಅವಕಾಶವಂಚಿತರಾಗುತ್ತಿದ್ದಾರೆ. ಆದ್ದರಿಂದ ಈ ಮೂಲಕ ರಂಗಾಯಣದ ನಿರ್ದೇಶಕರಿಗೆ ಒತ್ತಾಯ ಮಾಡುವುದೇನೆಂದರೆ ಮುಂದಿನ ವರ್ಷದಿಂದ ಯಾರು ಮೂರಕ್ಕಿಂತ ಹೆಚ್ಚು ವರ್ಷ ಇಲ್ಲಿ ಮಕ್ಕಳನ್ನು ಚಿಣ್ಣರ ಮೇಳಕ್ಕೆ ಸೇರಿಸಿರುತ್ತಾರೋ ಅವರಿಗೆ ಕಡ್ಡಾಯವಾಗಿ ಅರ್ಜಿ ಇಲ್ಲ ಎಂದು ಹಾಗೂ ಒಂದು ಮಗುವಿಗೆ ಎರಡನೇ ಬಾರಿ ಅರ್ಜಿ ನೀಡಬೇಕಾದರೆ ಕನಿಷ್ಠ ಒಂದು ವರ್ಷ ಅಂತರ ಇದ್ದು ನಂತರ ಆ ಮಗುವಿಗೆ ಅವಕಾಶ ನೀಡಬೇಕು ಎಂಬ ನಿಯಮವನ್ನು ರೂಪಿಸಬೇಕು. ಇಲ್ಲವಾದರೆ ಹಲವಾರು ಮಕ್ಕಳಿಗೆ ಅವಕಾಶಗಳು ಸಿಗದೇ ಪೋಷಕರಿಗೂ ನಿರಾಸೆಯಾಗುತ್ತದೆ ಹಾಗೂ ಬೆಳಗ್ಗೆ 1 ಗಂಟೆಯಿಂದ ಅಲ್ಲಿ ಕೂತು ಕಾಯ್ದುಕೊಳ್ಳುವುದಕ್ಕೆ ಅವಕಾಶ ಕೊಡಲೇಬಾರದು. ಕನಿಷ್ಠ 8 ಗಂಟೆಯ ನಂತರ ಸರತಿ ಸಾಲಿನಲ್ಲಿ ನಿಲ್ಲಬೇಕು ಎಂದು ನಿಯಮ ಹೊರಡಿಸಬೇಕು

–ಅರವಿಂದ್ ಶರ್ಮ, ಸಾಮಾಜಿಕ ಚಳುವಳಿಗಾರರು, ಮೈಸೂರು.

■ ಮಕ್ಕಳ ಫಲಿತಾಂಶದ ಮುಂದೆ ಪೋಷಕರ ಹುದ್ದೆ ಯಾಕೆ

ಮಾನ್ಯರೆ,

ಪಿಯುಸಿ ಪರೀಕ್ಷೆಯ ಫಲಿತಾಂಶ ಹೊರಬಿದ್ದಿದೆ. ಕಷ್ಟಪಟ್ಟು ಹಾಗೂ ಶ್ರಮಪಟ್ಟು ಓದಿ ಹಲವಾರು ವಿದ್ಯಾರ್ಥಿಗಳು ಅಗ್ರಸ್ಥಾನದ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದಾರೆ. ಅವರ ತಂದೆ–ತಾಯಿ ಹಾಗೂ ಶಾಲೆಗಳ ಪರಿಚಯಿಸುವ ರೀತಿಯಲ್ಲಿ ಅಂಕ ಪಡೆದಿರುತ್ತಾರೆ. ಅದರಲ್ಲಿ ಕೆಲವರು ಪುರೋಹಿತರ ಮಕ್ಕಳು, ಕೂಲಿ ಕಾರ್ಮಿಕರ ಮಕ್ಕಳು, ಲಾರಿ ಡ್ರೈವರ್‌ಗಳ ಮಕ್ಕಳು, ಮನೆ ಕೆಲಸದವರ ಮಕ್ಕಳು, ಇಂಜಿನಿಯರ್ ಹಾಗೂ ಡಾಕ್ಟರ್ ಅವರ ಮಕ್ಕಳು ಎಂದು ಪೋಷಕರ ಪರಿಚಯ ಹೇಳಲಾಗುತ್ತದೆ. ಮಕ್ಕಳ ವಿದ್ಯಾಭ್ಯಾಸದ ಮುಂದೆ ಪೋಷಕರ ಹುದ್ದೆ ಹೇಳಿ ಕೀಳರಿಮೆಗೊಳಿಸುವುದೇಕೆ. ಪೋಷಕರು ಯಾವ ಹುದ್ದೆಯಲ್ಲಿದ್ದರೂ ಅವರನ್ನು ಕೀಳರಿಮೆ ಮಾಡಿ ತಿಳಿಸುವ ಅಗತ್ಯವಿಲ್ಲ. ಇಂಥವರ ಮಕ್ಕಳೇ ಎಂದು ಗುರುತಿಸಿದರೆ ಸಾಕು. ಅದರಲ್ಲೂ ಭೇದ–ಭಾವ ಮಾಡಿದರೆ ಮಕ್ಕಳಿಗೆ ಕೀಳರಿಮೆ ಅನುಭವವಾಗುತ್ತದೆ. ಮಕ್ಕಳ ರ‍್ಯಾಂಕ್ ಪಟ್ಟಿಯಲ್ಲಿ ಪೋಷಕರ ಹುದ್ದೆಗಳ ಅಗತ್ಯವಿಲ್ಲ. ಪೋಷಕರು ಪ್ರೋತ್ಸಾಹಿಸಿ ಮಕ್ಕಳನ್ನು ಮುಂದೆ ತಂದಿದ್ದಾರೆ ಎಂದು ತಿಳಿಸಿದರೆ ಸಾಕು. ಹಲವಾರು ಹುದ್ದೆಗಳ ಹೆಸರು ಹೇಳಿ ಮಕ್ಕಳಿಗೆ, ಪೋಷಕರಿಗೆ ಕೀಳರಿಮೆ ತರಿಸುವುದು ಬೇಡ.

–ಎಂ. ಎಸ್. ಉಷಾಪ್ರಕಾಶ್, ಲೇಖಕಿ ಹಾಗೂ ಕವಯಿತ್ರಿ, ಮೈಸೂರು.

■ ಪೈಪೋಟಿಯಲ್ಲಿ ಕೇಂದ್ರ, ರಾಜ್ಯ ಸರ್ಕಾರ ಬೆಲೆ ಏರಿಕೆ

ಮಾನ್ಯರೆ,

ರಾಜ್ಯ ಸರ್ಕಾರ ಹಾಲು, ಮೊಸರು, ವಿದ್ಯುತ್ ಮೊದಲಾದ ಅಗತ್ಯ ವಸ್ತುಗಳ ಬೆಲೆ ಏರಿಕೆ ಮಾಡಿರುವುದರ ವಿರುದ್ಧ ರಾಜ್ಯದ ಬಿಜೆಪಿ ಪಕ್ಷದ ನಾಯಕರು ರಾಜ್ಯ ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಸುತ್ತಿದ್ದಾರೆ. ಇದೇ ವೇಳೆ ಕೇಂದ್ರದ ಬಿಜೆಪಿ ಸರ್ಕಾರವೂ ಸಹ ಪ್ರತಿ ಗ್ಯಾಸ್ ಸಿಲಿಂಡರ್ ಬೆಲೆಯನ್ನು ರೂ.50, ಪೆಟ್ರೋಲ್ ಮತ್ತು ಡಿಸೇಲ್‌ನ ಅಬಕಾರಿ ಸುಂಕ ರೂ.2 ಹೆಚ್ಚಳ ಮಾಡಲಾಗಿದೆ. ಬೆಲೆ ಏರಿಕೆ ವಿಚಾರದಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಪೈಪೋಟಿಗೆ ಬಿದ್ದವರಂತೆ ಕಾಣುತ್ತಿದೆ. ಇದು ಜನಸಾಮಾನ್ಯರಿಗೆ ಎರಡು ಕಡೆಯಿಂದಲೂ ಹೊರೆ ಬೀಳಲಿದೆ. ಅವರ ಮೇಲೆ ಇವರು, ಇವರ ಮೇಲೆ ಅವರು ಬೆಲೆ ಏರಿಕೆಗೆ ಕಾರಣ ಎನ್ನುತ್ತಾರೆ. ಆದರೆ ಇದನ್ನು ಅನುಭವಿಸುತ್ತಿರುವವರು ಸಾಮಾನ್ಯ ಜನರು.

–ಬೂಕನಕೆರೆ ವಿಜೇಂದ್ರ, ಕುವೆಂಪು ನಗರ, ಮೈಸೂರು

■ ಧರ್ಮಸ್ಥಳ ಮಂಜುನಾಥಸ್ವಾಮಿಗೆ ಸಂಕಷ್ಟ

ಮಾನ್ಯರೆ,

ಈ ರಾಜಕಾರಣಿಗಳಿಗೆ ಧರ್ಮಸ್ಥಳ ಮಂಜುನಾಥ ಸ್ವಾಮಿಯನ್ನು ಸಂಕಷ್ಟಕ್ಕೆ ಸಿಲುಕಿಸುವುದು ಎಂದರೆ ತುಂಬಾ ಇಷ್ಟ ಅಂತ ಅನ್ನಿಸದೇ ಇರಲಾರದು. ಏಕೆಂದರೆ ಇತ್ತೀಚೆಗೆ ಮಂಡ್ಯ ನಗರದಲ್ಲಿ ಉಸ್ತುವಾರಿ ಸಚಿವರಾದ ಎನ್. ಚೆಲುವರಾಯಸ್ವಾಮಿ ಅವರು ಮಂಡ್ಯದ ಲೋಕಸಭಾ ಸದಸ್ಯರು ಹಾಗೂ ಕೇಂದ್ರ ಸಚಿವರಾದ ಎಚ್.ಡಿ.ಕುಮಾರಸ್ವಾಮಿ ಅವರಿಗೆ, ಮಂಡ್ಯದ ಜನತೆಗೆ ಬೇಕಿಲ್ಲದ ವಿಷಯಕ್ಕೆ ಧರ್ಮಸ್ಥಳ ಮಂಜುನಾಥಸ್ವಾಮಿಯ ಸನ್ನಿಧಾನದಲ್ಲಿ ಬಂದು ಪ್ರಮಾಣ ಮಾಡ್ತಾರ ಎಂದು ಸವಾಲು ಹಾಕಿರುವುದು ಮತ್ತು ಅದಕ್ಕೆ ಕುಮಾರಸ್ವಾಮಿ ಅವರು ಧರ್ಮಸ್ಥಳದಲ್ಲಿ ಆಣೆ ಪ್ರಮಾಣ ಮಾಡಲು ನಾನು ಸಿದ್ಧ ಎಂದು ಹೇಳಿರುವ ಎರಡೂ ಹೇಳಿಕೆಗಳು ತುಂಬಾ ಹಾಸ್ಯಾಸ್ಪದ ಸಂಗತಿ. ಮಂಡ್ಯ ಜಿಲ್ಲೆಯ ಜನತೆಗೆ ಬೇಕಿರುವುದು ಮಂಡ್ಯ ಜಿಲ್ಲೆಯ ಅಭಿವೃದ್ಧಿ ವಿಷಯವೇ ಹೊರತು ಇಂತಹ ಕ್ಷುಲ್ಲಕ ಸವಾಲುಗಳು ಹಾಗೂ ಜವಾಬುಗಳು ಬೇಕಿಲ್ಲ. ಇನ್ನು ಮುಂದಾದರೂ ಇಬ್ಬರೂ ಸಚಿವರು ಮಂಡ್ಯ ಜಿಲ್ಲೆಗೆ ರಾಜ್ಯ ಸರ್ಕಾರದಿಂದ ಹಾಗೂ ಕೇಂದ್ರ ಸರ್ಕಾರದಿಂದ ಹೆಚ್ಚಿನ ಅನುದಾನವನ್ನು ತರಲು ಕಾರ್ಯಪ್ರವೃತ್ತರಾಗಿ ಮಂಡ್ಯ ಜಿಲ್ಲೆಯ ಸರ್ವತೋಮುಖ ಅಭಿವೃದ್ಧಿಗೆ ಸಹಕರಿಸುವುದು ಸೂಕ್ತ.

–ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು.

ರಾಮನವಮಿ ಬಂತೆಂದರೆ ಮೈಸೂರಿನ ಪ್ರಖ್ಯಾತ ಕಲಾಪೋಷಕರಾದ ಕೆ.ಶ್ರೀಕಂಠಯ್ಯ ನೆನಪಾಗುತ್ತಾರೆ...!

ಸುಮಾರು 70 ವರ್ಷಗಳ ಕಾಲ 'ಪಾರ್ವತಿ'ಯಲ್ಲಿ ಸಂಗೀತ ರಸದೌತಣ ಉಣ ಬಡಿಸಿದ ಮಹನೀಯ



ಮೈಸೂರಿನ ಪ್ರಖ್ಯಾತ ಪಾರ್ವತಿ ಬಂಗಲೆ ಆವರಣದಲ್ಲಿರುವ ಬೃಹತ್ ಪಾರಿಜಾತ ಮರದ ಕೆಳಗೆ ಶ್ರೀರಾಮ ಮಂಟಪ ಸ್ಥಾಪಿಸಿರುವುದು.



ಕೆ. ಶ್ರೀಕಂಠಯ್ಯ (1928–2024)

ಸಚ್ಚಿ ಆರ್. ಸಚ್ಚಿದಾನಂದ

ಶ್ರೀರಾಮನವಮಿ ಆಯೋಜಕರೂ ಆದ ಕೆ. ಶ್ರೀಕಂಠಯ್ಯನವರು ಕಳೆದ ಸೆಪ್ಟೆಂಬರ್‌ನಲ್ಲಿ ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ದೈವಾಧೀನರಾದರು. 96 ವರ್ಷಗಳ ತುಂಬು ಬದುಕು ಅವರದ್ದಾಗಿತ್ತು. ಇವರು ವಿಶ್ವಾದ್ಯಂತ ಸಂಗೀತ ಪ್ರೇಮಿಗಳಿಗೆ ಚಿರಪರಿಚಿತರು. **ಸುಮಾರು 70 ವರ್ಷ ಕಾಲ ನಿರಂತರವಾಗಿ ಶ್ರೀರಾಮನವಮಿ ಮತ್ತು ಶ್ರೀಗಣೇಶ ಹಬ್ಬಗಳಲ್ಲಿ ಮೈಸೂರಿನ ತಮ್ಮ ಪಾರ್ವತಿ ನಿವೇಶನದಲ್ಲಿ** ನೂರಾರು ಸಂಗೀತ ಕಛೇರಿಗಳನ್ನು ಏರ್ಪಡಿಸಿ ದಾಖಲೆ ನಿರ್ಮಿಸಿದ್ದರು.



ಸಚ್ಚಿದಾನಂದ

ದೊಡ್ಡ ಚಪ್ಪರ ಹಾಕಿಸಿ, ಶ್ರೀರಾಮ ಪಟ್ಟಾಭಿಷೇಕ ಮಂಟಪದಲ್ಲಿ ಸಾವಿರಾರು ಜನರು ಕುಳಿತು ಕೇಳುವ ಹಾಗೆ ಕರ್ನಾಟಕ ಸಂಗೀತದ ಎಲ್ಲಾ ದಿಗ್ಗಜರ ಕಛೇರಿಗಳನ್ನು ಏರ್ಪಡಿಸಿ, ಸಂಗೀತದ ರಸದೌತಣವನ್ನು ಸಂಗೀತ ಪ್ರೇಮಿಗಳಿಗೆ ಉಣ ಬಡಿಸಿದ್ದರು. ಅದನ್ನು ನಂತರದ ದಿನಗಳಲ್ಲಿ 'A Home called Parvathi' ಎಂಬ Blogನಲ್ಲಿ ಅತ್ಯುತ್ತಮ ಧ್ವನಿ ಮುದ್ರಣವನ್ನು, ರಸವತ್ತಾದ ಮಾಹಿತಿಗಳೊಂದಿಗೆ ಈಗಿನ ಪೀಳಿಗೆಗೆ ಕೊಡುಗೆಯಾಗಿ ನೀಡಿದ್ದಾರೆ.

ಐವತ್ತು ವರ್ಷದ ಹಿಂದೆ, 1975ರ ರಾಮನವಮಿ ಉತ್ಸವದಲ್ಲಿ ಅವರು ಏರ್ಪಡಿಸಿದ್ದ ಕಛೇರಿಗಳಲ್ಲಿ ಹತ್ತು ಸಂಗೀತ ಕಲಾ ನಿಧಿಗಳು ಭಾಗವಹಿಸಿ, ಸಂಗೀತ ರಸದೌತಣ ನೀಡಿದ್ದರು. ಅದೇ ರೀತಿ ಪ್ರತಿ ವರ್ಷವೂ ಭಾರತದ ಎಲ್ಲೆಡೆಯಿಂದ ಸಂಗೀತ ಮಹಾಮಹಿಮರು ಬಂದು ಶ್ರೀಕಂಠಯ್ಯನವರ **ಪಾರ್ವತೀ** ನಿವೇಶನದಲ್ಲಿ ಸಂಗೀತ ಕಛೇರಿ ನಡೆಸುತ್ತಿದ್ದರು. ಅಲ್ಲಿ ನಡೆದ ಪ್ರತಿಯೊಂದು ಕಛೇರಿಯಲ್ಲಿ ಸಂಗೀತ ಪ್ರಿಯರು ಕಿಕ್ಕಿರಿದು ನೆರೆದಿರುತ್ತಿದ್ದರು.

19ನೆಯ ಶತಮಾನದಲ್ಲೇ ಮೈಸೂರಿನಲ್ಲಿ ಶ್ರೀರಾಮನವಮಿ ಅದ್ದೂರಿ ಆಚರಣೆ ಆರಂಭವಾಯಿತು. ಸಂತ–ವಾಗ್ಗೇಯಕಾರ ತ್ಯಾಗರಾಜರ ಪರಂಪರೆಯವರಾದ **ಮೈಸೂರು ಸದಾಶಿವರಾಯರು** ಮೊಟ್ಟ ಮೊದಲು ಶ್ರೀರಾಮನವಮಿ ಉತ್ಸವ, ಸಂಗೀತ ಸೇವೆ, ಭಜನೆ, ಮೆರವಣಿಗೆ, ಎಲ್ಲವನ್ನೂ ಆರಂಭಿಸಿದರು. ಮೈಸೂರಿನ ಪ್ರತಿ ನಾಗರಿಕರೂ ಸಂಗೀತ ಕಛೇರಿಯಲ್ಲಿ ಭಾಗವಹಿಸುತ್ತಿದ್ದ ಕಾಲವದು. ಮನೆಯಲ್ಲಿ ಪೂಜೆ, ಪುನಸ್ಕಾರ, ನೇಮ, ಚರ್ಪು ಎಲ್ಲವೂ ಚಾಚೂ ತಪ್ಪದೇ ನಡೆಯುತ್ತಿತ್ತು. ಪಾನಕ–ಕೋಸಂಬರಿಗಳು ದೊಡ್ಡ ಮಟ್ಟದಲ್ಲಿ ವಿತರಣೆಯಾಗುತ್ತಿತ್ತು. ಅದಕ್ಕೆ ತಕ್ಕಂತೆ, ರಾಜಪೋಷಣೆ ಇರಲಿ; ಇಲ್ಲದಿರಲಿ, ಸಾರ್ವಜನಿಕವಾಗಿ ಸಂಗೀತ ಕಛೇರಿಗಳು ನಡೆಯುತ್ತಿದ್ದವು. ಬಿಡಾರಂ ಕೃಷ್ಣಪ್ಪನವರು ಮಹದುದ್ದೇಶದಿಂದ ಪ್ರಸನ್ನ ಸೀತಾರಾಮ ಮಂದಿರವನ್ನು ಸ್ಥಾಪಿಸಿ, ಮುನ್ನಡೆಸಿದರು.

ಶ್ರೀಕಂಠಯ್ಯನವರ ತಂದೆ ಕೆ. ಪುಟ್ಟೂರಾಯರು ದೊಡ್ಡ ವಕೀಲರಾಗಿದ್ದರು. ಮಾತ್ರವಲ್ಲ, ವಿದ್ವಾನ್ ಮೈಸೂರು ಚೌಡಯ್ಯನವರ ಆಪ್ತ ಸ್ನೇಹಿತರು, ಜೊತೆಗೆ ಹಿತೈಷಿಗಳೂ ಕೂಡ. ಬಿಡಾರಂ ಕೃಷ್ಣಪ್ಪನವರ ಪ್ರಸನ್ನ ಸೀತಾರಾಮ ಮಂದಿರದ ಅಧ್ಯಕ್ಷರೂ ಆಗಿದ್ದ ಪುಟ್ಟೂರಾಯರ ಪುತ್ರರಲ್ಲಿ ಶ್ರೀಕಂಠಯ್ಯನವರು ಮಾತ್ರ ತಾವು ವಕೀಲರಾಗಿ ಮೈಸೂರಿನಲ್ಲೇ ನೆಲೆಸಿದರು.

ಪುಟ್ಟೂರಾಯರ ಭವ್ಯ ನಿವೇಶನ ಚಾಮರಾಜಪುರಂ ಬಡಾವಣೆಯಲ್ಲಿ ಅತೀ ಮುಖ್ಯವಾದ ಹೆಗ್ಗುರುತು (landmark). ಅಲ್ಲಿ ಅನೇಕ ಹಿರಿಯ ಕಲಾವಿದರು ಸಂಗೀತ, ಪ್ರವಚನ, ಹರಿಕಥೆ ನಡೆಸಲು ವರ್ಷವಿಡೀ ಬರುತ್ತಿದ್ದರು. ಅವರ ಕಾರ್ಯಕ್ರಮಗಳಿಗೆ ಸಾರ್ವಜನಿಕರಿಗೆ ಉಚಿತ ಪ್ರವೇಶವೂ ಇತ್ತು. 1959ರಲ್ಲಿ ಪುಟ್ಟೂರಾಯರು ನಿಧನರಾದಾಗ ಶ್ರೀಕಂಠಯ್ಯನವರಿಗೆ 31 ವರ್ಷ. ಆಗಲೇ, ಕಲಾಪೋಷಣೆ, ಸಂಗೀತದ ಮೂಲಕ ಶ್ರೀರಾಮನ ಸೇವೆ ಮುಂದುವರಿಸಲು ಪಣ ತೊಟ್ಟು ನಿಂತರು. ಅವರಿಗೆ ಆಗ ತಾನೆ ಮದುವೆ ಆಗಿತ್ತು. ಅವರ ಮದುವೆಯಲ್ಲಿ ಮಹಾ ವಿದ್ವಾನ್ ಟಿ.ಕೆ.ರಂಗಾಚಾರಿ ಅವರ ಸಂಗೀತ ಕಛೇರಿ ಏರ್ಪಡಿಸಲಾಗಿತ್ತು.


1950 ರಿಂದ 2000– ಈ ಐದು ದಶಕಗಳಲ್ಲಿ ಮೈಸೂರಿನಲ್ಲಿ ಇದ್ದ ಎಲ್ಲಾ ಸಂಗೀತ ಪ್ರೇಮಿಗಳಿಗೆ ಪುಟ್ಟೂರಾಯರ ಮನೆ ಚಿರಪರಿಚಿತವಾಗಿತ್ತು. ಪ್ರತಿ ವರ್ಷ ಅಲ್ಲಿನ ಸಂಗೀತ ಕಛೇರಿಗಳನ್ನು ಬಹುತೇಕ ಮಂದಿ ಅತೀ ಉತ್ಸಾಹದಿಂದ ಆಲಿಸುತ್ತಿದ್ದರು. ಬೆಂಗಳೂರಿನ ಭವ್ಯ ಚೌಡಯ್ಯ ಸ್ಮಾರಕ ಭವನ ಸ್ಥಾಪನೆಗೆ ಕಾರಣಭೂತರೇ ಈ ಕುಟುಂಬದವರು. ಆದರೆ ವಿಶ್ವಾದ್ಯಂತ ಈ ಕುಟುಂಬ ಪ್ರಖ್ಯಾತವಾಗಿದ್ದು 2009, ಶ್ರೀಕಂಠಯ್ಯನವರು A Home called Parvathi ಎಂಬ Blog ಆರಂಭಿಸಿದಾಗ. ಅವರ ಮನೆಯವರು ಸೇರಿ ಪ್ರತಿ ತಿಂಗಳು ಆ ಎಪ್ಪತ್ತು ವರ್ಷಗಳು ನಡೆಸಿದ ಕಛೇರಿಗಳ, ಮುತುವರ್ಜಿಯಿಂದ ಕಾಪಾಡಿದ, ಧ್ವನಿ ಮುದ್ರಣಗಳಲ್ಲಿ ನಿರಂತರವಾಗಿ upload ಮಾಡಲು ಆರಂಭಿಸಿದರು. ಇದರಿಂದ ಸುಮಾರು 300 ಪಾರ್ವತೀ ಕಛೇರಿಗಳನ್ನು ಅಂತರ್ಜಾಲದಲ್ಲಿ ಯಾರು ಬೇಕಾದರೂ ಕೇಳುವ ಸದವಕಾಶ ಲಭ್ಯವಾಯಿತು. ಆ ಮೂಲಕ ರಸಾನುಭವ ಪಡೆಯಬಹುದು. ಅನೇಕ ಲಕ್ಷ ಜನರು ಈವರೆಗೂ ಈ ಸಂಗೀತ ರಸದೌತಣ ಸವಿಯುವ ಭಾಗ್ಯ ಪಡೆದಿದ್ದಾರೆ. ಅನೇಕ ಪ್ರತಿಭಾವಂತ ಯುವ ಕಲಾವಿದರು ಆಗಿನ ಕಾಲದ ಮಹಾ ವಿದ್ವಾಂಸರ ಕಛೇರಿಗಳನ್ನು ಕೇಳಿ, ಹಾಡುಗಳನ್ನು, ಮನೋಧರ್ಮ ಸಂಗೀತವನ್ನು ಇಲ್ಲಿಂದ ಕಲಿತಿದ್ದಾರೆ.

ಶ್ರೀಕಂಠಯ್ಯನವರು ತಮ್ಮ 90ನೇ ವಯಸ್ಸಿನವರೆಗೂ ಸಂಗೀತ ಕಛೇರಿಗಳನ್ನು ಸತತವಾಗಿ, ಖರ್ಚು–ವೆಚ್ಚ ಲೆಕ್ಕಿಸದೇ ನಡೆಸುತ್ತಿದ್ದರು. ತಮ್ಮ ಚಾಮರಾಜಪುರಂ ನಿವೇಶನ ಪ್ರದೇಶದಲ್ಲಿ ಆಧುನಿಕತೆ ಭರದಲ್ಲಿ ಆದಂತಹ ಬದಲಾವಣೆಗಳ ಮೇರೆಗೆ ಅವರು ಜಗನ್ಮೋಹನ ಅರಮನೆಯಲ್ಲಿ ಕಛೇರಿಗಳನ್ನು ನಡೆಸಲು ಪ್ರಾರಂಭಿಸಿದರು. ತಮ್ಮ ತಂದೆಯ ಹೆಸರಿನಲ್ಲಿ, ಶ್ರೀ ಕೆ. ಪುಟ್ಟೂರಾವ್ ಸ್ಮಾರಕ ಸಂಗೀತೋತ್ಸವವನ್ನು ಅನೇಕ ವರ್ಷಗಳು ನಡೆಸಿದರು. ಶ್ರೀಕಂಠಯ್ಯನವರು ಎಲ್ಲವನ್ನೂ ತಾವೇ ಖುದ್ದಾಗಿ ಮೇಲ್ವಿಚಾರಣೆ ಮಾಡುತ್ತಿದ್ದರು. ಅವರ ನಿವೇಶನದಲ್ಲಿ ಪ್ರತಿ ರಾಮನವಮಿ ಸಮಯಕ್ಕೆ ಸರಿಯಾಗಿ ಅಲ್ಲಿದ್ದ ಬೃಹತ್ ಪಾರಿಜಾತ ಮರ ಹೂಮಳೆಯನ್ನು ಸುರಿಸುವ ಹಾಗೆ ಅದನ್ನು ಬೆಳೆಸಿದ್ದರು. ಅವರ ಮನೆಯ ಉದ್ಯಾನವನಕ್ಕೆ ಎಷ್ಟೋ ಬಾರಿ ಪ್ರಥಮ ಬಹುಮಾನ ದೊರಕಿತ್ತು. ಹಾಕಿದ ಚಪ್ಪರ, ಮಂಟಪ, ದೇವರ ಅಲಂಕಾರ, ಪೂಜೆ, ಹೋಮ, ಸಂಜೆ ಜನರಿಗೆ ಕುಳಿತುಕೊಳ್ಳಲು ಸುವ್ಯವಸ್ಥೆ, ಧ್ವನಿ ನಿಯಂತ್ರಣ, ದೀಪ ಹೀಗೆ ಪ್ರತಿಯೊಂದನ್ನೂ ಅಚ್ಚುಕಟ್ಟಾಗಿ ಸಿದ್ಧಪಡಿಸುತ್ತಿದ್ದರು.

ಈ ಕಛೇರಿಗಳಲ್ಲಿ ಅರಿಯಕುಡಿ, ಮದುರೈ ಮಣಿ, ಸೆಮ್ಮಂಗುಡಿ, ಜಿಎನ್‌ಬಿ., ಎಂಎಸ್‌ಎಸ್, ಪಟ್ಟಮ್ಮಾಳ್, ವಸಂತ ಕುಮಾರಿ, ರಾಧಾ ಜಯಲಕ್ಷ್ಮಿ, ಮದುರೈ ಸೋಮು, ಜೇಸುದಾಸ್, ಮಾಂಡೊಲಿನ್ ಶ್ರೀನಿವಾಸ್, ಲಾಲ್ಗುಡಿ, ಏಮನಿ, ಪಣ್ ಸುಲ್ತಾನ, ಲಕ್ಷ್ಮೀ ಶಂಕರ್, ಮಹಾರಾಜಪುರಂ, ಕೆವಿಎನ್, ಟಿಆರ್‌ಎಸ್, ಬಾಲಮುರಳಿ ಕೃಷ್ಣ ಇತ್ಯಾದಿ ದಿಗ್ಗಜರೆಲ್ಲಾ ಬಂದು ಸಂಗೀತ ಕಛೇರಿ ನಡೆಸಿದ್ದಾರೆ. ಅವರಿಗೆಲ್ಲ ಅತ್ಯುತ್ತಮ ಪಕ್ಕವಾದ್ಯದ ಕಲಾವಿದರು ಇದ್ದರು. ಅದರಂತೆ ಮೈಸೂರಿನ ಪ್ರತಿಭಾವಂತ ಕಲಾವಿದರೂ ಅನೇಕ ಕಛೇರಿಗಳ ನಡೆಸುವ ಸುವಕಾಶವೂ ಲಭಿಸಿತ್ತು. ಹೀಗೆ ಒಂದು ನಂಬಲಾರದಂತಹ ಸಂಗೀತಸೇವೆಯನ್ನು ಶ್ರೀಕಂಠಯ್ಯನವರು ನೆರವೇರಿಸಿದರು.

ಶ್ರೀಕಂಠಯ್ಯನವರ ಕಛೇರಿಗಳಿಗೆ ಆರ್.ಕೆ.ನಾರಾಯಣ್, ಪು.ತಿ. ನರಸಿಂಹಚಾರ್, ವೀಣೆ ದೊರೆಸ್ವಾಮಿ ಅಯ್ಯಂಗಾರ್, ಪ್ರೊ. ಚಕ್ರವರ್ತಿ, ಗಣ್ಯ ರಾಜಕಾರಣಿಗಳು, ನಟ–ನಟಿಯರು, ಲೇಖಕರು, ಸರ್ಕಾರಿ ಅಧಿಕಾರಿಗಳು ಸೇರಿ ಎಲ್ಲರೂ ಬರುತ್ತಿದ್ದರು. ಅವರಲ್ಲಿ ಒಬ್ಬರಾದ ಐಪಿಎಸ್ ಅಧಿಕಾರಿ ಆರ್. ಜಗನ್ನಾಥನ್ ಅವರು ಹೇಳಿರುವಂತೆ, ಈ ರಾಮನವಮಿ ಮಂಟಪದ ಸಂಗೀತದನುಭವ–ನವ ನೂತನವಾಗಿದೆ. ಇದರ ಅಪೂರ್ವತೆ ಹೇಗಿತ್ತು ಎಂದು ಯಾರಾದರೂ ಕೇಳಿದರೆ, ನನಗೆ ಉತ್ತರ ನೀಡಲು ತೋಚುವುದಿಲ್ಲ. ನನ್ನ ಮೌನದಲ್ಲಿ ಗಾಢವಾದ ಅರ್ಥವಿದೆ. ಭಾವನೆಯ ಸಮುದ್ರದ ಇಂತಹ ಅತೀ ಸೂಕ್ಷ್ಮ ರಸಾನುಭವಕ್ಕೆ ಏನು ಹೇಳುವುದು. 'ಹೂಂ' ಚೆನಾಗಿತ್ತು! ಅನ್ನೋಣವೇ ಇಲ್ಲ!!! ಬದರೀನಾಥದಲ್ಲಿನ ಪವಿತ್ರ ಅಲಕನಂದಾ ನದಿಯ ಆ ಪುಣ್ಯ ತಣ್ಣೀರಿನಲ್ಲಿ ಮಿಂದು ಅಲ್ಲಿನ ಹಿಮಾಲಯದ ಹಿತವಾದ ಶರತ್ಕಾಲದ ಹೊಂಬೆಳಕಿನಲ್ಲಿ ನಿಂತಾಗ ಏನದು ಅನುಭವ! ಅದೆಂಥಹಾ ಸ್ವಚ್ಛತಮ ಅನುಭವ! ಪ್ರಕೃತಿಯ ಪರಾಕಾಷ್ಠೆಯಲ್ಲಿ ಒಂದಾದಂತಲ್ಲವೇ? ಇದೂ ಹೀಗೇ! ನಾನಾದರೋ ಸಂಗೀತ ತಜ್ಞನಲ್ಲ. ಆದರೆ ಈ ಸಂಗೀತದ ರಸಾನುಭವವೇ ಬೇರೆ!? ಕೆ.ಶ್ರೀಕಂಠಯ್ಯನವರು ಇಂತಹ ರಸಿಕ ಶಿಖಾಮಣಿ, ಕಲಾಪೋಷಕ, ಮೈಸೂರಿನ ಹೆಮ್ಮೆಯ ಪುತ್ರ, ಈಗ ಎಲ್ಲಿರಬಹುದು? ಚಿರಸ್ಮರಣೀಯರಾದ ವೀಣೆ ಶೇಷಣ್ಣ, ಮೈಸೂರು ವಾಸುದೇವಾಚಾರ್ಯರು, ಲಾಲ್ಗುಡಿ, ಮದುರೈ ಸೋಮು, ಜಿಎನ್‌ಬಿ. ಎಂಎಸ್‌ಎಸ್... ಇವರೆಲ್ಲಾ ಯಾವ ದಿವ್ಯ ರಸಲೋಕದಲ್ಲಿ, ದೇವತೆಗಳಿಗೆ ಸಂಗೀತ ಸುಧೆಯನ್ನು ಉಣಬಡಿಸುತ್ತಿದ್ದಾರೋ, ಅಲ್ಲಿಯೇ ನಮ್ಮ ಶ್ರೀಕಂಠಯ್ಯನವರೂ ಇದ್ದಾರೆ! ನಮಗೆಲ್ಲಾ ಒಂದು ಪರಲೋಕ ಎನ್ನುವುದು ಇದೆ ಎಂದರೆ ಅದು ಈ ರಸಲೋಕವಾಗಿರಲಿ. ಸಂಗೀತ ಪ್ರಪಂಚದ ಮಿನುಗು ತಾರೆಯರಾದ ವಿದ್ವಾಂಸರು, ಪೋಷಕರು ಇರುವ ಲೋಕವಾಗಿರಲಿ! ಯಾಕೆಂದರೆ ಅಲ್ಲಿ ಖಂಡಿತಾ ನಮಗೆಲ್ಲಾ ಶ್ರೀರಾಮನ ದರ್ಶನ ಆಗುತ್ತದೆ!





ವಿದ್ವಾನ್ ಸೆಮ್ಮಂಗುಡಿ ಶ್ರೀನಿವಾಸ ಅಯ್ಯರ್ ಸಂಗೀತ ಕಾರ್ಯಕ್ರಮದಲ್ಲಿ ಪಕ್ಕವಾದ್ಯದಲ್ಲಿ ಲಾಲ್‌ಗುಡಿ ಜಯರಾಮನ್ ಮತ್ತು ವೆಲ್ಲೂರು ರಾಮಭದ್ರನ್ ಇದ್ದಾರೆ. ಬಲಚಿತ್ರದಲ್ಲಿ ಸಂಗೀತ ಪ್ರಿಯರು ಪೆಂಡಾಲ್‌ನಲ್ಲಿ ತುಂಬಿ ತುಳುಕುತ್ತಿರುವುದು.

ಮಾತೃ ಹೃದಯಿ ಕಸ್ತೂರ ಬಾ ಸ್ಮರಣೆ

ಕಸ್ತೂರ ಬಾ ಅವರು 1869 ಏಪ್ರಿಲ್ 11ರಂದು ಪೋರ್ ಬಂದರಿನಲ್ಲಿ ಜನಿಸಿದರು. ಮಹಾತ್ಮ ಗಾಂಧಿ ಅವರಿಗಿಂತ 5 ತಿಂಗಳು ಕಸ್ತೂರ ಬಾ ಹಿರಿಯರು. ಸಾಧಾರಣ ಹೆಣ್ಣು ಮಗಳಾಗಿದ್ದ ಕಸ್ತೂರ ಬಾ ಅಸಾಧಾರಣ ಪುರುಷನ ಮಡದಿಯಾಗಿ ಹಲವು ಚಾರಿತ್ರಿಕ ಘಟನೆಗಳಿಗೆ ಸಾಕ್ಷಿಯಾಗಿ ಬೆಳೆದು ನಿಂತವರು. ಗಾಂಧಿ ಒಂದೊಂದೇ ಹೆಜ್ಜೆ ಎತ್ತಿಡುತ್ತ ಭಾಯಿ, ಬಾಪು, ಮಹಾತ್ಮನಾಗುತ್ತ ಮೇಲೇರಿದರು. ಕಸ್ತೂರ್ ಬಾ ಹಂತ–ಹಂತವಾಗಿ ಮೌನವಾಗುತ್ತ ಅವರನ್ನು ಅನುಸರಿಸಿದರು. ಕಸ್ತೂರ್ ಬಾಗೆ ಬಾಪುವಿನ ಹೊರತಾಗಿ ಬೇರೆ ಪ್ರಪಂಚವೇ ಇರಲಿಲ್ಲ. ಆದರೆ ಗಾಂಧೀಜಿಗೆ ಹಾಗಲ್ಲ. ಅವರಿದ್ದಲ್ಲೆ ಪ್ರಪಂಚ ಸುತ್ತುವರಿಯುತ್ತಿತ್ತು. ಗಾಂಧಿ ಅವರು ದೇಶಕ್ಕಾಗಿ ಎಲ್ಲವನ್ನೂ ಬಿಟ್ಟರು.

ಆದರೆ ಕಸ್ತೂರ್ ಬಾ ದೇಶಕ್ಕೆ ಗಾಂಧೀಜಿಯವರನ್ನೇ ಬಿಟ್ಟುಕೊಟ್ಟರು. ಗಾಂಧೀಜಿಯವರು ಬಾ ಅವರನ್ನು ಕುರಿತು ಆಡಿರುವ ಮಾತುಗಳು ಆಕೆ ವ್ಯಕ್ತಿತ್ವದ ವಿಕಾಸಕ್ಕೆ ಸಾಕ್ಷಿಯಾಗಿವೆ. "ಕಸ್ತೂರ ಬಾ ನನ್ನ ಜೀವನದ ಪ್ರತಿ ಹಂತಗಳಲ್ಲೂ ಪೋಷಕಳಾಗಿದ್ದಳು. ಆಕೆಯ ಸಹನೆ ಅದ್ವಿತೀಯ. ಸಹನೆಯೇ ಗಾಂಧೀಜಿಯವರಿಗೆ ಅಹಿಂಸೆಯ ಪಾಠವನ್ನು ಕಲಿಸಿತು, ಅದೇ ನನ್ನ ತಾರಕ ಮಂತ್ರವಾಯಿತು, ತನ್ನ ಸಹನೆಯ ಬೆಲೆ ಆಕೆಗೇ ಗೊತ್ತಿರಲಿಲ್ಲ. ನಾನು ಅದರ ಅಮಿತವಾದ ಬೆಲೆಯನ್ನು ತಿಳಿದು ಅನುಸರಣೆಗೆ ತಂದೆ. ಆದ್ದರಿಂದ ಈ ವಿಚಾರದಲ್ಲಿ ಆಕೆ ನನಗೆ ಎಂದೆಂದಿಗೂ ಗುರು ಸಮಾನಳು" ಎಂದಿದ್ದಾರೆ ಗಾಂಧೀಜಿ. ಕಸ್ತೂರ ಬಾ ಅವರ ತಂದೆ ಗೋಕುಲದಾಸ ಮಾಕಂಜಿ ಮತ್ತು ತಾಯಿ ವೆಜಾರ್‌ಕುಂವರ ಬಾ. ಈ ದಂಪತಿಗಳಿಗೆ ಕಸ್ತೂರ್ ಬಾ ಹಿರಿಯ ಮಗಳು. ಮಾಕಂಜಿಯವರಿಗೂ ಗಾಂಧೀಜಿಯ ತಂದೆ ಕರಮಚಂದ್ ಗಾಂಧಿಯವರಿಗೂ ತುಂಬ ಸ್ನೇಹ. ಈ ಕಾರಣದಿಂದ ಕಸ್ತೂರ್ ಬಾ ಮತ್ತು ಗಾಂಧೀಜಿಯವರ ವಿವಾಹ ಹನ್ನೆರಡು ವರ್ಷದ ವಯಸ್ಸಿನಲ್ಲಿ ನೆರವೇರಿತು. ಸಂಪ್ರದಾಯ ಶ್ರೀಮಂತ ಮನೆತನದಲ್ಲಿ ಬೆಳೆದ ಕಸ್ತೂರ್ ಬಾ ಅವರಿಗೆ ಓದುಬರಹದಲ್ಲಿ ಆಸಕ್ತಿಯಿರಲಿಲ್ಲ. ಗಾಂಧೀಜಿ ಅವರು ಆಕೆಯನ್ನು ವಿದ್ಯಾವಂತರನ್ನಾಗಿ ಮಾಡಲು ತುಂಬಾ ಪ್ರಯತ್ನಪಟ್ಟರು.



ಗಾಂಧೀಜಿಯವರಿಗೆ ತಮ್ಮ ಹೆಂಡತಿ ಆದರ್ಶ ಸತಿಯಾಗಬೇಕೆಂಬ ಹೆಬ್ಬಯಕೆಯಿತ್ತು. ಇದಕ್ಕಾಗಿ ಅವರು ಕಸ್ತೂರ್ ಬಾ ಚಲನವಲನಗಳ ಮೇಲೆ ನಿರ್ಬಂಧ ಹೇರಿದರು. ಆಕೆ ತಮಗೆ ಸದಾ ವಿಧೇಯಳಾಗಿರಬೇಕೆಂದು ಆಶಿಸಿದರು. ಕಸ್ತೂರ್ ಬಾ ಅವರಾದರೂ ಎಂದೂ ಪತಿಗೆ ಅವಿಧೇಯರಾಗಿ ನಡೆದುಕೊಳ್ಳದಿದ್ದರೂ ಪತಿಯ ಕೆಲವು ಕಟ್ಟುಕಟ್ಟಳೆಗಳು ಅವರಿಗೆ ಇಷ್ಟವಾಗುತ್ತಿರಲಿಲ್ಲ. ಗಾಂಧೀಜಿಯ ಅಪ್ಪಣೆ ಇಲ್ಲದೆ ದೇವಸ್ಥಾನಕ್ಕೋ, ಸ್ನೇಹಿತೆಯ ಮನೆಗೋ ಹೋಗುತ್ತಿದ್ದರು. ಇದು ಗಾಂಧೀಜಿಗೆ ಅಪರಾಧವಾಗಿ ತೋರಿ ಅದು ಮುನಿಸಿನಲ್ಲಿ ಪರ್ಯಾವಸಾನವಾಗುತ್ತಿತ್ತು. ಅತೀ ಕೋಪಗೊಂಡಾಗ ತವರು ಮನೆಗೂ ಕಳುಹಿಸಿದ ಸಂದರ್ಭ ಉಂಟು. ತಮ್ಮ ಈ ವರ್ತನೆಗಳಿಂದಾಗಿ ಗಾಂಧೀಜಿ ಮುಂದೆ ಜಿಗುಪ್ಸೆಪಟ್ಟಿದ್ದೂ ಉಂಟು.

ದಕ್ಷಿಣ ಆಫ್ರಿಕಾದಲ್ಲಿ ಗಾಂಧೀಜಿ ಮತ್ತು ಕಸ್ತೂರ ಬಾ ಅವರ ಎರಡು ಮಕ್ಕಳೊಂದಿಗೆ ಸಂಸಾರ ಆರಂಭವಾಯಿತು. ಉನ್ನತ ಆದರ್ಶ, ಧ್ಯೇಯ ಸಾಧನೆಗಾಗಿ ಅನವರತ ಶ್ರಮಿಸುತ್ತಿದ್ದ ಗಾಂಧೀಜಿಯವರೊಡನೆ ಬಾಳು ನಡೆಸುವಾಗ ಕಸ್ತೂರ್ ಬಾ ಅನೇಕ ರೀತಿಯ ಅಗ್ನಿಪರೀಕ್ಷೆಗಳನ್ನು ಎದುರಿಸಬೇಕಾಯಿತು. ಒಮ್ಮೆ ಅವರ ಮನೆಗೆ ಬಂದಿದ್ದ ಅತಿಥಿಯ ಪಾತ್ರೆಯನ್ನು ತೊಳೆಯಲು ಬಾ ನಿರಾಕರಿಸಿದರು. ಕೋಪಗೊಂಡ ಗಾಂಧೀಜಿ ಕಸ್ತೂರ್ ಬಾ ಅವರನ್ನು ಮನೆಯಿಂದಾಚೆ ತಳ್ಳಲು ಹೊರಟರು. ಆಗ ಬಾ ಅಳುತ್ತಾ ನಿಮಗೆ ಸ್ವಲ್ಪವೂ ಕರುಣೆ ಇಲ್ಲವೇ, ನಾಚಿಕೆಯಿಲ್ಲವೇ. ಈ ಪರಸ್ಥಳದಲ್ಲಿ ನಾನೆಲ್ಲಿಗೆ ಹೋಗಲಿ, ಇಲ್ಲಿ ನನಗೆ ಯಾರಿದ್ದಾರೆ. ನಿಮ್ಮ ಹೆಂಡತಿಯಾದ ಮಾತ್ರಕ್ಕೆ ನಾನು ಈ ಎಲ್ಲಾ ಅವಮಾನಗಳನ್ನು ಸಹಿಸಿಕೊಂಡಿರಬೇಕೆ. ಈ ಮಾತುಗಳನ್ನು ಕೇಳಿದ ಗಾಂಧೀಜಿ ನಾಚಿಕೆಪಟ್ಟುಕೊಂಡರು. ಗಾಂಧೀಜಿ ಆಲೋಚನೆ ಒಳ್ಳೆಯದಾಗಿದ್ದರೂ ಅವರು ನಡೆದುಕೊಂಡ ರೀತಿ ಸರಿಯಾಗಿರಲಿಲ್ಲ ಎಂಬುದು ಇದರ ತಾತ್ಪರ್ಯ. ಬಾ ಮತ್ತು ಗಾಂಧೀಜಿ ಬದುಕಿನಲ್ಲಿ 1906 ಮಹತ್ವದ ವರ್ಷ. ಆಗ ಗಾಂಧೀಜಿ ಬ್ರಹ್ಮಚರ್ಯ ವ್ರತವನ್ನು ಸ್ವೀಕರಿಸಿದರು. ಕಸ್ತೂರ್ ಬಾ ಸಂತೋಷದಿಂದ ಅದಕ್ಕೆ ಸಮ್ಮತಿಸಿದರು. ಅವರ ಚಿತ್ತಸ್ಥೈರ್ಯ ಮತ್ತು ಅಪೂರ್ವವಾದ ಸಂಯಮಗಳನ್ನು ಕಂಡಂತಹ ಗಾಂಧೀಜಿಯವರೇ ಆಶ್ಚರ್ಯಚಕಿತರಾದರು. ಕಸ್ತೂರ್, ಕಸ್ತೂರ ಬಾ ಆದ ಕತೆಯೆಂದರೆ ಹೆಣ್ಣು ಅಮ್ಮನಾದ ಕತೆ. ಅದಕ್ಕೆ ಅವಳು ಹಲವು ಮಕ್ಕಳ ತಾಯಿ. ಗಾಂಧೀಜಿಯವರ ಪ್ರತಿ ಹೆಜ್ಜೆಹೆಜ್ಜೆಯಲ್ಲೂ ಜೊತೆ–ಜೊತೆಯಾಗಿ ನಿಂತವರು ಮಡದಿ ಕಸ್ತೂರ ಬಾ. ನಮ್ಮೆದುರು ಇಂಥ ಎಷ್ಟೋ ಬದುಕುಗಳಿವೆ. ಬಹುಶಃ ಒಟ್ಟಿಗೆ ಬೆಳೆದವರು, ಬದುಕಿದವರ ಜೀವನ ಚರಿತ್ರೆ ಉಳಿದವರ ಜೀವನ ಚರಿತ್ರೆಯೂ ಆಗುವುದು ಈ ಕಾರಣಕ್ಕೆ. 'ಕಲ್ಲಲಿ, ಮಣ್ಣಲಿ, ಹುಲ್ಲಲಿ, ಹುಡಿಯಲಿ ಎಲ್ಲೆಲ್ಲಿಯೂ ಚೈತನ್ಯ' ಎಂಬ ರಸಋಷಿ ಕುವೆಂಪು ಅವರ ಕವಿವಾಣಿಗೆ ಸಮರ್ಥನೆ ಬಾ ಅವರ ಜೀವನ. ಇಂತಹ ವಿಶಿಷ್ಟವಾದ ಜೀವನ ನಡೆಸಿದ ಕಸ್ತೂರ ಬಾ 1944ರ ಫೆಬ್ರವರಿ 22ರಂದು ಪುಣೆಯ ಆಗಾಖಾನ್ ಅರಮನೆಯಲ್ಲಿ ಇಹಲೋಕ ತ್ಯಜಿಸಿದರು.



ಡಾ.ಎಂ.ಡಿ.ಉಮೇಶ
ಉಪನ್ಯಾಸಕ, ಗಾಂಧಿ ಅಧ್ಯಯನ ಕೇಂದ್ರ, ಮೈಸೂರು ವಿವಿ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಅಡುಗೆ ಅನಿಲ, ಇಂಧನ ಬೆಲೆ ಹೆಚ್ಚಳ ಖಂಡಿಸಿ ಮೈಸೂರಲ್ಲಿ ಯೂತ್ ಕಾಂಗ್ರೆಸ್‌ನಿಂದ ಪ್ರತಿಭಟನೆ



ಕೇಂದ್ರ ಸರ್ಕಾರ ಅಡುಗೆ ಅನಿಲ ಮತ್ತು ಇಂಧನ ಬೆಲೆ ಏರಿಸಿರುವುದನ್ನು ಖಂಡಿಸಿ ಜಿಲ್ಲಾ ಯೂತ್ ಕಾಂಗ್ರೆಸ್ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಏ.10(ಜಿಎ)–ಕೇಂದ್ರ ಸರ್ಕಾರ ಅಡುಗೆ ಅನಿಲ ಮತ್ತು ಇಂಧನ ಬೆಲೆ ಏರಿಸಿರುವುದನ್ನು ಖಂಡಿಸಿ ಜಿಲ್ಲಾ ಯೂತ್ ಕಾಂಗ್ರೆಸ್ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಮೈಸೂರು ನ್ಯಾಯಾಲಯದ ಮುಂಭಾಗವಿರುವ ಗಾಂಧಿ ಪುತ್ಥಳಿ ಎದುರು ಯುವ ಕಾಂಗ್ರೆಸ್ ಕಾರ್ಯಕರ್ತರು ತಲೆ ಮೇಲೆ ಗ್ಯಾಸ್ ಸಿಲಿಂಡರ್ ಹೊತ್ತು, ಸೌದೆ ಒಲೆಯಲ್ಲಿ ಅಡುಗೆ ಮಾಡುವ ಮೂಲಕ ಅಣಕು ಪ್ರದರ್ಶಿಸಿದರು. ಪ್ರಧಾನಿ ನರೇಂದ್ರ ಮೋದಿ ಅವರ ಮುಖವಾಡ ಧರಿಸಿ ಸಿರಿಂಜಿನ ಮೂಲಕ ರಕ್ತ ಹೀರುತ್ತಿರುವ ಅಣಕ ಪ್ರದರ್ಶನ ಮಾಡಿ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರದ ದುರಾಡಳಿತ ಬೆಲೆ ಏರಿಕೆಗೆ ಕಾರಣವಾಗಿದೆ. ಅಪಾರ ಪ್ರಮಾಣದಲ್ಲಿ ತೆರಿಗೆ ಸಂಗ್ರಹಿಸುವಲ್ಲಿ ಆಸಕ್ತಿ ತೋರುತ್ತಿರುವ ಕೇಂದ್ರ ಉದ್ಯಮಿಗಳ ಹಿತಾಸಕ್ತಿ ಕಾಪಾಡುವಲ್ಲಿ ನಿರತವಾಗಿದೆ. ಜನಸಾಮಾನ್ಯರ ಬಗ್ಗೆ ಸರ್ಕಾರಕ್ಕೆ ಕಾಳಜಿ ಇಲ್ಲ ಎಂದು ಆಕ್ರೋಶ ಹೊರ ಹಾಕಿದರು.

ಈ ವೇಳೆ ನಗರ ಯುವ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಸೈಯದ್ ಅಬ್ರಾರ್ ಮಾತನಾಡಿ, ಕೇಂದ್ರ ಬಿಜೆಪಿ ಸರ್ಕಾರ ಬೆಲೆ ಏರಿಕೆ ಮಾಡಿ ಬಡವರ ರಕ್ತ ಹೀರುತ್ತಿದೆ. ಅದನ್ನು ಬಿಜೆಪಿ ವಿರೋಧಿಸಿ ಹೋರಾಟ ಮಾಡಬೇಕು. ಬದಲಾಗಿ ಜನಾಕ್ರೋಶ ಯಾತ್ರೆ ಮಾಡುತ್ತಿದೆ ಎಂದು ಕಿಡಿಕಾರಿದರು.

ಜನಾಕ್ರೋಶ ಯಾತ್ರೆ ಮೂಲಕ ಜನರ ದಿಕ್ಕು ತಪ್ಪಿಸುತ್ತಿದ್ದಾರೆ. ಜನರಿಗೆ ಯಾರು ಬೆಲೆ ಏರಿಕೆ ಮಾಡಿದ್ದಾರೆ ಎಂಬುದು ಗೊತ್ತು. ಅದಕ್ಕೆ ಕೇಂದ್ರದ ವಿರುದ್ಧ ಈಗಾಗಲೇ ಬೇಸರ ಹೊರಹಾಕುತ್ತಿದ್ದಾರೆ ಎಂದರು.

ರಾಜ್ಯ ಪ್ರಧಾನ ಕಾರ್ಯದರ್ಶಿ ಅಕ್ಷತಾ ರವಿಕುಮಾರ್ ಮಾತನಾಡಿ, ಜನ ವಿರೋಧಿ ಬಿಜೆಪಿಯವರು ಕಾಂಗ್ರೆಸ್ ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಸುವ ನೈತಿಕತೆ ಇಲ್ಲ. ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಅಧಿಕಾರಕ್ಕೇರಿದ ಬಳಿಕ ಅಗತ್ಯ ವಸ್ತುಗಳ ಬೆಲೆ ನಿರಂತರವಾಗಿ ಏರಿಕೆಯಾಗುತ್ತಿದೆ. ಈ ಬಗ್ಗೆ ರಾಜ್ಯ ಬಿಜೆಪಿ ನಾಯಕರು ಜನಾಕ್ರೋಶ ರ‍್ಯಾಲಿ ನಡೆಸಲಿ ಎಂದರು.

ರಾಜ್ಯದಿಂದ ಅತಿಹೆಚ್ಚು ತೆರಿಗೆಯನ್ನು ಪಡೆಯುತ್ತಿರುವ ಕೇಂದ್ರ ಸರ್ಕಾರ ಈ ಬಜೆಟ್‌ನಲ್ಲಿ ರಾಜ್ಯಕ್ಕೆ ಯಾವುದೇ ಯೋಜನೆ ರೂಪಿಸಿಲ್ಲ. ನಮ್ಮ ತೆರಿಗೆ ಪಾಲನ್ನು ನೀಡದೆ ದ್ವೇಷದ ರಾಜಕಾರಣ ಮಾಡುತ್ತಿದೆ. ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾತೈಲದ ಬೆಲೆ ಇಳಿಕೆ ಕಂಡಿದ್ದರು ದೇಶದಲ್ಲಿ ಇಂಧನದ ಬೆಲೆ ಏರಿಕೆ ಆಗುತ್ತಿರುವುದು ಮೋದಿ ಸರ್ಕಾರದ ದುರಾಡಳಿತಕ್ಕೆ ಸಾಕ್ಷಿ ಎಂದು ದೂರಿದರು.

ಪ್ರತಿಭಟನೆಯಲ್ಲಿ ನಗರ ಪ್ರಧಾನ ಕಾರ್ಯದರ್ಶಿಗಳಾದ ಲಖನ್, ದಿಲೀಪ್, ಸಲ್ಮಾನ್, ವಿನೋದ್, ಅದ್ನಾನ್, ಕೆ.ಆರ್.ಕ್ಷೇತ್ರದ ಯುವ ಕಾಂಗ್ರೆಸ್ ಅಧ್ಯಕ್ಷ ಹೊಯ್ಸಳ ಮಲ್ಲೇಶ್, ರಾಕೇಶ್, ಕಾರ್ತಿಕ್, ಹೇಮಂತ್, ರಾಜೇಂದ್ರ, ಪವನ್, ವಿನಯ್, ಮೈಸೂರು ಬಸವಣ್ಣ ಮತ್ತಿತರರು ಉಪಸ್ಥಿತರಿದ್ದರು.

ಹಾಸನ ಮಿತ್ರ

ಶ್ರವಣಬೆಳಗೊಳದ ಪಾಂಡುಕ ಶಿಲೆಯಲ್ಲಿ ತೀರ್ಥಂಕರರಿಗೆ ಅಭಿಷೇಕ



ಭಗವಾನ್ ತೀರ್ಥಂಕರರ ವಾರ್ಷಿಕ ಪಂಚಕಲ್ಯಾಣ ಮಹಾರಥೋತ್ಸವ ಪ್ರಯುಕ್ತ ಧಾರ್ಮಿಕ ವಿಧಿ ವಿಧಾನಗಳನ್ನು ನೆರವೇರಿಸಲಾಯಿತು.

ಶ್ರವಣಬೆಳಗೊಳ, ಏ.10– ಇಲ್ಲಿಯ ಭಂಡಾರ ಬಸದಿಯ ಚವ್ವೀಸ ತೀರ್ಥಂಕರರ ಸನ್ನಿಧಿಯಲ್ಲಿ ನಡೆಯುತ್ತಿರುವ ಭಗವಾನ್ ನೇಮಿನಾಥ ತೀರ್ಥಂಕರರ ವಾರ್ಷಿಕ ಪಂಚಕಲ್ಯಾಣ ಮಹಾರಥೋತ್ಸವದ ಪ್ರಯುಕ್ತ ಜಿನ ಭಗವಂತರ ಜನ್ಮ ಕಲ್ಯಾಣ, ಜನ್ಮಾಭಿಷೇಕದ ಸಕಲ ಧಾರ್ಮಿಕ ವಿಧಿ ವಿಧಾನಗಳನ್ನು ಕ್ಷೇತ್ರದ ಪೀಠಾಧಿಪತಿ ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಮಾರ್ಗದರ್ಶನದಲ್ಲಿ ಶ್ರದ್ಧಾಭಕ್ತಿಯಿಂದ ನೆರವೇರಿಸಲಾಯಿತು.

ಭಂಡಾರ ಬಸದಿಯ ಹುಳ್ಳ ಸಭಾ ಮಂಟಪದಲ್ಲಿ ಪ್ರತಿಷ್ಠಾಪಿಸಿದ್ದ ನೇಮಿನಾಥ ತೀರ್ಥಂಕರರ ಸನ್ನಿಧಿಯ ಎಡ–ಬಲ ಭಾಗದಲ್ಲಿ ಗೋಮೆದ ಯಕ್ಷ ಅಧಿದೇವತೆ ಕೂಷ್ಮಾಂಡಿನಿ ದೇವಿಯರು ವಿರಾಜಮಾನರಾಗಿದ್ದರು. ಅಷ್ಟ ಕನ್ನಿಕೆಯರು, ಅಷ್ಟ ಮಂಗಲಗಳನ್ನು ದೇವರ ಸನ್ನಿಧಿಗೆ ಅರ್ಪಿಸಿದಾಗ, ಪುರೋಹಿತರು ಅಕ್ಷತೆ, ಪುಷ್ಪ, ಲವಂಗಗಳನ್ನು ಸಮರ್ಪಿಸಿದರು. ಘಂಟಾನಾದ, ಮಂಗಳವಾದ್ಯಗಳ ಸೇವೆ ನಡೆಯಿತು.

ಜಿನ ಬಾಲಕನನ್ನು ಆನೆಯ ವಾಹನದ ಮೇಲೆ ಪ್ರತಿಷ್ಠಾಪಿಸಿ, ಪಟ್ಟಣದಲ್ಲಿ ಮೆರವಣಿಗೆ ನಡೆಸಲಾಯಿತು. ನಂತರ ಪಾಂಡುಕ ಶಿಲೆಯಲ್ಲಿ ತೀರ್ಥಂಕರರನ್ನು ಪ್ರತಿಷ್ಠಾಪಿಸಿ 108 ಮಂಗಳಕಲಶ ರಜತದ ಚತುಷ್ಕೋನ ಕಲಶ, ಶಾಂತಿ ಕಲಶಗಳಿಂದ ಮತ್ತು ಪಂಚಾಮೃತ ಅಭಿಷೇಕ ನೆರವೇರಿಸಲಾಯಿತು.

ಮಹಾಶಾಂತಿಧಾರಾ ಕಲಶ ದೊಂದಿಗೆ ಮಹಾಮಂಗಳಾರತಿ ಮಾಡಲಾಯಿತು. ಪೂಜೆಯ ನೇತೃತ್ವವನ್ನು ನಂದಕುಮಾರ್ ಶಾಸ್ತ್ರಿ ತಂಡದವರು ವಹಿಸಿದ್ದರು. ಮಂಗಳವಾದ್ಯ ಸೇವೆಯನ್ನು ಗುರುಮೂರ್ತಿ ತಂಡದವರು ನಿರ್ವಹಿಸಿದರು. ಪೂಜಾ ಸೇವಾಕರ್ತರಾಗಿ ಪಟ್ಟಣದ ಚಂದ್ರಯ್ಯ ಕುಟುಂಬ ವರ್ಗದವರು ಭಾಗವಹಿಸಿದ್ದರು.

ಚನ್ನರಾಯಪಟ್ಟಣದಲ್ಲಿ ರೌಡಿಗೆ ಮತ್ತೊಬ್ಬ ರೌಡಿಯಿಂದ ಇರಿತ

ಚನ್ನರಾಯಪಟ್ಟಣ,ಏ.10–ಕ್ಷುಲ್ಲಕ ಕಾರಣಕ್ಕಾಗಿ ಪುಡಿರೌಡಿಯೊಬ್ಬ ಮತ್ತೋರ್ವ ರೌಡಿಗೆ ಡ್ರ್ಯಾಗರ್‌ನಿಂದ ಹಲ್ಲೆ ಮಾಡಿರುವ ಘಟನೆ ಚನ್ನರಾಯಪಟ್ಟಣದಲ್ಲಿ ನಡೆದಿದೆ.

ಕುಖ್ಯಾತ ರೌಡಿಶೀಟರ್ ಚೇತು ಅಲಿಯಾಸ್ ಮತ್ತು ಬರಗೂರು ವಿಜಿ ಸಹಚರರರಾದ ಯತೀಶ್ ಹಾಗೂ ಅಡಗೂರು ಗ್ರಾಮದ ದಿಲೀಪ್ ನಡುವೆ ಗಲಾಟೆಯಾಗಿದೆ. ಬಳಿಕ ಅಲ್ಲಿಂದ ಇಬ್ಬರೂ ಬೈಕ್‌ನಲ್ಲಿ ತೆರಳಿದ್ದರು. ಶಿವನ ಪಾರ್ಕ್ ಹತ್ತಿರ ಮೂತ್ರ ವಿಸರ್ಜನೆಗೆ ಯತೀಶ್ ಬೈಕ್ ನಿಲ್ಲಿಸಿದ್ದ. ಈ ವೇಳೆ ದಿಲೀಪ್ ಡ್ರ್ಯಾಗರ್‌ನಿಂದ ಯತೀಶ್‌ಗೆ ಇರಿದಿದ್ದಾನೆ. ದಾಳಿಯಿಂದ ಯತೀಶ್‌ಗೆ ಗಂಭೀರ ಗಾಯಗಳಾಗಿದ್ದು, ಗಾಯಾಳು ಯತೀಶ್‌ಗೆ ಹಾಸನದ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ದಾಳಿಗೂ ಮುನ್ನ ಯತೀಶ್, ದಿಲೀಪ್ ಮತ್ತು ಕಾರ್ತಿಕ್ ನಡುವಿನ ಮೊಬೈಲ್ ಸಂಭಾಷಣೆ ವೈರಲ್ ಆಗಿದೆ. ಚನ್ನರಾಯಪಟ್ಟಣ ನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದೆ.

ನಿಮಗೆ 54 ಸಾವಿರ ಸಂಬಳ; ಒಂದು ಅಟೆನ್ಷನ್ ಮಾಡೋಕೆ ಬರಲ್ಲ

ನೂತನ ಶಿಬಿರಾರ್ಥಿ, ಪೊಲೀಸ್ ಅಧಿಕಾರಿಗಳಿಗೆ ಎಡಿಜಿಪಿ ಅಲೋಕ್‌ಕುಮಾರ್ ಫುಲ್ ಕ್ಲಾಸ್



ಹಾಸನ, ಏ.10– ಹಾಸನ ಶಾಂತಿ ಗ್ರಾಮದಲ್ಲಿರುವ ಪೊಲೀಸ್ ತರಬೇತಿ ಶಾಲೆಗೆ ಇಂದು ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಅಲೋಕ್‌ಕುಮಾರ್ ಭೇಟಿ ನೀಡಿದರು. ಈ ಸಂದರ್ಭದಲ್ಲಿ ನೂತನ ಶಿಬಿರಾರ್ಥಿಗಳು ಮತ್ತು ತರಬೇತಿ ಅಧಿಕಾರಿಗಳಿಗೆ ತೀವ್ರ ತರಾಟೆಗೆ ತೆಗೆದುಕೊಂಡರು. ತರಬೇತಿಯ ಗುಣಮಟ್ಟದ ಬಗ್ಗೆ ಬೇಸರ ವ್ಯಕ್ತಪಡಿಸಿದ ಅಲೋಕ್‌ಕುಮಾರ್, ಶಿಬಿರಾರ್ಥಿಗಳಿಗೆ ಸರಿಯಾದ ತರಬೇತಿ ನೀಡದಿರುವುದಕ್ಕೆ ಸಿಬ್ಬಂದಿ ಮೇಲೆ ಹರಿಹಾಯ್ದರು.

ಭೇಟಿಯ ಸಂದರ್ಭದಲ್ಲಿ ಎಡಿಜಿಪಿ ಅಲೋಕ್ ಕುಮಾರ್ ಕಾರ್ಯಕ್ರಮದ ಮಧ್ಯೆಯೇ ಪೊಲೀಸ್ ಮಾರ್ಚ್ ಡ್ರಿಲ್ ಪರೀಕ್ಷಿಸಿದರು. ಆದರೆ, ಶಿಬಿರಾರ್ಥಿಗಳ ಡ್ರಿಲ್ ಪ್ರದರ್ಶನ ಸರಿಯಾಗಿಲ್ಲದಿರುವುದನ್ನು ಗಮನಿಸಿದ ಅವರು, 3 ತಿಂಗಳ ತರಬೇತಿ ಆಗಿದ್ದರೂ ಒಂದು ಅಟೆನ್ಷನ್ ಕೂಡ ಸರಿಯಾಗಿ ಮಾಡಲು ಬರುತ್ತಿಲ್ಲ. ನಿಮ್ಮ ಮೇಲೆ ಕ್ರಮ ಆಗಬೇಕು ಎಂದು ಹರಿಹಾಯ್ದರು. ಈ ವೇಳೆ ತಾವೇ ಖುದ್ದು ಡ್ರಿಲ್ ಕಾಷನ್ ಕೊಡಿಸಿ, ಡೆಮೋ ಮಾಡಿ ತೋರಿಸಿದ ಅವರು, ಸರಿಯಾಗಿ ತರಬೇತಿ ಪಡೆಯದಿದ್ದರೆ ಇವರಿಗೆ ಔಟ್ ಪಾಸ್ ಕೊಡಬೇಡಿ ಎಂದು ಸಿಬ್ಬಂದಿಗೆ ಆದೇಶಿಸಿದರು.

ಅಲೋಕ್‌ಕುಮಾರ್ ತರಬೇತಿ ಶಿಬಿರಾರ್ಥಿಗಳನ್ನು ಉದ್ದೇಶಿಸಿ, ನಿಮಗೆ 54 ಸಾವಿರ ಸಂಬಳ. ಯಾವ ಕೆಲಸವೂ ಮಾಡದೆ ಟ್ರೈನಿಂಗ್‌ನಲ್ಲಿ ಅಷ್ಟು ಸಂಬಳ ನೀಡುತ್ತಿದ್ದಾರೆ. ಆದರೆ ಒಂದು ಡ್ರಿಲ್ ಮಾಡಲು ಸರಿಯಾದ ತರಬೇತಿ ಪಡೆದಿಲ್ಲ. ಆಡೋಕೆ, ಓಡೋಕೆ, ಓದೋಕೆ ಸಂಬಳ ಸಿಗುತ್ತಿದೆ. ಬೇರೆ ರಾಜ್ಯಗಳಲ್ಲಿ ತರಬೇತಿ ಶಿಬಿರಾರ್ಥಿಗಳಿಗೆ ಕೇವಲ ಭತ್ಯೆ ಮಾತ್ರ ನೀಡುತ್ತಾರೆ. ಆದರೆ ಕರ್ನಾಟಕ ಸರ್ಕಾರ ಟ್ರೈನೀ ಪೊಲೀಸ್‌ರನ್ನು ಒಳ್ಳೆ ರೀತಿಯಲ್ಲಿ ನೋಡಿಕೊಳ್ಳುತ್ತಿದೆ. ನೀವು ಮಾಡ್ತಿರೋದು ಏನು? ಎಂದು ಗರಂ ಆದರು.

ಜಾವಗಲ್: ಮೂರು ಕರುಗಳ ಕೊಂದ ಬೀದಿನಾಯಿಗಳು

ಜಾವಗಲ್: ಗ್ರಾಮದ ಕೋಟೆ ಬೀದಿಯ ಬಳಿ ಮೂವರು ರೈತರು ತಮ್ಮ ಕೊಟ್ಟಿಗೆಗಳಲ್ಲಿ ಕಟ್ಟಿಹಾಕಿದ್ದ 3 ಕರುಗಳನ್ನು ಗುರುವಾರ ನಸುಕಿನ ವೇಳೆ ಬೀದಿನಾಯಿಗಳು ಕೊಂದು ಹಾಕಿವೆ.

ಗ್ರಾಮದ ಮಂಜೇಗೌಡ, ಆನಂದ್, ಹಾಗೂ ಧನಂಜಯ ಎಂಬವರು ಮನೆಯ ಬಳಿ ಇರುವ ಕೊಟ್ಟಿಗೆಯಲ್ಲಿ ಕರುಗಳನ್ನು ಕಟ್ಟಿ ಹಾಕಿದ್ದರು. ಬೆಳಗ್ಗಿನ 4 ಗಂಟೆಗೆ ಬೀದಿನಾಯಿಗಳು ಏಕಾಏಕಿ ಕರುಗಳ ಮೇಲೆ ದಾಳಿ ಮಾಡಿವೆ.

ಹಸು ಮತ್ತು ಕರುಗಳ ಗದ್ದಲ ಕೇಳಿ ಬಂದ ರೈತ ಆನಂದ್, ಕರುವಿನ ಕುತ್ತಿಗೆಗೆ ನಾಯಿಗಳು ಬಾಯಿ ಹಾಕಿರುವುದನ್ನು ಕಂಡು ಜೋರಾಗಿ ಶಬ್ದವನ್ನು ಮಾಡಿ ಅವುಗಳನ್ನು ಓಡಿಸಿದ್ದಾರೆ. ತೀವ್ರವಾಗಿ ಗಾಯಗೊಂಡಿದ್ದ 3 ಕರುಗಳು ಸ್ಥಳದಲ್ಲೇ ಮೃತಪಟ್ಟಿವೆ.

ಆನಂದ್ ಮಾತನಾಡಿ, ಜಾವಗಲ್ ಗ್ರಾಮದಾದ್ಯಂತ ಬೀದಿನಾಯಿಗಳ ಹಾವಳಿ ವಿಪರೀತವಾಗಿದ್ದು ಮೂರು ತಿಂಗಳ ಅವಧಿಯಲ್ಲಿ 5ಕ್ಕೂ ಹೆಚ್ಚಿನ ಕರುಗಳ ಮೇಲೆ ನಾಯಿಗಳು ದಾಳಿ ನಡೆಸಿದ್ದು, ಅಧಿಕಾರಿಗಳು ಎಚ್ಚೆತ್ತುಕೊಂಡು ಬೀದಿನಾಯಿಗಳ ಹಾವಳಿಗೆ ಕಡಿವಾಣ ಹಾಕಬೇಕು ಎಂದು ಆಗ್ರಹಿಸಿದರು.

ಏ.13 ರಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಚುನಾವಣೆ

ರಘುನಾಥ್, ಕಲ್ಕೆರೆ ನಾಗರಾಜ್, ಡಾ.ಲಕ್ಷ್ಮೀದೇವಿಗೆ ಮತ ಚಲಾಯಿಸುವಂತೆ ಶ್ರೀಕಂಠಕುಮಾರ್ ಮನವಿ



ಎಕೆಬಿಎಂಎಸ್‌ನ ರಾಜ್ಯ ಉಪಾಧ್ಯಕ್ಷ ನಂ.ಶ್ರೀಕಂಠಕುಮಾರ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರು,ಏ.10(ಜಿಎ)–ಏ.13ರಂದು ನಡೆಯುವ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ(ಎಕೆಬಿಎಂಎಸ್) ಚುನಾವಣೆಯಲ್ಲಿ ರಾಜ್ಯಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುತ್ತಿರುವ ಎಸ್.ರಘುನಾಥ್ ಮತ್ತು ಜಿಲ್ಲಾ ಪ್ರತಿನಿಧಿ ಸ್ಥಾನಕ್ಕೆ ಸ್ಪರ್ಧಿಸಿರುವ ಅಭ್ಯರ್ಥಿಗಳಾದ ಕಲ್ಕೆರೆ ನಾಗರಾಜ್ ಹಾಗೂ ಡಾ.ಕೆ.ವಿ.ಲಕ್ಷ್ಮೀದೇವಿ ಅವರನ್ನು ಬೆಂಬಲಿಸುವಂತೆ ಎಕೆಬಿಎಂಎಸ್‌ನ ರಾಜ್ಯ ಉಪಾಧ್ಯಕ್ಷ ನಂ.ಶ್ರೀಕಂಠಕುಮಾರ್ ಮನವಿ ಮಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನಲ್ಲಿ ಮಹಾಸಭಾ 4100 ಆಜೀವ ಸದಸ್ಯರನ್ನು ಹೊಂದಿದ್ದು, ಪ್ರತಿನಿಧಿ ಸ್ಥಾನಕ್ಕೆ ಇಬ್ಬರನ್ನು ಆಯ್ಕೆ ಮಾಡಬೇಕಾಗಿದೆ. ಅಂದು ಬೆಳಗ್ಗೆ 8 ಗಂಟೆಯಿಂದ ಸಂಜೆ 4ರವರೆಗೆ ನಗರದ ಕೃಷ್ಣಮೂರ್ತಿಪುರಂನಲ್ಲಿರುವ ಭಗಿನಿ ಸೇವಾ ಸಮಾಜ ಶಾಲೆಯಲ್ಲಿ ಮತದಾನ ನಡೆಯಲಿದೆ. ಅಭ್ಯರ್ಥಿ ಡಾ.ಕೆ.ವಿ.ಲಕ್ಷ್ಮೀದೇವಿ, ಕಲ್ಕೆರೆ ನಾಗರಾಜ್ ಹಾಗೂ ರಘುನಾಥ್ ಅವರು ವಿಪ್ರ ಸಮಾಜದ ಕಲ್ಯಾಣಕ್ಕಾಗಿ ಈಗಾಗಲೇ ಹಲವಾರು ಸಂಘ ಸಂಸ್ಥೆಗಳ ಮೂಲಕ ಶ್ರಮಿಸಿದ್ದಾರೆ ಎಂದರು.

ಬೆಂಗಳೂರಿನ ಪದ್ಮನಾಭನಗರ ಕ್ಷೇತ್ರದಲ್ಲಿರುವ ನಿವೇಶನದಲ್ಲಿ 5 ವರ್ಷದಲ್ಲಿ ಸುವರ್ಣ ಭವನ ನಿರ್ಮಿಸಿ, ಕಟ್ಟಡವನ್ನು ಅಭಿವೃದ್ಧಿಗೊಳಿಸಿ ಮಹಾಸಭೆಗೆ ಶಾಶ್ವತ ಆದಾಯ ಬರುವಂತೆ ಶ್ರಮಿಸುವುದು, ಕೇಂದ್ರ ಸರ್ಕಾರದ ಶೇ.10 ಇಡಬ್ಲ್ಯುಎಸ್ ಸೌಲಭ್ಯವನ್ನು ಬ್ರಾಹ್ಮಣರಿಗೆ ಸಿಗುವಂತೆ ಪ್ರಯತ್ನ, ಬ್ರಾಹ್ಮಣರ ಜಾತಿ ಪತ್ರವನ್ನು ಸರ್ಕಾರದಿಂದ ದೊರಕಿಸಿಕೊಡಿಸಲು ಪ್ರಾಮಾಣಿಕ ಪ್ರಯತ್ನ, ತ್ರಿಮತಸ್ಥ ಬ್ರಾಹ್ಮಣರನ್ನು ಒಟ್ಟುಗೂಡಿಸಿ ಕೆಲಸ ಮಾಡುವುದು, ಮಹಾಸಭೆಯ ಧ್ಯೇಯೋದ್ದೇಶಗಳನ್ನು ಯಶಸ್ವಿಗೊಳಿಸಲು ಆತ್ಮವಿಶ್ವಾಸದಿಂದ ಹಾಗೂ ಪಾರದರ್ಶಕವಾಗಿ ಕೆಲಸ ಮಾಡುವ ಬದ್ಧತೆ ತಮ್ಮ ಗುಂಪಿನದ್ದಾಗಿದೆ ಎಂದರು.

ಅಭ್ಯರ್ಥಿಗಳಾದ ಡಾ.ಕೆ.ವಿ.ಲಕ್ಷ್ಮೀದೇವಿ, ಕಲ್ಕೆರೆ ನಾಗರಾಜ್ ಅವರು ವಿಪ್ರ ಸಮುದಾಯಕ್ಕಾಗಿ ಮತ ನೀಡುವಂತೆ ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಲಕ್ಷ್ಮೀನರಸಿಂಹ, ಶಂಕರನಾರಾಯಣ್, ಎಂ.ಶ್ರೀನಿವಾಸ ಪ್ರಸಾದ್ ಉಪಸ್ಥಿತರಿದ್ದರು.

ಜೀನಿಯಸ್ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳ ಸಾಧನೆ



ಗೌತಮ್ | ದಿಗಂತ್ | ಅಕ್ಷತಾ | ಪ್ರಿಯದರ್ಶಿನಿ

ಮೈಸೂರು: 2024–25ನೇ ಸಾಲಿನಲ್ಲಿ ಜೀನಿಯಸ್ ಪದವಿ ಪೂರ್ವ ಕಾಲೇಜಿನ ವಿಜ್ಞಾನ ವಿಭಾಗದ 20 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿ ಹಾಗೂ 50 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ತೇರ್ಗಡೆ ಹೊಂದಿರುತ್ತಾರೆ. ಗೌತಮ್ ಶರ್ಮ ಶೇ.97, ದಿಗಂತ್.ಎಸ್. ಶೇ.96, ಅಕ್ಷತ ಶೇ.95, ಪ್ರಿಯದರ್ಶಿನಿ ಶೇ.95 ಅಂಕಗಳೊಂದಿಗೆ ಉತ್ತಮ ಫಲಿತಾಂಶ ನೀಡಿ, ಕಾಲೇಜಿಗೆ ಕೀರ್ತಿ ತಂದಿದ್ದಾರೆ.

ಮಹಾವೀರ ಜಯಂತಿ ಆಚರಣೆ



ಸಾಲಿಗ್ರಾಮ ತಾಲೂಕು ಕಚೇರಿಯಲ್ಲಿ ಶ್ರೀ ಭಗವಾನ್ ಮಹಾವೀರ ಅವರ ಜಯಂತಿ ಆಚರಿಸಲಾಯಿತು. ಈ ವೇಳೆ ತಹಶೀಲ್ದಾರ್ ನರಗುಂದ, ತಾಪಂ ಇಒ ರವಿಕುಮಾರ್, ಜೈನ್ ಮಿಲನ್ ಅಧ್ಯಕ್ಷ ರಾಜಣ್ಣ, ಮುಖಂಡರಾದ ಗುಣಚಂದ್ರ, ಕುಮಾರ್ ಜೈನ್, ಹೇಮಂತ್, ಗುಣಪಾಲ್ ಜೈನ್, ಪಾರ್ಶಿ ಧರಣೇಂದ್ರ, ಸಂದೇಶ್, ಬ್ರಹ್ಮದೇವ ಇನ್ನಿತರರು ಉಪಸ್ಥಿತರಿದ್ದರು.

ಆರಾಧನಾ ಕಾನ್ವೆಂಟ್‌ನ ವಾರ್ಷಿಕೋತ್ಸವ



ಮೈಸೂರಿನ ಶ್ರೀರಾಂಪುರದಲ್ಲಿರುವ ನವೋದಯ ಚಾರಿಟಬಲ್ ಸೊಸೈಟಿಯ ಆರಾಧನಾ ಕಾನ್ವೆಂಟ್‌ನ ವಾರ್ಷಿಕೋತ್ಸವ ನಡೆಯಿತು. (ಎಡದಿಂದ)ನಿರ್ದೇಶಕಿ ಜೋಸೆಫಿನ್, ಸೇಂಟ್ ಜೋಸೆಫ್ ಪಬ್ಲಿಕ್ ಶಾಲೆ ಆಡಳಿತಾಧಿಕಾರಿ ಫ್ರಾನ್ಸಿಸ್, ಪ್ರಾಂಶುಪಾಲರಾದ ಅಂಜೋ, ಆರಾಧನಾ ಅಕಾಡೆಮಿಯ ಪ್ರಾಂಶುಪಾಲರಾದ ಮೋಲಿ, ಮಹಾವೀರ್ ವಿದ್ಯಾಮಂದಿರ್ ಪ್ರಾಂಶುಪಾಲರಾದ ಡಿ.ಅನಿತಾ, ಸೇಂಟ್ ಮಾರಿಯಾ ದಿ ಮಥಿಯಾಸ್ ಶಾಲೆ ಪ್ರಾಂಶುಪಾಲರಾದ ಮಿನಿ, ಸೇಂಟ್ ಮಾರಿಯಾ ಶಾಲೆ ಪ್ರಾಂಶುಪಾಲರಾದ ಜಿಜಿ, ಆರಾಧನಾ ಕಾನ್ವೆಂಟ್‌ನ ಸುಪೀರಿಯರ್ ಲೀಲಾ, ಸಂಯೋಜಕಿ ಡಯಾನಾ, ಸೇಂಟ್ ಥೆರೆಸಾ ಶಾಲೆ ಉಪ ಪ್ರಾಂಶುಪಾಲರಾದ ಶಾಂತಾ ಮೇರಿ, ಮೈಸೂರಿನ ಸೇಂಟ್ ಮಾರಿಯಾ ದಿ ಮಥಿಯಾಸ್ ಶಾಲೆ ಸಂಯೋಜಕಿ ಗೀತಾಂಗಲಿ ಮತ್ತಿತರರಿದ್ದರು.

ಇನ್‌ಸ್ಟಿಟ್ಯೂಟ್ ಆಫ್ ಮದರ್ ಅಂಡ್ ಡೆಫ್ ಚೈಲ್ಡ್‌ನ ವಿದ್ಯಾರ್ಥಿಗಳು ಉನ್ನತ ಶ್ರೇಣಿಯಲ್ಲಿ ತೇರ್ಗಡೆ



ಪ್ರಶಸ್ತ್ ಜೈನ್ | ತನುಕೃಷ್ಣ | ಸಹನಾ ಕುಸಗೂರ | ಅಮೃತ



ಆಕಾಂಕ್ಷ್.ಬಿ | ಆಕಾಶ್ ಬಿ | ಕಿಶನ್ ಹುಲಿಹಳ್ಳಿ | ಸನ್ಮಿತಾ



ಸ್ಫೂರ್ತಿ ಕಲಗಿ

ಮೈಸೂರು: ಪೇರೆಂಟ್ಸ್ ಅಸೋಸಿಯೇಷನ್ ಆಫ್ ಡೆಫ್ ಚಿಲ್ಡ್ರನ್ ಅವರು ನಡೆಸುತ್ತಿರುವ ಇನ್ಸ್ ಟಿಟ್ಯೂಟ್ ಆಫ್ ಮದರ್ ಅಂಡ್ ಡೆಫ್ ಚೈಲ್ಡ್‌ನಲ್ಲಿ ಶಾಲಾ ಪೂರ್ವ ತರಬೇತಿ ಪಡೆದು, ಮುಖ್ಯ ವಾಹಿನಿ ಕಾಲೇಜುಗಳಲ್ಲಿ ವ್ಯಾಸಂಗ ಮುಂದುವರಿಸಿ ಈ ವರ್ಷದ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಉನ್ನತ ಅಂಕಗಳಿಸಿ ಉತ್ತೀರ್ಣರಾಗಿದ್ದಾರೆ. ಪ್ರಶಸ್ತ್ ಜೈನ್–91%, ತನುಕೃಷ್ಣ–87.33%, ಸಹನಾ ಕುಸಗೂರ–83.3%, ಅಮೃತ–80%, ಆಕಾಂಕ್ಷ್ ಬಿ–77%, ಆಕಾಶ್ ಬಿ–75%, ಕಿಶನ್ ಹುಲಿಹಳ್ಳಿ–68.5%, ಸನ್ಮಿತಾ –66%, ಸ್ಫೂರ್ತಿ ಕಲಗಿ–57.33% ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ.

ಭ್ರಷ್ಟಾಚಾರದಲ್ಲಿ ದೇಶದಲ್ಲೇ ಕರ್ನಾಟಕ ನಂ.1

ಬಸವರಾಜ ರಾಯರೆಡ್ಡಿ ಯೂ ಟರ್ನ್‌ಗೆ ಕೇಂದ್ರ ಸಚಿವ ಕುಮಾರಸ್ವಾಮಿ ಪಂಚ್!



ಬೆಂಗಳೂರು, ಏ.10– ರಾಜ್ಯವು ಭ್ರಷ್ಟಾಚಾರದಲ್ಲಿ ದೇಶದಲ್ಲಿಯೇ ನಂಬರ್ ಒನ್ ಆಗಿದೆ ಎಂದು ಹೇಳಿದ್ದ ಕಾಂಗ್ರೆಸ್ ಬಸವರಾಜ ರಾಯರೆಡ್ಡಿ ಯೂ ಟರ್ನ್ ಹೊಡೆದು ಮುಖ್ಯಮಂತ್ರಿ ಗುಣಗಾನ ಮಾಡಿರುವ ಬಗ್ಗೆ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಟಾಂಗ್ ನೀಡಿದ್ದು, ಸರಣಿ ಹಗರಣಗಳ ಸಿದ್ದಿಲಾಸಿ ಸಿಎಂ ಬಗ್ಗೆ ನಿಮಗೆ ಗೊತ್ತಿಲ್ಲವೇ ಎಂದು ಕಾಲೆಳೆದಿದ್ದಾರೆ.

ಈ ಬಗ್ಗೆ ಮಾಧ್ಯಮ ಹೇಳಿಕೆ ನೀಡಿರುವ ಕುಮಾರಸ್ವಾಮಿ, ಘನತವೆತ್ತ ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರ ಬಸವರಾಜ ರಾಯರೆಡ್ಡಿ ಅವರು ಯೂ ಟರ್ನ್ ಹೊಡೆಯುವ ಅಗತ್ಯವೇ ಇಲ್ಲ. ಅವರು ಸತ್ಯವನ್ನೇ ನುಡಿದಿದ್ದಾರೆ! ಮಹಾತ್ಮ ಗಾಂಧೀಜಿ ಅವರ ಸತ್ಯಮೇವ ಜಯತೇ ಘೋಷ ವಾಕ್ಯವನ್ನು ಕಾಂಗ್ರೆಸ್ ನಾಯಕರು ಅದೆಷ್ಟು ಶ್ರದ್ಧಾಭಕ್ತಿ ಯಿಂದ ಪರಿಪಾಲನೆ ಮಾಡುತ್ತಿದ್ದಾರೆ(!?) ಎಂಬುದಕ್ಕೆ ರಾಯ ರೆಡ್ಡಿ ಅವರ ಹೇಳಿಕೆಯೇ ಸಾಕ್ಷಿ.

ಗುತ್ತಿಗೆಯಲ್ಲಿ ಪರ್ಸಂಟೇಜ್, ಕಮಿಷನ್ ದಂಧೆ ಆರಂಭಿಸಿದ್ದು ಅನ್ಯಪಕ್ಷಗಳ ಸರ ಕಾರಗಳೇ ಹೊರತು ಜೆಡಿಎಸ್ ಸರಕಾರ ವಲ್ಲ. ನಾನು ಮುಖ್ಯಮಂತ್ರಿ ಆಗಿದ್ದ ವೇಳೆ ಗುತ್ತಿಗೆದಾರರಿಗೆ ನಿಯಮಿತವಾಗಿ ಹಣ ಪಾವತಿ ಆಗುತ್ತಿತ್ತು, ವಿಳಂಬ ಎನ್ನುವ ಪ್ರಶ್ನೆಯೇ ಇರಲಿಲ್ಲ. ನನ್ನ ಆಡಳಿತದಲ್ಲಿ ಕಮಿಷನ್ ದಂಧೆ ವಿಧಾನಸೌಧದ ಮೆಟ್ಟಿಲು ಮುಟ್ಟಲು ಬಿಟ್ಟಿರಲಿಲ್ಲ. ಸೋ ಕಾಲ್ಡ್ ಸತ್ಯಸಂಧರಾದ ಕಾಂಗ್ರೆಸ್ಸಿಗರು ಅರ್ಥ ಮಾಡಿಕೊಳ್ಳಬೇಕು.

ಭ್ರಷ್ಟಾಚಾರದ ವಿರುದ್ಧ ಸಿದ್ದರಾಮಯ್ಯ ಕಠಿಣ ಕ್ರಮ ಕೈಗೊಳ್ಳುತ್ತಿದ್ದಾರೆ ಎಂದು ರಾಯರೆಡ್ಡಿ ಹೇಳಿದ್ದಾರೆ! ಪಾಪ.. ಅವರು ಏಕಿಷ್ಟು ಹೆದರಿದರು ಎನ್ನುವುದನ್ನು ನಾನು ಅರ್ಥ ಮಾಡಿಕೊಳ್ಳಬಲ್ಲೆ. ಅಧಿಕಾರ ಮತ್ತು ಆಸರೆ ನಾಲಿಗೆಯ ಶಕ್ತಿಯನ್ನು ಕುಂದಿಸುತ್ತವೆ. ಸಿಎಂ ಸಾಹೇಬರ ಸರಣಿ ಹಗರಣಗಳ ಸಿದ್ದಿಲಾಸದ ಬಗ್ಗೆ ಅರಿಯದಷ್ಟು ಮುಗ್ಧರೇ ರಾಯರೆಡ್ಡಿ? ಕರ್ನಾಟಕವನ್ನು ಕೊಳ್ಳೆ ಹೊಡೆಯುತ್ತಿರುವ ಕಾಂಗ್ರೆಸ್ ಈಸ್ಟ್ ಇಂಡಿಯಾ ಕಂಪನಿ ಸರಕಾರದ ಭಾಗವಾಗಿರುವ ಅವರಿಗೆ ಜೆಡಿಎಸ್ ಕುರಿತು ಟೀಕಿಸುವ ನೈತಿಕತೆ ಎಲ್ಲಿದೆ ಎಂದು ಕುಮಾರಸ್ವಾಮಿ ಪ್ರಶ್ನಿಸಿದ್ದಾರೆ.

ಸಹಕಾರ ಸಂಘದ ಕಟ್ಟಡ ಉದ್ಘಾಟನಾ ಸಮಾರಂಭದಲ್ಲಿ ಗಣ್ಯರಿಗೆ ಸನ್ಮಾನ



ಮೈಸೂರಿನ ಪಡುವಾರಹಳ್ಳಿಯಲ್ಲಿ 60 ವರ್ಷಗಳ ಇತಿಹಾಸ ಹೊಂದಿರುವ ಜನಹಿತ ವಿವಿಧೋದ್ದೇಶ ಸಹಕಾರ ಸಂಘದ ನೂತನ ಕಟ್ಟಡದ ಉದ್ಘಾಟನಾ ಸಮಾರಂಭದಲ್ಲಿ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ, ಹುಣಸೂರು ವಿಧಾನ ಸಭಾ ಕ್ಷೇತ್ರದ ಶಾಸಕ ಜಿ.ಡಿ.ಹರೀಶ್‌ಗೌಡ, ಯಶ್ ಟೆಲ್ ವಾಹಿನಿಯ ಮಾಲೀಕ ಮಂಜು ಸೇರಿದಂತೆ ಇನ್ನಿತರ ಗಣ್ಯರನ್ನು ಸನ್ಮಾನಿಸಲಾಯಿತು. ಸಂಘದ ಚುನಾಯಿತ ಪ್ರತಿನಿಧಿಗಳು, ವಿವಿಧ ಸಹಕಾರ ಬ್ಯಾಂಕುಗಳ ಚುನಾಯಿತ ಪ್ರತಿನಿಧಿಗಳು ಗ್ರಾಮದ ಯಜಮಾನರು, ಮುಖಂಡರು ಭಾಗವಹಿಸಿದ್ದರು.

ಇಂದಿನಿಂದ 'ದಿ ಜ್ಯುವೆಲರಿ ಶೋ'



ಮೈಸೂರು,ಏ.10(ಪಿಎಂ)– ಗೋಲ್ಡನ್ ಕ್ರೀಪರ್ ಎಂಟರ್‌ಪ್ರೈಸಸ್ ವತಿಯಿಂದ ಏ.11ರಿಂದ 13ರವರೆಗೆ 'ದಿ ಜ್ಯುವೆಲರಿ ಶೋ' ಶೀರ್ಷಿಕೆಯಡಿ ಆಭರಣಗಳ ಪ್ರದರ್ಶನ ಹಾಗೂ ಮಾರಾಟ ಉತ್ಸವ ಆಯೋಜಿಸಲಾಗಿದೆ.

ಮೈಸೂರಿನ ಎಂಜಿ ರಸ್ತೆಯ ರ‍್ಯಾಡಿಸನ್ ಬ್ಲೂ ಪ್ಲಾಜಾ ಹೋಟೆಲ್‌ನಲ್ಲಿ ಏರ್ಪಡಿಸಿರುವ ಈ ಉತ್ಸವದ ಉದ್ಘಾಟನಾ ಸಮಾರಂಭವನ್ನು ಏ.11ರಂದು ಮಧ್ಯಾಹ್ನ 12.30ಕ್ಕೆ ಹಮ್ಮಿಕೊಳ್ಳಲಾಗಿದೆ.

ಖ್ಯಾತಿ ನಟಿ ಹಾಗೂ ದಿ ಜ್ಯುವೆಲರಿ ಶೋ 2025–26ರ ಬ್ರ್ಯಾಂಡ್ ರಾಯಭಾರಿ ಅಮೃತ ಪ್ರೇಮ್ ಉತ್ಸವಕ್ಕೆ ಚಾಲನೆ ನೀಡಲಿದ್ದಾರೆ. ಸಾಮಾಜಿಕ ಉದ್ಯಮಿಗಳಾದ ಪಲ್ಲವಿ ಸಿ.ಟಿ.ರವಿ, ಡಿ.ಪ್ರಿಯಾಂಕ, ಮಾಜಿ ಮಿಸೆಸ್ ಇಂಡಿಯಾ ಯೂನಿವರ್ಸ್ ಕ್ವೀನ್ ಡಾ.ಹೇಮಮಾಲಿನಿ ಲಕ್ಷ್ಮಣ್, ಖ್ಯಾತ ವಾಸ್ತುಶಿಲ್ಪಿ ಚೈತ್ರಾ ರಂಗಸ್ವಾಮಿ, ಖ್ಯಾತ ಸರ್ಜನ್ ಡಾ.ನಮಿತಾ, ಉದ್ಯಮಿ ರಶ್ಮಿ ಕಶ್ಯಪ್ ಪಾಲ್ಗೊಳ್ಳಲಿದ್ದಾರೆ.

ಮೂರು ದಿನಗಳ ಕಾಲ ನಡೆಯುವ ಉತ್ಸವಕ್ಕೆ ಬೆಳಗ್ಗೆ 10ರಿಂದ ರಾತ್ರಿ 9ರವರೆಗೆ ಗ್ರಾಹಕರು ಭೇಟಿ ನೀಡಬಹುದು. 37ನೇ ಆವೃತ್ತಿಯ ಉತ್ಸವ ಇದಾಗಿದ್ದು, ಭಾರತದ ವಿವಿಧ ರಾಜ್ಯಗಳ ಆಭರಣಕಾರರ ಆಭರಣಗಳು ದೊರೆಯಲಿವೆ. ಅಲ್ಲದೆ, 30 ಸಾವಿರಕ್ಕೂ ಅಧಿಕ ವಿನ್ಯಾಸದಲ್ಲಿ ಒಡವೆಗಳು ಇಲ್ಲಿ ಲಭ್ಯವಾಗಲಿವೆ ಎಂದು ಪ್ರಕಟಣೆ ತಿಳಿಸಿದೆ.

ಮೇಲುಕೋಟೆಯಲ್ಲಿ ವೈಭವದ ವೈರಮುಡಿ ಮಹಾ ರಥೋತ್ಸವ



ಮೇಲುಕೋಟೆಯಲ್ಲಿ ಗುರುವಾರ ವೈರಮುಡಿ ಉತ್ಸವದ ಮಹಾರಥೋತ್ಸವ ವೈಭವದಿಂದ ನಡೆಯಿತು.

ಮೇಲುಕೋಟೆ: ಚೆಲುವನಾರಾಯಣ ಸ್ವಾಮಿಯ ವೈರಮುಡಿ ಬ್ರಹ್ಮೋತ್ಸವದ ಮಹಾ ರಥೋತ್ಸವ ಗುರುವಾರ ವಿಜೃಂಭಣೆಯಿಂದ ನೆರವೇರಿತು. ನಾಡಿನ ವಿವಿಧ ಭಾಗಗಳಿಂದ ಆಗಮಿಸಿದ್ದ ಲಕ್ಷಾಂತರ ಭಕ್ತರು ರಥೋತ್ಸವದಲ್ಲಿ ಭಾಗವಹಿಸಿ ಶ್ರೀ ದೇವಿ-ಭೂದೇವಿ ಕಲ್ಯಾಣ ನಾಯಕಿಯರೊಡನೆ ರಥಾರೂಢನಾದ ಚೆಲುವನಾರಾಯಣಸ್ವಾಮಿಯ ದರ್ಶನ ಪಡೆದು ರಥಕ್ಕೆ ಹಣ್ಣು ಜವನ ಎಸೆದು ಸಂಭ್ರಮಿಸಿದರು.

ವೈರಮುಡಿ ಜಾತ್ರಾ ಮಹೋತ್ಸವದ 7ನೇ ತಿರುನಾಳ್ ಅಂಗವಾಗಿ ನಡೆದ ಮಹಾರಥಕ್ಕೆ ಮಧ್ಯಾಹ್ನ 11.30ರ ವೇಳೆಗೆ ಮೇಲುಕೋಟೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ಚಾಲನೆ ನೀಡಿದರು. ನಂತರ ಭಕ್ತರ ಜಯಘೋಷದೊಂದಿಗೆ ಮಾರಿಗುಡಿ ಬೀದಿ, ರಾಜಬೀದಿಗಳಲ್ಲಿ ಸಾಗಿದ ಮಹಾರಥ 1.30ರ ವೇಳೆಗೆ ದೇವಾಲಯದ ರಾಜಗೋಪುರದ ಬಳಿ ನೆಲೆ ನಿಂತಿತು.

ಈ ವೇಳೆ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚೆಲುವರಾಯಸ್ವಾಮಿಯವರ ಪುತ್ರ ಸಚಿನ್ ಚೆಲುವರಾಯಸ್ವಾಮಿ ಆಗಮಿಸಿ ಮಹಾರಥಕ್ಕೆ ಪೂಜೆ ಸಲ್ಲಿಸಿದರು. ನಂತರ ವಾನಮಾಮಲೈ ಬೀದಿ ರಥದ ಬೀದಿಯಲ್ಲಿ ಸಾಗಿದ ಬ್ರಹ್ಮರಥ 2.30ರ ವೇಳೆಗೆ ಸ್ವಸ್ಥಾನವಾದ ರಥದ ಮಂಟಪಕ್ಕೆ ತಲುಪಿತು. ದೇವಾಲಯದ ಶ್ರೀಪಾದದಾರು, ಬಂಡೀಕಾರರು, ಗ್ರಾಮದ ಯುವಕರು ಮಹಾರಥ ಸಗುಮ ಚಾಲನೆಗೆ ಶ್ರಮಿಸಿ ರಥೋತ್ಸವ ಯಶಸ್ವಿಗೊಳಿಸಿದರು. ಮಹಾರಥೋತ್ಸವದಲ್ಲಿ ಪಾಂಡವಪುರ ಉಪವಿಭಾಗಾಧಿಕಾರಿ ಶ್ರೀನಿವಾಸ್, ತಹಸೀಲ್ದಾರ್ ಸತೀಶ್, ದೇವಾಲಯದ ಇಒ ಶೀಲಾ ಇದ್ದರು. ಪಾರುಪತ್ತೇಗಾರರಾದ ಸ್ಥಾನಾಚಾರ್ಯ ಶ್ರೀನಿವಾಸನರಸಿಂಹನ್ ಗುರೂಜಿ, ಪರಿಚಾರಕರಾದ ಎಂ.ಎನ್.ಪಾರ್ಥಸಾರಥಿ ರಥೋತ್ಸವದ ಯಶಸ್ವಿಗೆ ಶ್ರಮಿಸಿದ್ದರು.

ಬೆಳಿಗ್ಗೆ 6 ಗಂಟೆಗೆ ಮಹಾರಥೋತ್ಸವ ಕಾರ್ಯಕ್ರಮಗಳು ಆರಂಭವಾದ ನಂತರ 8 ಗಂಟೆಯ ವೇಳೆಗೆ ರಥ ಬಲಿ ಪೂರೈಸಿ ನಂತರ ಯಾತ್ರಾದಾನ ಕೈಗೊಳ್ಳಲಾಯಿತು. ರಾಮಾನುಜಾಚಾರ್ಯರೊಂದಿಗೆ ರಾಜಮುಡಿ ಅಲಂಕಾರದೊಂದಿಗೆ ಸ್ವಾಮಿಯ ಉತ್ಸವ ವಿಶೇಷ ಮಂಗಳವಾದ್ಯ ಹಾಗೂ ವೇದಘೋಷದೊಂದಿಗೆ ರಥದ ಮಂಟಪದ ಬಳಿಗೆ ಸಾಗಿ ಮೂರು ಪ್ರದಕ್ಷಿಣೆ ಹಾಕಿ ಮುಹೂರ್ತ ಪಠಣೆಯ ನಂತರ ರಥಾರೋಹಣ ನಡೆಯಿತು.

ರಥೋತ್ಸವದಲ್ಲಿ ಭಾಗಿಯಾದ ಕೆಲ ಭಕ್ತರು ಮದುವೆಗೆ ವಧು ಕರುಣಿಸು, ಸಾಲದಿಂದ ಮುಕ್ತಿಮಾಡು, ಆರೋಗ್ಯ ಕರುಣಿಸು ಎಂದು ಬಾಳೆಹಣ್ಣುಗಳ ಮೇಲೆ ಬರೆದು ರಥಕ್ಕೆಸೆದು ಚೆಲುವನಾರಾಯಣಸ್ವಾಮಿಯ ಮೊರೆ ಹೋಗಿದ್ದು ಕಂಡುಬಂದಿತು. ಪ್ರತಿದಿನ ಸುಡುಬಿಸಿಲಿನ ವಾತಾವರಣವಿರುತ್ತಿದ್ದ ಮೇಲುಕೋಟೆಯಲ್ಲಿ ಇಂದು ಬಿಸಿಲಿನ ತಾಪ ಕಡಿಮೆಯಾಗಿ ಮೋಡಕವಿದ ವಾತಾವರಣ ಇದ್ದು ಭಕ್ತರಲ್ಲಿ ಉಲ್ಲಾಸದ ವಾತಾವರಣ ಮೂಡಿಸಿತ್ತು. ತೇರೆಳೆಯುವ ಭಕ್ತರ ದಾಹ ತಣಿಸಲು ಯತಿರಾಜದಾಸರ್ ಗುರುಪೀಠ ಹಾಗೂ ಇತರ ಭಕ್ತರು ಮಜ್ಜಿಗೆ, ಪಾನಕ ನೀಡಿದ್ದು ಕಂಡುಬಂತು.

ನೂತನ ರಥ ನಿರ್ಮಾಣಕ್ಕೆ ಸಂಕಲ್ಪ

ತಿರುಪತಿ-ತಿರುಮಲದ ಪೆರಿಯ ಜೀಯರ್ ಸ್ವಾಮೀಜಿಯವರು ಈಗಿರುವ ಮಹಾರಥವನ್ನು ನೀಡಿದ್ದು ಈ ರಥ ಶಿಥಿಲವಾಗಿದೆ. ದೇವಾಲಯದ ಸ್ಥಾನಿಕರೊಂದಿಗೆ ತಿರುಪತಿಯಲ್ಲಿ ಸ್ವಾಮೀಜಿಯವರನ್ನು ಭೇಟಿ ಮಾಡಿ ನೂತನ ರಥ ನಿರ್ಮಾಣ ಮಾಡಿಕೊಡಲು ಕೋರಲಾಗುತ್ತದೆ. ರಥ ನಿರ್ಮಾಣಕ್ಕೆ ತಿರುಪತಿಯ ಸ್ವಾಮೀಜಿಗೇ ಪ್ರಥಮ ಆದ್ಯತೆ ನೀಡಲಾಗುತ್ತದೆ. ಇದಾಗದಿದ್ದರೆ ನಾವೇ ರಥ ನಿರ್ಮಾಣಕ್ಕೆ ಜುಲೈ ವೇಳೆಗೆ ಚಾಲನೆ ನೀಡಿ 2026ರ ವೈರಮುಡಿಗೆ ನೂತನ ರಥ ಸಮರ್ಪಣೆಯಾಗುವಂತೆ ಮಾಡುತ್ತೇವೆ. ಇದು ನಾನು ಮೇಲುಕೋಟೆಯ ರಥೋತ್ಸವದಲ್ಲಿ ಕೈಗೊಂಡ ಸಂಕಲ್ಪವಾಗಿದೆ -ದರ್ಶನ್ ಪುಟ್ಟಣ್ಣಯ್ಯ, ಶಾಸಕರು

ಒಳಮೀಸಲಾತಿ ಜಾರಿ ಮಾಡಲು ಒತ್ತಾಯ

ಮಂಡ್ಯ: ಒಳ ಮೀಸಲಾತಿ ಜಾರಿ ಮಾಡುವುದಾಗಿ ಪ್ರಣಾಳಿಕೆಯಲ್ಲಿ ಘೋಷಣೆ ಮಾಡಿದ ಕಾಂಗ್ರೆಸ್ ಸರ್ಕಾರ ಪೂರ್ವಾಗ್ರಹ ಪೀಡಿತ ಮನಸ್ಥಿತಿಯಿಂದಾಗಿ ಒಳಮೀಸಲಾತಿ ಜಾರಿ ಮಾಡಿಲ್ಲ ಎಂದು ಕ್ರಾಂತಿಕಾರಿ ಪಾದಯಾತ್ರೆಯ ರೂವಾರಿ ಬಿ.ಆರ್.ಬಾಸ್ಕರ್ ಪ್ರಸಾದ್ ಆಕ್ರೋಶ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಒಳಮೀಸಲಾತಿ ಜಾರಿಗಾಗಿ 35 ವರ್ಷಗಳಿಂದ ನಿರಂತರ ಹೋರಾಟ ಮಾಡಿಕೊಂಡು ಬರಲಾಗುತ್ತಿದ್ದು, ಸದರಿ ಹೋರಾಟದಲ್ಲಿ ಹಲವು ಮಂದಿ ಪೊಲೀಸರ ಪ್ರತಿರೋಧದಿಂದ ಅಂಗವಿಕಲರಾಗಿರುವುದಲ್ಲದೇ ಜೀವ ಕಳೆದುಕೊಂಡಿದ್ದಾರೆ. ಮೀಸಲಾತಿ ಜಾರಿಗಾಗಿ ಇದೀಗ ಬೀದರ್‌ನಿಂದ ಕ್ರಾಂತಿಕಾರಿ ಪಾದಯಾತ್ರೆ ನಡೆಸಲಾಗುತ್ತಿದೆ ಎಂದರು.

ಚುನಾವಣಾ ಪೂರ್ವದ ಪ್ರಣಾಳಿಕೆಯಲ್ಲಿ ಮೊದಲ ಅಧಿವೇಶನದಲ್ಲಿಯೇ ಮೀಸಲಾತಿ ಜಾರಿ ಮಾಡುವುದಾಗಿ ಹೇಳಿದ ರಾಜ್ಯ ಸರ್ಕಾರ ಇಂದು ಮಾತು ತಪ್ಪಿದೆ. ಅಲ್ಲದೇ ಸದಾಶಿವ ಆಯೋಗ ನೀಡಿದ ವರದಿಯಲ್ಲಿ ಇಲ್ಲಸಲ್ಲದ ನೆಪ ಹೇಳಿಕೊಂಡು ಮೀಸಲಾತಿ ಜಾರಿಗೊಳಿಸಲು ಮೀನಾಮೇಷ ಎಣಿಸುತ್ತಿದೆ ಎಂದರು.

ಏ.13ರಿಂದ ಶ್ರೀ ಕಾಲ ಭೈರವೇಶ್ವರ ಕ್ಷೇತ್ರದಲ್ಲಿ ಜಾತ್ರಾ ಮಹೋತ್ಸವ



ಮದ್ದೂರು, ಏ.10-ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಮಂಡ್ಯ ಜಿಲ್ಲೆಯ ಮದ್ದೂರಿನ ಚಿಕ್ಕ ಅರಸಿಕೆರೆಯ ಶ್ರೀ ಕಾಲಭೈರವೇಶ್ವರ ಬಸಪ್ಪನವರ ಪುಣ್ಯ ಕ್ಷೇತ್ರದಲ್ಲಿ ಶ್ರೀ ಕಾಲಭೈರವೇಶ್ವರ ಚಾರಿಟೆಬಲ್ ಟ್ರಸ್ಟ್ ವತಿಯಿಂದ ಏ.13ರಿಂದ 20ರವರೆಗೆ ಜಾತ್ರಾ ಮಹೋತ್ಸವ ಏರ್ಪಡಿಸಲಾಗಿದೆ.

ಜಾತ್ರಾ ಮಹೋತ್ಸವವು ಶ್ರೀ ಡಾ. ಬಾಲಗಂಗಾಧರನಾಥ ಸ್ವಾಮೀಜಿ ಅವರ ದಿವ್ಯಾಶೀರ್ವಾದದೊಂದಿಗೆ ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಶ್ರೀ ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿ ದಿವ್ಯ ಸಾನ್ನಿಧ್ಯದಲ್ಲಿ ನೆರವೇರಲಿದ್ದು, ಏ.13ರಂದು ಬೆಳಗ್ಗೆ 9 ಗಂಟೆಗೆ ಚಿಕ್ಕ ಅರಸಿಕೆರೆಯ ಬ್ರಾಹ್ಮಣರಿಂದ ಹೋಮ-ಹವನ ಇತ್ಯಾದಿ ಪೂಜಾ ಕೈಂಕರ್ಯಗಳು ನೆರವೇರಲಿವೆ. ನಂತರ ಸಂಜೆ 6 ಗಂಟೆಗೆ ಗುರುದೇವರಹಳ್ಳಿ ಹುಣ್ಣನ ದೊಡ್ಡಿ ಗ್ರಾಮಸ್ಥರಿಂದ ಕೊಂಡ ಬಂಡಿ ಉತ್ಸವ ನಡೆಯಲಿದೆ. ರಾತ್ರಿ 10 ಗಂಟೆಗೆ ವಿವಿಧ ಉತ್ಸವ ನಡೆಯಲಿದೆ.

ಏ.14ರಂದು ಬೆಳಗ್ಗೆ 6.30ಕ್ಕೆ ಅಗ್ನಿಕೊಂಡ ಹಡಿಗೆಗಳ ಆರತಿ, 11.30ಕ್ಕೆ ಅನ್ನ ಸಂತರ್ಪಣೆ, ಸಂಜೆ 6.30ಕ್ಕೆ ಶ್ರೀ ವೀರಾಂಜನೇಯ ಸ್ವಾಮಿ ಪಲ್ಲಕ್ಕಿ ಉತ್ಸವ, ರಾತ್ರಿ 9 ಗಂಟೆಗೆ ನಾಟಕ ಪ್ರದರ್ಶನ ಮತ್ತು ರಾತ್ರಿ 12 ಗಂಟೆಗೆ ಕರಗ ಉತ್ಸವ ಮತ್ತು ಪೂಜಾ ಮೆರವಣಿಗೆ ಸಾಗಲಿದೆ.

ಏ.15ರಂದು 2.30ಕ್ಕೆ ಅನ್ನ ಸಂತರ್ಪಣೆ ಹಾಗೂ ಶ್ರೀ ಕಾಲಭೈರವೇಶ್ವರ ಸ್ವಾಮಿ ಮಹಾರಥೋತ್ಸವ ಹಾಗೂ ದೇವತೆಗಳ ಉತ್ಸವ ನಡೆಯಲಿದೆ. ಏ.16ರಂದು ಸಂಜೆ 5 ಗಂಟೆಗೆ ಗುರುದೇವರಹಳ್ಳಿ ಗ್ರಾಮಗಳಲ್ಲಿ ಓಕಳೀ ಸೇವೆ ಉತ್ಸವ, ಏ.17ರಂದು ಸಂಜೆ ಹುಣ್ಣನದೊಡ್ಡಿ ಗ್ರಾಮದಲ್ಲಿ ಓಕಳೀ ಸೇವೆ ಉತ್ಸವ ನಡೆಯಲಿದೆ. ಏ.18ರಂದು ಸಂಜೆ 5 ಗಂಟೆಗೆ ಛತ್ರದ ಹೊಸಹಳ್ಳಿ ಗ್ರಾಮದಲ್ಲಿ ಓಕಳೀ ಸೇವೆ ಉತ್ಸವ ನಡೆಯಲಿದೆ. ಏ.20ರಂದು ಶ್ರೀ ಚನ್ನಪ್ಪಾಜಿ ಸ್ವಾಮಿಯ ಸಿದ್ಧುಭಕ್ತಿ ಕಾರ್ಯಕ್ರಮ ನೆರವೇರಲಿದೆ.

ಸಮಾಜವನ್ನು ಸತ್ಯ, ಶಾಂತಿ ಮಾರ್ಗದಲ್ಲಿ ನಡೆಸಿದ ಮಹಾನ್ ಚೇತನ ವರ್ಧಮಾನ ಮಹಾವೀರ



ಮಂಡ್ಯ: ಸಮಾಜವನ್ನು ಸತ್ಯ ಮತ್ತು ಶಾಂತಿಯ ಕಡೆ ಕೊಂಡೊಯ್ದ ಮಹಾನ್ ಚೇತನ ವರ್ಧಮಾನ ಮಹಾವೀರ ಎಂದು ಜಿಲ್ಲಾಧಿಕಾರಿ ಡಾ.ಕುಮಾರ ಹೇಳಿದರು.

ನಗರದ ಜೈನ ಬೀದಿಯಲ್ಲಿ ಇರುವ ಶ್ರೀ ಅನಂತನಾಥ ಸ್ವಾಮಿ ದೇವಾಲಯ (ದಿಗಂಬರ ದೇವಾಲಯ) ವತಿಯಿಂದ ನಡೆದ ಮಹಾವೀರ ಜಯಂತಿಯ ಮೆರವಣಿಗೆ ಕಾರ್ಯಕ್ರಮದಲ್ಲಿ ಮಹಾವೀರ ಪುತ್ಥಳಿಗೆ ಪುಷ್ಪಾರ್ಚನೆ ಮಾಡುವ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ಜಗತ್ತಿಗೆ ಆಧ್ಯಾತ್ಮದ ಚಿಂತನೆಯನ್ನು ಜೈನಧರ್ಮದ 24ನೇ ತೀರ್ಥಂಕರರಾದ ಮಹಾವೀರರು ನೀಡಿದ್ದಾರೆ ಎಂದು ತಿಳಿಸಿದರು.

ಮಹಾವೀರರ ತತ್ವ ಮೌಲ್ಯ ಮತ್ತು ಅವರು ಬೋಧಿಸಿದ 5 ಪಂಚಶೀಲ ತತ್ವಗಳಾದ ಸತ್ಯ, ಅಹಿಂಸೆ, ಅಪರಿಗ್ರಹ, ಕ್ಷಮೆ ಮತ್ತು ಬ್ರಹ್ಮಚರ್ಯವನ್ನು ನಾವೆಲ್ಲರೂ ನಮ್ಮ ಜೀವನದಲ್ಲಿ ಅಳವಡಿಸಿಕೊಂಡರೆ ಸಮಾಜದಲ್ಲಿ ಸುಖ ಶಾಂತಿಯಿಂದ ಸಹಬಾಳ್ವೆಯಿಂದ ಜೀವನ ನಡೆಸಬಹುದು ಎಂದು ಹೇಳಿದರು.

ವರ್ಣರಂಜಿತ ರಥದ ಮೇಲೆ ಇರಿಸಲಾಗಿದ್ದ ಮಹಾವೀರರ ಪುತ್ಥಳಿಗೆ ಪುಷ್ಪಾರ್ಚನೆ ಮಾಡಿ ಮೆರವಣಿಗೆಗೆ ಜಿಲ್ಲಾಧಿಕಾರಿ ಡಾ ಕುಮಾರ ಅವರು ಚಾಲನೆ ನೀಡಿದರು. ಮೆರವಣಿಗೆಯು ಬ್ಯಾಂಡ್‌ಸೆಟ್‌ನ ಮೂಲಕ ನಗರದ ಪೇಟೆ ಬೀದಿ ಮೂಲಕ ನಂದಾ ವೃತ್ತ, ಮೈಸೂರು ರಸ್ತೆಯಲ್ಲಿ ಮೆರವಣಿಗೆ ಸಾಗಿ ಮೂಲಸ್ಥಾನ ದೇವಾಲಯಕ್ಕೆ ಮರಳಿತು.

ಇದೇ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಡಾ ಕುಮಾರ, ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ, ನಗರಸಭೆ ಅಧ್ಯಕ್ಷ ಎಂ.ವಿ.ಪ್ರಕಾಶ್, ಜೈನ ಸಮುದಾಯದ ಅಧ್ಯಕ್ಷರಾದ ಶಾಂತಿ ಪ್ರಸಾದ್ ಜೈನ್, ಜೈನ ಸಮುದಾಯದ ಮುಖಂಡರುಗಳಾದ ರಾಕೇಶ್ ಜೈನ್ ಶ್ರೀಧರ್ ಜೈನ್, ಶಶಿಧರ್ ಜೈನ್, ಪದ್ಮನಾಭ ಜೈನ್ ಇನ್ನಿತರರು ಉಪಸ್ಥಿತರಿದ್ದರು.

ಸಾಕ್ಷಿಬೀಡು ಡೇರಿ ಅಧ್ಯಕ್ಷರಾಗಿ ಯಶವಂತ್, ಉಪಾಧ್ಯಕ್ಷರಾಗಿ ಮಂಜಾಚಾರಿ ಆಯ್ಕೆ

ಕೆ.ಆರ್.ಪೇಟೆ,ಏ.10- ತಾಲೂಕಿನ ಸಾಕ್ಷಿಬೀಡು ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಯಶವಂತ್, ಉಪಾಧ್ಯಕ್ಷರಾಗಿ ಮಂಜಾಚಾರಿ ಆಯ್ಕೆಯಾಗಿದ್ದಾರೆ.

ಅಧ್ಯಕ್ಷ ಸ್ಥಾನ ಬಯಸಿ ಯಶವಂತ್ ಮತ್ತು ಎಸ್.ಜಿ.ದರ್ಶನ್ ನಾಮಪತ್ರ ಸಲ್ಲಿಸಿದ್ದರು. ಚುನಾವಣೆಯಲ್ಲಿ ಯಶವಂತ್ 8 ಮತಗಳನ್ನು ಪಡೆದು ಗೆಲುವು ಸಾಧಿಸಿದರು. ಉಪಾಧ್ಯಕ್ಷ ಸ್ಥಾನ ಬಯಸಿ ಮಂಜಾಚಾರಿ ಹೊರತುಪಡಿಸಿ ಬೇರೆ ಯಾರೂ ಸಹ ನಾಮಪತ್ರ ಸಲ್ಲಿಸದ ಕಾರಣ, ಉಪಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದರು.

ಚುನಾವಣಾಧಿಕಾರಿಯಾಗಿ ಸಹಕಾರ ಇಲಾಖೆಯ ಅಧಿಕಾರಿ ಹೆಚ್.ಎಸ್.ಮುಕ್ತ ಕಾರ್ಯನಿರ್ವಹಣೆ ಮಾಡಿದರು. ಸಹ ಚುನಾವಣಾಧಿಕಾರಿಯಾಗಿ ಸಂಘದ ಸಿಇಓ ಸುಬ್ರಹ್ಮಣ್ಯ ಕಾರ್ಯನಿರ್ವಹಿಸಿದರು.



ತಾಲೂಕಿನ ಸಾಕ್ಷಿಬೀಡು ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಯಶವಂತ್, ಉಪಾಧ್ಯಕ್ಷರಾಗಿ ಮಂಜಾಚಾರಿ ಆಯ್ಕೆಯಾಗಿದ್ದು, ಅವರನ್ನು ಸಂಘದ ನಿರ್ದೇಶಕರು ಅಭಿನಂದಿಸಿದರು.

ಒಂದನೇ ಪುಟದಿಂದ

ತಿಮಿಂಗಲ ವಾಂತಿ ಜಪ್ತಿ; 10 ಮಂದಿ ಬಂಧನ

ಎರಡು ಕಾರುಗಳನ್ನು ಪರಿಶೀಲನೆ ನಡೆಸಿದ ಸಂದರ್ಭ ಇದು ಪತ್ತೆಯಾಗಿದೆ. ತಿರುವನಂತಪುರದಿಂದ ಕಣ್ಣೂರು ಮಾರ್ಗವಾಗಿ ಬೆಂಗಳೂರು ಅಥವಾ ಆಂಧ್ರಪ್ರದೇಶದಲ್ಲಿ ಮಾರಾಟ ಮಾಡಲು ಆರೋಪಿಗಳು ಯೋಜನೆ ರೂಪಿಸಿದ್ದರು. ಇದಕ್ಕಾಗಿ ಕೊಡಗು ಮೂಲಕ ಸಾಗಾಟ ಮಾಡಿದ್ದಾರೆ. ಕೊಡಗು ಜಿಲ್ಲೆಯಲ್ಲಿ ಇದೇ ಮೊದಲ ಬಾರಿಗೆ ಇಷ್ಟು ದೊಡ್ಡ ಮೊತ್ತದ ಸ್ವತ್ತನ್ನು ವಶಕ್ಕೆ ಪಡೆಯಲಾಗಿದೆ ಎಂದು ಹೇಳಿದರು.

ಇದು ತೇಲುವ ಚಿನ್ನ: ತಿಮಿಂಗಲ ತನ್ನ ಹೊಟ್ಟೆಯಿಂದ ತ್ಯಾಜ್ಯ ಹೊರಹಾಕಲು ರಾಸಾಯನಿಕ ಉತ್ಪತ್ತಿ ಮಾಡುತ್ತದೆ. ಈ ರಾಸಾಯನಿಕ ನೀರಿನ ಮೂಲಕ ತೇಲುವ ವಸ್ತುವಾಗಿ ಅಂಬರ್ಗ್ರೀಸ್ ಸ್ವರೂಪ ಪಡೆಯುತ್ತದೆ. ಅತ್ಯಂತ ವಿರಳ ಹಾಗೂ ಬಹು ಬೇಡಿಕೆ ಇರುವ ಅಂಬರ್ಗ್ರೀಸ್ ಅನ್ನು 'ತೇಲುವ ಚಿನ್ನ' ಎಂದೂ ಕರೆಯಲಾಗುತ್ತದೆ. ಇದೇ ಕಾರಣಕ್ಕೆ ವಿದೇಶಗಳಲ್ಲಿ ತಿಮಿಂಗಲ ಬೇಟೆಯನ್ನು ಮಾಡಲಾಗುತ್ತದೆ ಎಂದು ಎಸ್.ಪಿ ರಾಮರಾಜನ್ ಹೇಳಿದರು.

ಭಾರತದಲ್ಲಿ ತಿಮಿಂಗಲ ಪ್ರಭೇಧ ಅತೀ ವಿನಾಶದ ಅಂಚಿನಲ್ಲಿರುವ ಹಿನ್ನೆಲೆಯಲ್ಲಿ ಅಂಬರ್ಗ್ರೀಸ್ ಸಂಗ್ರಹ ಕಾನೂನು ಬಾಹಿರವಾಗಿದೆ. ಈ ಹಿನ್ನೆಲೆಯಲ್ಲಿ ಬಂಧಿತ ಎಲ್ಲಾ ಆರೋಪಿಗಳ ವಿರುದ್ಧ ವನ್ಯ ಜೀವಿ ಸಂರಕ್ಷಣಾ ಕಾಯಿದೆ ಅಡಿ ಪ್ರಕರಣ ದಾಖಲಿಸಲಾಗಿದೆ ಎಂದು ಮಾಹಿತಿ ನೀಡಿದರು.

ಮಹಿಳೆ ನೀಡಿದ್ದಾಗಿ ಹೇಳಿಕೆ: ತಿರುವನಂತಪುರ ನಿವಾಸಿ ಶಂಶುದ್ದೀನ್ ಎಂಬಾತ ಪ್ರಕರಣದ ಪ್ರಮುಖ ಆರೋಪಿಯಾಗಿದ್ದು, ಆತನನ್ನು ವಿಚಾರಣೆ ನಡೆಸಿದ ಸಂದರ್ಭ ಮೀನು ಮಾರುವ ಮಹಿಳೆ ತನಗೆ ನೀಡಿರುವುದಾಗಿ ಹೇಳಿಕೆ ನೀಡಿದ್ದಾನೆ. ಈ ಕುರಿತು ಹೆಚ್ಚಿನ ವಿಚಾರಣೆ ನಡೆಯುತ್ತಿದೆ ಎಂದು ಕೆ.ರಾಮರಾಜನ್ ಹೇಳಿದರು.

ಆರೋಪಿ ಶಂಶುದ್ದೀನ್ ನವಾಝ್ ಎಂಬಾತನಿಗೆ ವಿಚಾರ ತಿಳಿಸಿದ ಮೇರೆಗೆ ಆತನಿಗೆ ಪರಿಚಯವಿದ್ದ ಬಾಲಚಂದ್ರ ನಾಯಕ್ ಮೂಲಕ ಮಾರಾಟ ಮಾಡಲು ರಾಘವೇಂದ್ರ ಎಂಬಾತನ ಸಂಪರ್ಕಿಸಿ ಯೋಜನೆ ರೂಪಿಸಿದ್ದಾರೆ. ಇವರ ಜೊತೆಯಲ್ಲಿ ಇತರ ಆರೋಪಿಗಳು ಕೈ ಜೋಡಿಸಿದ್ದಾರೆ. ಪ್ರಕರಣದ 10 ಆರೋಪಿಗಳನ್ನು ಬಂಧಿಸಲಾಗಿದೆ. ಈ ಕುರಿತು ನ್ಯಾಯಾಲಯಕ್ಕೆ ವರದಿ ನೀಡಿ ಮುಂದಿನ ಕ್ರಮ ಕೈಗೊಳ್ಳುವುದಾಗಿ ಹೇಳಿದರು.

ವಿರಾಜಪೇಟೆ ಡಿವೈಎಸ್‌ಪಿ ಮಹೇಶ್ ಕುಮಾರ್.ಎಸ್. ವೃತ್ತ ನಿರೀಕ್ಷಕ ಅನೂಪ್ ಮಾದಪ್ಪ, ಠಾಣಾಧಿಕಾರಿ ಪ್ರಮೋದ್ ಹೆಚ್.ಎಸ್, ಎಎಸ್‌ಐ ಮಂಜುನಾಥ್, ಸಿಬ್ಬಂದಿಗಳಾದ ಗಿರೀಶ್, ಧರ್ಮ, ನಿಶಾಂತ್, ಚಂದ್ರಶೇಖರ್ ಅವರುಗಳು ಕಾರ್ಯಾಚರಣೆ ನಡೆಸಿದ್ದು, ಈ ತನಿಖಾ ತಂಡವನ್ನು ಎಸ್.ಪಿ. ರಾಮರಾಜನ್ ಶ್ಲಾಘಿಸಿದ್ದಾರೆ.

ಬೆಟ್ಟದಲ್ಲಿ ಸಚಿವ ಸಂಪುಟ ಸಭೆ

ಇದೀಗ ಏಪ್ರಿಲ್ 24ರಂದು ನಡೆಸಲು ಚಿಂತನೆ ನಡೆಸಿದೆ ಎಂದು ತಿಳಿದುಬಂದಿದೆ. ಬುಧವಾರ ನಗರದಲ್ಲಿ ನಡೆದ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಸಚಿವ ಕೆ. ವೆಂಕಟೇಶ್ ಅವರು, ಏಪ್ರಿಲ್ 24ರಂದು ನಡೆಯಲಿರುವ ಸಚಿವ ಸಂಪುಟ ಸಭೆಗೆ ಸಿದ್ಧತೆಗಳನ್ನು ಪ್ರಾರಂಭಿಸುವಂತೆ ಜಿಲ್ಲಾಧಿಕಾರಿ ಮತ್ತು ಇತರ ಸ್ಥಳೀಯ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ. ಈ ಬಾರಿಯ ಬಜೆಟ್‌ನಲ್ಲಿ ಚಾಮರಾಜನಗರ ಜಿಲ್ಲೆ ಸೀಮಿತ ಹಣ ಹಾಗೂ ಯೋಜನೆಗಳನ್ನು ನೀಡಲಾಗಿದ್ದು, ಜಿಲ್ಲೆಯಲ್ಲಿ ನಡೆಯುತ್ತಿರುವ ಸಂಪುಟ ಸಭೆಯಲ್ಲಿ ಸಾಕಷ್ಟು ನಿರೀಕ್ಷೆಗಳನ್ನು ಹುಟ್ಟಿಸಿದೆ.

ಈ ಪ್ರದೇಶದ ಜನರು ಮೂಲಭೂತ ಮೂಲಸೌಕರ್ಯ, ನೀರಾವರಿ, ಆರೋಗ್ಯ ಸೇವೆಗಳಲ್ಲಿ ಸುಧಾರಣೆಗಳನ್ನು ನಿರೀಕ್ಷಿಸುತ್ತಿದ್ದಾರೆ ಮತ್ತು ಜಿಲ್ಲೆಗೆ ವಿಶೇಷ ಪ್ಯಾಕೇಜ್‌ನ್ನೂ ನಿರೀಕ್ಷಿಸುತ್ತಿದ್ದಾರೆ. ಏತನ್ಮಧ್ಯೆ, ಬಂಡೀಪುರ ಅರಣ್ಯದಲ್ಲಿ ರಾತ್ರಿ ಸಂಚಾರ ನಿಷೇಧವನ್ನು ತೆಗೆದುಹಾಕುವ ಗುರಿಯನ್ನು ಹೊಂದಿರುವ ಯಾವುದೇ ಪ್ರಸ್ತಾಪವನ್ನು ತಿರಸ್ಕರಿಸುವಂತೆ ಪರಿಸರವಾದಿಗಳು ಮತ್ತು ಪರಿಸರ ಪ್ರೇಮಿಗಳು ಮುಖ್ಯಮಂತ್ರಿ ಮತ್ತು ಸಚಿವ ಸಂಪುಟವನ್ನು ಒತ್ತಾಯಿಸಲು ಚಿಂತನೆ ನಡೆಸುತ್ತಿದ್ದಾರೆಂದು ತಿಳಿದುಬಂದಿದೆ.

ಅಧಿಕ ಕಮಿಷನ್ ದಂಧೆ

ಮತ್ತು ಮಧ್ಯಮ ವರ್ಗದವರಿಗೆ ಮೊದಲು ಪಾವತಿಸಿ ಎಂಬುದಾಗಿ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಹಾಗೂ ಲೋಕೋಪಯೋಗಿ ಸಚಿವರಿಗೆ ಮೂರು ಬಾರಿ ಪತ್ರ ಬರೆದಿದ್ದೇವೆ. ಸಿದ್ದರಾಮಯ್ಯ ಅವರು ಕರೆದಿದ್ದ ಸಭೆಯಲ್ಲೂ ಇದನ್ನೇ ಪ್ರಸ್ತಾಪ ಮಾಡಿದ್ದೇವೆ. ಆದರೆ, ಐದು ಲಕ್ಷ, 10 ಲಕ್ಷ ರೂ. ಮೌಲ್ಯದ ಕೆಲಸ ನಿರ್ವಹಿಸಿದ ಗುತ್ತಿಗೆದಾರರಿಗೆ ಹಣ ನೀಡುತ್ತಿಲ್ಲ. ದೊಡ್ಡ ದೊಡ್ಡವರು, ಸಚಿವರ ಮಕ್ಕಳು ಮತ್ತು ಸಂಬಂಧಿಕರಿಗೆ ಕಮಿಷನ್ ನೀಡಿ ಬಾಕಿ ಬಿಡುಗಡೆ ಮಾಡಿಸಿಕೊಳ್ಳುತ್ತಿದ್ದಾರೆ, ಸಣ್ಣ ಗುತ್ತಿಗೆದಾರರು ಯಾರನ್ನು ಕೇಳಬೇಕು ಹೇಳಿ ಎಂದು ಪ್ರಶ್ನಿಸಿದರು. ಜಾರಕಿಹೊಳಿ ಪ್ರಾಮಾಣಿಕ ಸಚಿವರು. ಆದರೆ, ಅವರ ಸಂಬಂಧಿಕರು ಮಧ್ಯವರ್ತಿಗಳಾಗಿ ಕೆಲಸ ಮಾಡಿ, ಅವರಿಗೆ ಕೆಟ್ಟ ಹೆಸರು ತರುತ್ತಿದ್ದಾರೆ. ಬಿಜೆಪಿ ಸರ್ಕಾರದ ವಿರುದ್ಧ ಕಮಿಷನ್ ಆರೋಪ ಮಾಡಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಅವರಿಗಿಂತ ಹೆಚ್ಚು ಹಣ ಪಡೆದು ಬಾಕಿ ಬಿಡುಗಡೆ ಮಾಡುತ್ತಿದೆ ಎಂದು ಆರೋಪಿಸಿದರು.

ತಹವ್ವೂರ್ ರಾಣಾ ಬಂಧಿಸಿದ ಎನ್‌ಐಎ

ರಾಣಾನನ್ನು ಭಾರತ-ಅಮೆರಿಕ ಹಸ್ತಾಂತರ ಒಪ್ಪಂದದ ಅಡಿಯಲ್ಲಿ ಆರಂಭಿಸಲಾದ ವಿಚಾರಣೆಯ ಪ್ರಕಾರ ಅಮೆರಿಕದಲ್ಲಿ ನ್ಯಾಯಾಂಗ ಬಂಧನದಲ್ಲಿ ಇರಿಸಲಾಗಿತ್ತು. ಈ ನಡುವೆ ರಾಣಾನನ್ನು ಭಾರತಕ್ಕೆ ಹಸ್ತಾಂತರಿಸುವುದನ್ನು ತಡೆಹಿಡಿಯುವಂತೆ ಕೋರಿ ಸಲ್ಲಿಸಿದ್ದ ಪರಿಶೀಲನಾ ಅರ್ಜಿಯನ್ನು ಅಮೆರಿಕಾ ಸುಪ್ರೀಂ ಕೋರ್ಟ್ ವಜಾಗೊಳಿಸಿದ ನಂತರ ಭಾರತದ ತನಿಖಾಧಿಕಾರಿಗಳ ತಂಡ ಅಮೆರಿಕಕ್ಕೆ ಪ್ರಯಾಣ ಬೆಳೆಸಿತ್ತು.

ರಾಣಾನನ್ನು ಭಾರತಕ್ಕೆ ಹಸ್ತಾಂತರಿಸುವ ಪ್ರಕ್ರಿಯೆಯಲ್ಲಿ ಅಮೆರಿಕದ ಡಿಒಜೆ, ಸ್ಕೈ ಮಾರ್ಷಲ್, ಭಾರತದ ಎನ್‌ಐಎ ಮತ್ತಿತರ ಭಾರತೀಯ ಗುಪ್ತಚರ ಸಂಸ್ಥೆಗಳು, ನ್ಯಾಷನಲ್ ಸೆಕ್ಯುರಿಟಿ ಗಾರ್ಡ್‌ನೊಂದಿಗೆ ಪ್ರಕ್ರಿಯೆಯಲ್ಲಿ ಪಾಲ್ಗೊಂಡವು. ಭಾರತದ ವಿದೇಶಾಂಗ ಸಚಿವಾಲಯ ಮತ್ತು ಗೃಹ ವ್ಯವಹಾರಗಳ ಸಚಿವಾಲಯವು ಹಸ್ತಾಂತರ ಪ್ರಕ್ರಿಯೆಯನ್ನು ಯಶಸ್ವಿಯಾಗಿಸಲು ಅಮೆರಿಕದ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿತು ಎಂದು ಎನ್‌ಎಸ್‌ಜಿ ಹೇಳಿದೆ. ಮುಂಬೈ ಭಯೋತ್ಪಾದಕ ದಾಳಿ ಪ್ರಕರಣದಲ್ಲಿ ರಾಷ್ಟ್ರೀಯ ತನಿಖಾ ಸಂಸ್ಥೆ ನಡೆಸಿದ ಮೊದಲ ಬಂಧನ ಇದು. ಈ ಪ್ರಕರಣದ ಇತರ ಆರೋಪಿಗಳು ತಲೆಮರೆಸಿಕೊಂಡಿದ್ದಾರೆ. ತಹವ್ವೂರ್ ರಾಣಾನನ್ನು ಎನ್‌ಐಎ ಪ್ರಶ್ನಿಸುವುದರಿಂದ ಅನೇಕ ರಹಸ್ಯಗಳನ್ನು ಬಹಿರಂಗವಾಗುವ ಸಾಧ್ಯತೆಯಿದೆ.

ಮುಂಬೈ ಭಯೋತ್ಪಾದಕ ದಾಳಿ ಪ್ರಕರಣದಲ್ಲಿ ಎನ್‌ಐಎ ದಾಖಲಿಸಿರುವ ಪ್ರಕರಣದಲ್ಲಿ ಡೇವಿಡ್ ಕೋಲ್ಮನ್ ಹೆಡ್ಲಿ ಮತ್ತು ಇತರ ಭಯೋತ್ಪಾದಕರು ಸಹ ಆರೋಪಿಗಳಾಗಿದ್ದಾರೆ. ಹೆಡ್ಲಿ ಅಮೆರಿಕದ ಜೈಲಿನಲ್ಲಿ ಬಂಧಿಯಾಗಿದ್ದಾನೆ. ಇತರ ಭಯೋತ್ಪಾದಕರು ಪಾಕಿಸ್ತಾನದಲ್ಲಿ ಮುಕ್ತವಾಗಿ ಸುತ್ತಾಡುತ್ತಿದ್ದಾರೆ ಅಥವಾ ಲಷ್ಕರ್-ಎ-ತೈಬಾ ಸಂಸ್ಥಾಪಕ ಹಫೀಜ್ ಸಯೀದ್ ಸುರಕ್ಷಿತ ತಾಣಗಳಲ್ಲಿ ವಾಸಿಸುತ್ತಿದ್ದಾರೆ.

ತನಿಖಾಧಿಕಾರಿಗಳ ಪ್ರಕಾರ ರಾಣಾ ಪಾತ್ರವು ಅಜ್ಮಲ್ ಕಸಬ್‌ಗಿಂತ ಹೆಚ್ಚು ಮುಖ್ಯವಾಗಿದೆ. ಭಯೋತ್ಪಾದಕ ದಾಳಿ ನಡೆಸಲು ಬಂದ ಭಯೋತ್ಪಾದಕರಲ್ಲಿ ಕಸಬ್ ಒಬ್ಬ. ಅವನಿಗೆ ಮರಣದಂಡನೆ ವಿಧಿಸಲಾಯಿತು. ರಾಣಾನನ್ನು ಪ್ರಶ್ನಿಸುವುದರಿಂದ 26/11 ಪಿತೂರಿಯನ್ನು ಮಾತ್ರವಲ್ಲದೆ ರಾಣಾ-ಹೆಡ್ಲಿ ಜೋಡಿ ಭಾರತಕ್ಕೆ ಹಲವಾರು ಬಾರಿ ಭೇಟಿ ನೀಡಿದ ಸಮಯದಲ್ಲಿ ರೂಪಿಸಿದ ಇತರ ಭಯೋತ್ಪಾದಕ ಸಂಚುಗಳನ್ನು ಸಹ ಭೇದಿಸಲು ಎನ್‌ಐಎಗೆ ಸಹಾಯವಾಗುತ್ತದೆ.

ಲಷ್ಕರ್-ಎ-ತೊಯಿಬಾ ಮತ್ತು ಹುಜಿ ಭಯೋತ್ಪಾದಕ ಸಂಘಟನೆಗಳಿಗಾಗಿ ಭಾರತದ ಪ್ರಮುಖ ಸ್ಥಳಗಳ ಮೇಲೆ ದಾಳಿ ನಡೆಸಲು ಹೆಡ್ಲಿ ಮತ್ತು ಇತರ ಸಂಚುಕೋರರು ಯೋಜನೆ ರೂಪಿಸಿದ್ದಾರೆ ಎಂದು ಎನ್‌ಐಎ ತನ್ನ ಆರೋಪಪಟ್ಟಿಯಲ್ಲಿ ತಿಳಿಸಿದೆ. ದೆಹಲಿಯ ವಿವಿಧ ಚಾಬಾದ್ ಮನೆಗಳು ಮತ್ತು ರಾಷ್ಟ್ರೀಯ ರಕ್ಷಣಾ ಕಾಲೇಜಿನ ಮೇಲೆ ದಾಳಿ ಮಾಡಲು ಅವನು ಯೋಜಿಸಿದ್ದ. ಝಕಿಯುರ್-ರೆಹಮಾನ್ ಲಖ್ವಿ ಹೆಡ್ಲಿಗೆ ಭಾರತದಲ್ಲಿ ಬೇಹುಗಾರಿಕೆಯ ಕೆಲಸವನ್ನು ನೀಡಿದ್ದ. ಮುಂಬೈ ಭಯೋತ್ಪಾದಕ ದಾಳಿಯಲ್ಲಿ 166 ಜನರು ಸಾವನ್ನಪ್ಪಿದ್ದರು. 238 ಜನರು ಗಾಯಗೊಂಡಿದ್ದಾರೆ. ದಾಳಿ ನಡೆಸಲು ಇತರ ಸಂಚುಕೋರರಿಗೆ ಸಾಜಿದ್ ಮಿರ್ ಮಾರ್ಗದರ್ಶನ ನೀಡಿದ್ದ.

ಯಾರೂ ಈ ತಹವ್ವೂರ್ ರಾಣಾ: ತಹಾವ್ವೂರ್ ಹುಸೇನ್ ರಾಣಾ 1961ರ ಜ.12ರಂದು ಪಾಕಿಸ್ತಾನದ ಪಂಜಾಬ್‌ನ ಚಿಚಾವತ್ನಿಯಲ್ಲಿ ಜನಿಸಿದ್ದು, ಆತ ಕ್ಯಾಡೆಟ್ ಕಾಲೇಜಿನಲ್ಲಿ ವಿದ್ಯಾಭ್ಯಾಸ ಪೂರ್ಣಗೊಳಿಸಿದ್ದ. ಕ್ಯಾಡೆಟ್ ಕಾಲೇಜಿನಲ್ಲಿ 26/11 ಮುಂಬೈ ಭಯೋತ್ಪಾದಕ ದಾಳಿಯಲ್ಲಿ ಸಹ-ಸಂಚುಕೋರ ಡೇವಿಡ್ ಹೆಡ್ಲಿ ಜತೆ ನಿಕಟ ಸಂಪರ್ಕ ಬೆಳೆದಿತ್ತು. ಕಾಲೇಜು ವಿದ್ಯಾಭ್ಯಾಸ ಮುಗಿದ ನಂತರ ರಾಣಾ ಪಾಕಿಸ್ತಾನ ಸೇನಾ ವೈದ್ಯಕೀಯ ದಳಕ್ಕೆ ಸೇರಿದ್ದ ಮತ್ತು ಕ್ಯಾಪ್ಟನ್-ಜನರಲ್ ಡ್ಯೂಟಿ ಪ್ರಾಕ್ಟೀಷನರ್ ಆಗಿ ಸೇವೆ ಸಲ್ಲಿಸಿದ. 1997ರಲ್ಲಿ ಮಿಲಿಟರಿಯನ್ನು ತೊರೆದ ಆತ ವೈದ್ಯೆ ಪತ್ನಿಯೊಂದಿಗೆ ಕೆನಡಾಕ್ಕೆ ತೆರಳಿದ್ದ. ರಾಣಾ ಮತ್ತು ಅವರ ಪತ್ನಿ ಇಬ್ಬರೂ 2001ರಲ್ಲಿ ಕೆನಡಾದ ಪೌರತ್ವ ಪಡೆದಿದ್ದರು. 26/11 ದಾಳಿಯನ್ನು ಯೋಜಿಸಲು ಬಳಸಲಾಗುವ ಮುಂಬೈನಲ್ಲಿ ಕಚೇರಿಯನ್ನು ಸ್ಥಾಪಿಸಲು ರಾಣಾ ಹೆಡ್ಲಿಗೆ ಸಹಾಯ ಮಾಡಿದ್ದಾನೆ ಎಂದು ಆರೋಪಿಸಲಾಗಿದೆ.

ಜಾತಿ ಗಣತಿ ಮಂಡನೆ

ಅಥವಾ ಅಂಕಿ-ಅಂಶಗಳು ಬಹಿರಂಗಗೊಳ್ಳುತ್ತವೆಯೋ ಎಂಬ ಕುತೂಹಲ ಮೂಡಿದೆ. ವರದಿ ಬಹಿರಂಗಗೊಳ್ಳುತ್ತಿದ್ದಂತೆ ಕಾನೂನು-ಸುವ್ಯವಸ್ಥೆ ಮೇಲೆ ಭಾರೀ ಪರಿಣಾಮ ಬೀರಬಹುದೆಂಬ ಭಯವೂ ಸರ್ಕಾರಕ್ಕಿದೆ. ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಮುಖ್ಯಮಂತ್ರಿ ಅವರು ವಿಷಯವನ್ನು ಸಭೆ ಮುಂದೆ ತರುತ್ತಿದ್ದಾರೆ.

ಅವರ ಮುಂದೆ, ವಿಷಯವನ್ನು ಮತ್ತೆ ಮುಂದೂಡುವುದೋ, ಇಲ್ಲವೇ ಸಂಪುಟದಲ್ಲಿ ದಾಖಲೆ ಬಿಡುಗಡೆ ಮಾಡದೆ, ತುರ್ತು ವಿಧಾನಮಂಡಲ ಅಧಿವೇಶನ ಕರೆದು ಚರ್ಚೆ ನಡೆಸುವುದು. ಇದಲ್ಲದೆ, ಸಂಪುಟ ಉಪಸಮಿತಿ ರಚನೆ ಮಾಡುವುದೋ ಅಥವಾ ಸಚಿವರನ್ನು ಒಳಗೊಂಡ ವಿವಿಧ ಸಮುದಾಯಗಳ ತಜ್ಞರ ಸಮಿತಿ ರಚಿಸುವ ಬಗ್ಗೆಯೂ ಮುಖ್ಯಮಂತ್ರಿ ಆಲೋಚನೆ ಮಾಡಿದ್ದಾರೆ.

ಮೊದಲ ಬಾರಿಗೆ ಸಂಪುಟದಲ್ಲಿ ವಿಷಯ ಪ್ರಸ್ತಾಪವಾದ ತಕ್ಷಣವೇ ಪಕ್ಷದಲ್ಲಿ ವಿರೋಧ ವ್ಯಕ್ತವಾದ ಹಿನ್ನೆಲೆಯಲ್ಲಿ ಮುಂದೂಡಲ್ಪಟ್ಟಿತ್ತು.

ಇತ್ತೀಚೆಗೆ ಸಿದ್ದರಾಮಯ್ಯ ದೆಹಲಿ ಪ್ರವಾಸ ವೇಳೆ ರಾಹುಲ್ ಗಾಂಧಿ ಅವರನ್ನು ಏಕಾಂಗಿಯಾಗಿ ಭೇಟಿ ಮಾಡಿ ವರದಿ ಮಂಡನೆಗೆ ಅನುಮತಿ ಪಡೆದುಕೊಂಡಿದ್ದಾರೆ. ಅಷ್ಟೇ ಅಲ್ಲ, ಗುಜರಾತ್‌ನಲ್ಲಿ ನಡೆದ ಎರಡು ದಿನಗಳ ಎಐಸಿಸಿ ಅಧಿವೇಶನ ಸಂದರ್ಭದಲ್ಲೂ ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ ಹಾಗೂ ಕೆ.ಸಿ.ವೇಣುಗೋಪಾಲ್ ಅವರೊಂದಿಗೆ ಚರ್ಚೆ ಮಾಡಿದ್ದಾರೆ. ಈ ಬೆಳವಣಿಗೆ ನಂತರವೇ ಸಿದ್ದರಾಮಯ್ಯ ಮಂತ್ರಿಮಂಡಲ ಸಭೆಯ ವಿಷಯ ಪಟ್ಟಿಯಲ್ಲಿ ಸೇರ್ಪಡೆ ಮಾಡಿದ್ದಾರೆ. ಶುಕ್ರವಾರ ನಡೆಯುವ ಮಂತ್ರಿಮಂಡಲ ಸಭೆ ಇದರ ಬಗ್ಗೆ ಏನೇ ತೀರ್ಮಾನ ಕೈಗೊಂಡರೂ ಅದು ರಾಜಕೀಯ ಸ್ವರೂಪ ಪಡೆಯಲಿದೆ.

ಕಂದಾಯ ಸಚಿವರು ಸರ್ಕಾರಕ್ಕೆ ಗೌರವ ತಂದಿದ್ದಾರೆ...

- **ಮುಖ್ಯಮಂತ್ರಿ ಸಿದ್ದರಾಮಯ್ಯ ಇತರೆ ಸಚಿವರಿಗೆ ಪರೋಕ್ಷ ಬುದ್ಧಿ ಮಾತು**
- **ಕಾಳಜಿ, ಬದ್ಧತೆ ಇದ್ದರಷ್ಟೇ ಸಚಿವರು ಉತ್ತಮ ಕೆಲಸ ಮಾಡಬಹುದು**

ಬೆಂಗಳೂರು, ಏ.10(ಕೆಎಂಶಿ)- ಕಾಳಜಿ ಮತ್ತು ಬದ್ಧತೆ ಇದ್ದರಷ್ಟೇ ಮಂತ್ರಿಗಳು ಉತ್ತಮ ಕೆಲಸ ಮಾಡಲು ಸಾಧ್ಯ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸಚಿವರುಗಳಿಗೆ ಕಿವಿಮಾತು ಹೇಳಿದ್ದಾರೆ.



ಸಚಿವರು ವಹಿಸಿಕೊಂಡ ಇಲಾಖೆ ಮೇಲೆ ಹಿಡಿತ ಸಾಧಿಸಿ, ಅಂಕಿ-ಅಂಶಗಳನ್ನು ಬೆರಳತುದಿಯಲ್ಲಿ ಇಟ್ಟುಕೊಂಡರೆ ಆಡಳಿತ ಸುಗಮವಾಗಿ ನಡೆದು, ಯೋಜನೆಗಳು ಜನರಿಗೆ ಮುಟ್ಟುತ್ತವೆ. ಸಮಯಾನುಸಾರ ಇಲಾಖಾ ಸಭೆಗಳನ್ನು ನಡೆಸಿ ಅಧಿಕಾರಿಗಳ ಮೇಲೆ ಹಿಡಿತ ಸಾಧಿಸಿದರೆ, ತಾನಾಗಿಯೇ ಎಲ್ಲಾ ಕಾರ್ಯವೂ ನಡೆಯುತ್ತದೆ. ಕಂದಾಯ ಸಚಿವರು ಈ ದಿಸೆಯಲ್ಲಿ ಬಹಳ ಯಶಸ್ವಿಯಾಗಿ ಕೆಲಸ ಮಾಡಿ, ಸರ್ಕಾರಕ್ಕೆ ಗೌರವ ತಂದಿದ್ದಾರೆ ಎನ್ನುವುದರ ಮೂಲಕ ಇತರ ಸಚಿವರಿಗೆ ಸಾರ್ವಜನಿಕ ವೇದಿಕೆಯಲ್ಲೇ ಪರೋಕ್ಷವಾಗಿ ಬುದ್ಧಿಮಾತು ಹೇಳಿದ್ದಾರೆ.

ಕಂದಾಯ ಇಲಾಖೆ ಸರ್ಕಾರಕ್ಕೆ ಮಾತೃ ಇಲಾಖೆ ಇದ್ದಂತೆ. ಪೋಡಿ ಮುಕ್ತ ಗ್ರಾಮಗಳಾಗಬೇಕು, ಸರ್ವೇ ಕಾರ್ಯ ಪೂರ್ಣಗೊಳ್ಳಬೇಕು, ಪರವಾನಗಿ ಭೂ ಮಾಪಕರ ಖಾಯಂ ಮಾಡಲು ಗಂಭೀರ ಕ್ರಮದ ಜೊತೆಗೆ 36 ಎಡಿಎಲ್‌ಆರ್‌ಗಳ ನೇಮಕ ಮಾಡಲಾಗುವುದು.

ವಿಧಾನಸೌಧದ ಮೆಟ್ಟಿಲುಗಳ ಮೇಲೆ ನಡೆದ ಭೂಮಾಪನ, ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ಇಲಾಖೆ ಹಾಗೂ ಇಲಾಖೆ ನೌಕರರ ಸಂಘಗಳ 36ನೇ ರಾಷ್ಟ್ರೀಯ ಭೂಮಾಪನಾ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ಇಲಾಖೆ ಅಚ್ಚುಕಟ್ಟಾಗಿ ಕೆಲಸ ಮಾಡಿದರೆ ರೈತ ಸಮುದಾಯ ನೆಮ್ಮದಿಯಾಗಿರುತ್ತದೆ ಎಂದರು.

ನಾನು ಎರಡು ಬಾರಿ ಮುಖ್ಯಮಂತ್ರಿಯಾಗಿ ಕಂದಾಯ ಇಲಾಖೆ ನೌಕರರ ಬಹಳಷ್ಟು ಸಮಸ್ಯೆಗಳನ್ನು ಬಗೆಹರಿಸಿದ್ದೇನೆ. ಪೂರ್ತಿ ಸಮಸ್ಯೆ ಬಗೆಹರಿದಿಲ್ಲ ಎನ್ನುವ ಬೇಸರ ನನಗೂ ಇದೆ. ತಹಶೀಲ್ದಾರ್, ಎಸಿ ಕಚೇರಿಗಳಲ್ಲಿ ಸುಗಮ ಹಾಗೂ ಪ್ರಾಮಾಣಿಕವಾಗಿ ಕೆಲಸಗಳಾದರೆ ನಾಡಿನ ಜನತೆ, ರೈತ ಸಮುದಾಯ ಅತ್ಯಂತ ನೆಮ್ಮದಿಯಾಗಿರುತ್ತದೆ.

ಕಂದಾಯ ಇಲಾಖೆಗೆ ಅಗತ್ಯ ಇರುವಷ್ಟು ಹಣ ಕೊಟ್ಟಿದ್ದೇವೆ. ಮುಂದೆಯೂ ಕೊಡುತ್ತೇವೆ. ಅಗತ್ಯ ಸಿಬ್ಬಂದಿ ಬಲವನ್ನೂ ಕೊಟ್ಟಿದ್ದೇವೆ. ಅಗತ್ಯ ಬಿದ್ದರೆ ಮತ್ತೂ ಕೊಡುತ್ತೇನೆ. ಖಾಲಿ ಇರುವ ಎಲ್ಲಾ ಸರ್ವೇಯರ್ ಹುದ್ದೆಗಳ ನೇಮಕಾತಿ ಅತ್ಯಂತ ಪಾರದರ್ಶಕವಾಗಿ ಆಗಿದೆ. ಸದ್ಯದಲ್ಲೇ ನೇಮಕಾತಿ ಪತ್ರವನ್ನೂ ಕೊಡುತ್ತೇವೆ. ಪರವಾನಗಿ ಭೂಮಾಪಕರ ಖಾಯಂ ಮಾಡಲು ಗಂಭೀರ ಚಿಂತನೆ ಮಾಡಲಾಗುವುದು. ಜೊತೆಗೆ 36 ಮಂದಿ ಎಡಿಎಲ್‌ಆರ್‌ಗಳ ನೇಮಕವನ್ನೂ ಸದ್ಯದಲ್ಲೇ ಮಾಡಲಾಗುವುದು ಎಂದು ಘೋಷಿಸಿದರು.

ನಮ್ಮದು ಹಳ್ಳಿಗಳ ಮತ್ತು ರೈತರ ದೇಶ. ಗ್ರಾಮಗಳು ಮತ್ತು ರೈತರು ನೆಮ್ಮದಿಯಾಗಿ ಉತ್ಪಾದನೆಯಲ್ಲಿ ತೊಡಗಬೇಕಾದರೆ ಸರ್ವೇ ಕಾರ್ಯ ಸರಿಯಾಗಿ ಪೂರ್ಣಗೊಳ್ಳಬೇಕು. ಕೆರೆ ಕಟ್ಟೆಗಳ ಒತ್ತುವರಿ ತೆರವುಗೊಳಿಸಬೇಕು, ಪೋಡಿ ಮುಕ್ತ ಗ್ರಾಮಗಳಾಗಬೇಕು. ಇದಕ್ಕಾಗಿ ಇಲಾಖೆಯ ಪ್ರತಿಯೊಬ್ಬರೂ ಪ್ರಾಮಾಣಿಕವಾಗಿ ಶ್ರಮಿಸಿ, ಧ್ವನಿ ಇಲ್ಲದವರ ಪರವಾಗಿ ಕೆಲಸ ಮಾಡುವುದೇ ನಿಜವಾದ ಪುಣ್ಯದ ಕಾರ್ಯ ಎಂದರು.

ತಂದೆಯಿಂದಲೇ ಪುತ್ರಿಯ ಮೇಲೆ ಅತ್ಯಾಚಾರ; ಗರ್ಭಿಣಿಯಾದ 16 ವರ್ಷದ ಬಾಲಕಿ..!

ಗದಗ, ಏ.10- ಅಪ್ರಾಪ್ತ ಪುತ್ರಿ ಮೇಲೆ ವ್ಯಕ್ತಿಯೊಬ್ಬ ಅತ್ಯಾಚಾರವೆಸಗಿ, ಆಕೆಯನ್ನು ಗರ್ಭಿಣಿಯಾಗಿಸಿದ ಹೇಯಕೃತ್ಯ ಗದಗ ಜಿಲ್ಲೆಯಲ್ಲಿ ನಡೆದಿದೆ.



55 ವರ್ಷದ ವ್ಯಕ್ತಿ ತನ್ನ ಮಗಳ ಮೇಲೆಯೇ ನಿರಂತರವಾಗಿ ಅತ್ಯಾಚಾರ ನಡೆಸಿದ್ದಾನೆ. ಈ ಪ್ರಕರಣ ಬಯಲಿಗೆ ಬರುತ್ತಿದ್ದಂತೆಯೇ ಪೊಲೀಸರು, ಕಾಮುಕ ತಂದೆ ಮೇಲೆ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಬಾಲಕಿ ಹೊಟ್ಟೆ ನೋವಿನಿಂದ ಬಳಲುತ್ತಿದ್ದು, ಈ ವೇಳೆ ಆಕೆಯ ತಾಯಿ ಚಿಕಿತ್ಸೆಗಾಗಿ ಗದಗ ವೈದ್ಯಕೀಯ ವಿಜ್ಞಾನ ಸಂಸ್ಥೆ (ಜಿಐಎಂಎಸ್)ಗೆ ಕರೆದುಕೊಂಡು ಹೋಗಿದ್ದಾರೆ. ಈ ವೇಳೆ ಬಾಲಕಿ ಗರ್ಭಿಣಿ ಎಂಬ ವಿಚಾರ ಬೆಳಕಿಗೆ ಬಂದಿದೆ.

ಬಳಿಕ ಬಾಲಕಿಯನ್ನು ವಿಚಾರಿಸಿದಾಗ ತಂದೆ ತನ್ನ ಮೇಲೆ ನಡೆಸಿದ ಪೈಶಾಚಿಕ ಕೃತ್ಯದ ಕುರಿತು ಬಾಯ್ಬಿಟ್ಟಿದ್ದಾರೆ. ವಿಚಾರವನ್ನು ಯಾರಿಗಾದರೂ ಹೇಳಿದರೆ ಹತ್ಯೆ ಮಾಡುವುದಾಗಿ ತಂದೆ ಬೆದರಿಗೆ ಹಾಕಿದ್ದು, ಭಯದಿಂದ ಯಾರಿಗೂ ಹೇಳಿರಲಿಲ್ಲ ಎಂದು ಬಾಲಕಿ ಹೇಳಿಕೊಂಡಿದ್ದಾಳೆ.

ಇದೀಗ ಬಾಲಕಿಯ ತಾಯಿ ಮುಳಗುಂದ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದು, ಪೊಲೀಸರು ಆರೋಪಿ ರಮೇಶ್ ನನ್ನು ಬಂಧನಕ್ಕೊಳಪಡಿಸಿ, ಪೋಕ್ಸೋ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಮಲತಂದೆಯಿಂದ ಕಿರುಕುಳ ಪ್ರಕರಣಗಳು ಸಾಮಾನ್ಯ ಆದರೆ, ಈ ಪ್ರಕರಣದಲ್ಲಿ ಸ್ವಂತ ಮಗಳ ಮೇಲೆ ಅತ್ಯಾಚಾರ ಮಾಡಿರುವುದು ನಿಜಕ್ಕೂ ಆಘಾತ ತಂದಿದೆ ಎಂದು ವೈದ್ಯರು ಹೇಳಿದ್ದಾರೆ.

ಮೈಸೂರು ಮಿತ್ರ

ಶುಕ್ರವಾರ 11 ಏಪ್ರಿಲ್ 2025

ನೈಪುಣ್ಯ ಬೇಸಿಗೆ ಅಂತರಿಕ್ಷ ಯಾನಕ್ಕೆ ಚಾಲನೆ



ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ಕ್ಯಾಂಪಸ್ ಆವರಣದಲ್ಲಿ ಬೇಸಿಗೆ ಅಂತರಿಕ್ಷ ಯಾನ ಕಾರ್ಯಾಗಾರದಲ್ಲಿ ಮಕ್ಕಳಿಗೆ ಮಾಹಿತಿ ನೀಡಲಾಯಿತು.

ಮೈಸೂರು, ಏ.10– ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ದಟ್ಟಗಳ್ಳಿ ಕ್ಯಾಂಪಸ್ ಆವರಣದಲ್ಲಿ ಬೇಸಿಗೆ ಅಂತರಿಕ್ಷ ಯಾನ ಕಾರ್ಯಾಗಾರಕ್ಕೆ (ಸಮ್ಮರ್ ಸ್ಪೇಸ್ ಟೂರ್) ಚಾಲನೆ ನೀಡಲಾಯಿತು. ಯುವ ಬಾಹ್ಯಾಕಾಶ ವಿಜ್ಞಾನಿ ಅಭಿಷೇಕ್ ಎ. ಎಸ್., ಈ ಕಾರ್ಯಾಗಾರಕ್ಕೆ ಚಾಲನೆ ನೀಡಿ ಅಂತರಿಕ್ಷ ಯಾನದ ಕುರಿತು ಪ್ರಾತ್ಯಕ್ಷಿಕೆಗಳ ಮೂಲಕ ಮಕ್ಕಳಿಗೆ ಬಾಹ್ಯಾಕಾಶದ ವಿವಿಧ ಕೌತುಕಗಳನ್ನು ಮನಮುಟ್ಟುವಂತೆ ತಿಳಿಸಿಕೊಟ್ಟರು.

ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದ ಮಕ್ಕಳಿಗೆ ರಾಕೆಟ್, ಸ್ಯಾಟಲೈಟ್, ಲ್ಯಾಂಡರ್ ಮತ್ತು ರೋವರ್‌ಗಳು, ಮಂಗಳ ಗ್ರಹ ಮತ್ತು ಚಂದ್ರ ಗ್ರಹಗಳ ಗ್ಲೋಬ್‌ಗಳು, ದೂರದರ್ಶಕ ಮೊದಲಾದ ಉಪಕರಣಗಳನ್ನು ಮಕ್ಕಳು ಬಳಸಿ ಅಂತರಿಕ್ಷ ಯಾನದ ಅನುಭವ ಪಡೆದುಕೊಳ್ಳಲು ಅವಕಾಶ ಕಲ್ಪಿಸಲಾಗಿತ್ತು. ಆ ಮೂಲಕ ಬಾಹ್ಯಾಕಾಶ ಕುರಿತು ಅನೇಕ ಕುತೂಹಲದ ಪ್ರಶ್ನೆಗಳಿಗೆ ಈ ಶಿಬಿರದಲ್ಲಿ ಉತ್ತರ ಕಂಡುಕೊಂಡರು. ಇತರ ಗ್ರಹಗಳಲ್ಲಿ ಮಾನವನ ತೂಕ ಎಷ್ಟಿರಬಹುದು ಎಂಬುದನ್ನು ಅಳೆಯುವ ತೂಕ ಮಾಪನ ಯಂತ್ರದಲ್ಲಿ ತಮ್ಮ–ತಮ್ಮ ತೂಕವನ್ನು ಪರೀಕ್ಷಿಸಿಕೊಂಡು ಮಕ್ಕಳು ಚಕಿತರಾದರು. ಕಾರ್ಯಕ್ರಮದಲ್ಲಿ ಪ್ರಾಂಶುಪಾಲರಾದ ಮಹೇಂದ್ರ ಎಂ ಎನ್, ಸಹ ಪ್ರಾಂಶುಪಾಲೆ ಶ್ರೀಮತಿ ಶೀನಾ ಕೆ.ಜಿ. ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

ಸಾಲು ಸಾಲು ರಜೆ: ಮೈಸೂರಿಗೆ ಪ್ರವಾಸಿಗರ ಲಗ್ಗೆ



ಮೈಸೂರು,ಏ.10(ಎಂಟಿವೈ)– ಸಾಲು ಸಾಲು ಸರ್ಕಾರಿ ರಜೆ ಹಿನ್ನೆಲೆಯಲ್ಲಿ ಮೈಸೂರಿಗೆ ಪ್ರವಾಸಿಗರ ದಂಡು ಹರಿದು ಬರುತ್ತಿದ್ದು, ಶುಕ್ರವಾರದಿಂದಲೇ ಪ್ರವಾಸಿ ತಾಣಗಳು ತುಂಬಿ ತುಳುಕುವ ನಿರೀಕ್ಷೆಯಿದೆ.

ಶಾಲಾ ವಿದ್ಯಾರ್ಥಿಗಳಿಗೆ ಬೇಸಿಗೆ ರಜೆ ಆರಂಭವಾಗಿದ್ದು, ಈಗಾಗಲೇ ರಾಜ್ಯ ಮಾತ್ರವಲ್ಲದೆ ಹೊರರಾಜ್ಯಗಳಿಂದಲೂ ಪ್ರವಾಸಿಗರು ಮೈಸೂರಿನತ್ತ ಆಗಮಿಸುತ್ತಿದ್ದಾರೆ. ಇಂದು ಮಹಾವೀರ ಜಯಂತಿ, ಏ.12ರಂದು ಎರಡನೇ ಶನಿವಾರ, ಏ.13ರಂದು ಭಾನುವಾರ, ಏ.14ರಂದು ಡಾ.ಅಂಬೇಡ್ಕರ್ ಜಯಂತಿ ಇರುವುದರಿಂದ ಸತತವಾಗಿ ಮೂರು ದಿನ ರಜೆ ಲಭ್ಯವಿದ್ದು, ಶುಕ್ರವಾರ ಒಂದು ದಿನ ರಜೆ ಹಾಕಿದರೆ ಸತತವಾಗಿ ನಾಲ್ಕು ದಿನ ರಜೆ ಸಿಗುತ್ತದೆ. ಈ ಕಾರಣದಿಂದ ಮೈಸೂರಿಗೆ ಬರುವ ಪ್ರವಾಸಿಗರ ಸಂಖ್ಯೆ ಹೆಚ್ಚಾಗಲಿದ್ದು, ಈಗಾಗಲೇ ವಸತಿ ಗೃಹಗಳಲ್ಲಿ ರೂಮ್ ಕಾಯ್ದಿರಿಸುವ ಪ್ರಕ್ರಿಯೆ ಭರದಿಂದ ಸಾಗುತ್ತಿದೆ.

ಮೈಸೂರಿನ ಮೃಗಾಲಯ, ಅರಮನೆ, ಚಾಮುಂಡಿಬೆಟ್ಟಕ್ಕೆ ಭೇಟಿ ನೀಡುವ ಪ್ರವಾಸಿಗರ ಸಂಖ್ಯೆಯಲ್ಲಿ ಇನ್ನು ನಾಲ್ಕು ದಿನ ಗಣನೀಯ ಪ್ರಮಾಣದಲ್ಲಿ ಏರಿಕೆಯಾಗುವ ಲಕ್ಷಣ ಗೋಚರಿಸುತ್ತಿದ್ದು, ಪ್ರವಾಸಿಗರ ಸಂಖ್ಯೆಗೆ ಅನುಗುಣವಾಗಿ ಭದ್ರತಾ ಸಿಬ್ಬಂದಿಗಳು ಕಾರ್ಯನಿರ್ವಹಿಸಲಿದ್ದಾರೆ. ಅಲ್ಲದೆ, ಕೆಆರ್‌ಎಸ್, ಶ್ರೀರಂಗಪಟ್ಟಣ, ನಂಜನಗೂಡು, ತಲಕಾಡು ಸೇರಿದಂತೆ ಮೈಸೂರು, ಚಾಮರಾಜನಗರ ಜಿಲ್ಲೆಯ ಹಲವು ಪ್ರವಾಸಿ ತಾಣಗಳಿಗೂ ಪ್ರವಾಸಿಗರು ಮುಗಿ ಬೀಳಲಿದ್ದಾರೆ.

ಶೇ.100ರಷ್ಟು ರೂಮ್ ಬುಕ್: ಮೈಸೂರು ಜಿಲ್ಲಾ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಮಾತನಾಡಿ, ಮೂರು ದಿನ ಸತತ ರಜೆ ಲಭ್ಯವಿರುವ ಕಾರಣ ಮೈಸೂರಿಗೆ ಬರುವ ಪ್ರವಾಸಿಗರ ಸಂಖ್ಯೆ ಹೆಚ್ಚಾಗುತ್ತಿದೆ. ನಾಳೆ(ಏ.11)ಯಿಂದಲೇ ಮೈಸೂರಿಗೆ ಹೆಚ್ಚಿನ ಸಂಖ್ಯೆಯ ಪ್ರವಾಸಿಗರು ಆಗಮಿಸುತ್ತಿದ್ದಾರೆ. ಮೈಸೂರು ನಗರ ವ್ಯಾಪ್ತಿಯಲ್ಲಿರುವ 430 ಲಾಡ್ಜ್‌ಗಳಲ್ಲಿ 10,500 ರೂಮ್‌ಗಳಿದ್ದು, ಈಗಾಗಲೇ ಶೇ.60ರಷ್ಟು ರೂಮ್ ಬುಕ್ ಆಗಿವೆ. ನಾಳೆ ಬೆಳಗ್ಗಿನಿಂದ ಇನ್ನಷ್ಟು ಬುಕ್ ಆಗಲಿವೆ. ಸೋಮವಾರದವರೆಗೂ ಶೇ.100ರಷ್ಟು ರೂಮ್ ಬುಕ್ ಆಗಲಿವೆ

ಸಫಾರಿ ಸೆಂಟರ್‌ನಲ್ಲೂ ಭರ್ತಿ: ನಾಗರಹೊಳೆ ಹಾಗೂ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಸಫಾರಿಗೆ ತೆರಳುವ ಪ್ರವಾಸಿಗರ ಸಂಖ್ಯೆ ಹೆಚ್ಚಾಗಲಿದೆ. ಆನ್‌ಲೈನ್ ಮೂಲಕ ಸಾಕಷ್ಟು ಮಂದಿ ಸಫಾರಿಗೆ ಟಿಕೆಟ್ ಬುಕ್ ಮಾಡಿಕೊಂಡಿದ್ದಾರೆ.

ಏ.13, ಪುರುಷರ ಹೊನಲು ಬೆಳಕಿನ ವಾಲಿಬಾಲ್ ಪಂದ್ಯಾವಳಿ

ಮೈಸೂರು, ಏ. 10–ಟಿ. ನರಸೀಪುರ ತಾಲೂಕು ಸೋಸಲೆ ಯೂನಿಯನ್ ಸ್ಪೋರ್ಟ್ಸ್ ಕ್ಲಬ್ ವತಿಯಿಂದ ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ ಅಂಗವಾಗಿ ಗ್ರಾಮದಲ್ಲಿ



ಏ.13ರಂದು ಪುರುಷರ ಹೊನಲು ಬೆಳಕಿನ ವಾಲಿಬಾಲ್ ಪಂದ್ಯಾವಳಿ ಆಯೋಜಿಸಲಾಗಿದೆ. ಪಂದ್ಯದಲ್ಲಿ ಪ್ರಥಮ ಸ್ಥಾನ ವಿಜೇತ ತಂಡಕ್ಕೆ ರೂ. 5000, ದ್ವಿತೀಯ ಸ್ಥಾನ ರೂ. 2,500 ನಗದು ಬಹುಮಾನ ನೀಡಲಾಗುವುದು.

ಸಂಘದ ಕಾರ್ಯಕಾರಿಣಿ ಮಂಡಳಿ ಸದಸ್ಯರು, ಗ್ರಾಮದ ಯಜಮಾನರು, ಗ್ರಾಪಂ ಸದಸ್ಯರು, ಮಹಿಳೆಯರು, ಗ್ರಾಮದ ನಿವಾಸಿಗಳು ಎಲ್ಲರೂ ಒಟ್ಟಾಗಿ ಗ್ರಾಮದಲ್ಲಿ ನಡೆಯುವ ಎಲ್ಲಾ ರೀತಿಯ ಕಾರ್ಯಕ್ರಮಗಳಿಗೆ ಹೆಚ್ಚಿನ ಮಟ್ಟದಲ್ಲಿ ಭಾಗವಹಿಸಿ ಪ್ರೋತ್ಸಾಹಿಸಿ ಉತ್ತೇಜನ ನೀಡಿ ಸಹಕರಿಸಬೇಕೆಂದು ಸಂಘದ ಅಧ್ಯಕ್ಷ ಸಿ.ಕುಮಾರಸ್ವಾಮಿ ಹಾಗೂ ಕಾರ್ಯದರ್ಶಿ ಮಹದೇವಯ್ಯ ಮನವಿ ಮಾಡಿದ್ದಾರೆ.

ಕಲಾವಿದರಿಗೆ ಡಾ.ಲೀಲಾವತಿ ಪ್ರಶಸ್ತಿ ಪ್ರದಾನ



ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ರೋಟರಿ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿರುವ ಆರು ಮಂದಿ ಕಲಾವಿದರಿಗೆ ಡಾ.ಎಂ.ಲೀಲಾವತಿ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಮೈಸೂರು, ಏ.10(ಎಂಟಿವೈ)– ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ರೋಟರಿ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿರುವ ಆರು ಮಂದಿ ಕಲಾವಿದರಿಗೆ ಡಾ.ಎಂ.ಲೀಲಾವತಿ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಹೆಚ್.ಡಿ.ಕೋಟೆಯ ಶ್ರೀ ಗೋಕುಲ ಸಾಂಸ್ಕೃತಿಕ ವೇದಿಕೆ ವತಿಯಿಂದ ಆಯೋಜಿಸಿದ್ದ ಕಲಾವಿದರ ಸನ್ಮಾನ ಕಾರ್ಯಕ್ರಮವನ್ನು ಚಲನಚಿತ್ರ ನಿರ್ದೇಶಕ ನಟರಾಜ್ ತಲಕಾಡು ಉದ್ಘಾಟಿಸಿದರು. ಬಳಿಕ ಮಾತನಾಡಿದ ಅವರು, ಕನ್ನಡ ಚಲನಚಿತ್ರರಂಗಕ್ಕೆ ಹಿರಿಯ ನಟಿ ಡಾ.ಲೀಲಾವತಿ ಅವರು ನೀಡಿದ ಕೊಡುಗೆ ಅಪಾರ. ಸಾಕಷ್ಟು ಸಿನಿಮಾಗಳಲ್ಲಿ ವಿವಿಧ ಪಾತ್ರಗಳನ್ನು ಯಶಸ್ವಿಯಾಗಿ ನಿಭಾಯಿಸಿ ಗಮನ ಸೆಳೆದಿದ್ದಾರೆ. ಅವರ ಹೆಸರಿನಲ್ಲಿ ಮೈಸೂರಲ್ಲಿ ಕಲಾವಿದರಿಗೆ ಪ್ರಶಸ್ತಿ ನೀಡುತ್ತಿರುವುದು ಶ್ಲಾಘನೀಯ ಎಂದರು.

ಡಾ.ಲೀಲಾವತಿ ಪ್ರಶಸ್ತಿಗೆ ಗಾಯಕರು, ರಂಗಭೂಮಿ ಕಲಾವಿದರನ್ನು ಆಯ್ಕೆ ಮಾಡಿರುವುದು ಸಂತೋಷ ತಂದಿದೆ. ಕಲಾವಿದರ ಸಮಸ್ಯೆಗಳ ಬಗ್ಗೆ ಬೆಳಕು ಚೆಲ್ಲುವ ಕೆಲಸ ಆಗಬೇಕು. ಅದರಲ್ಲೂ ಗ್ರಾಮೀಣ ಪ್ರದೇಶದಲ್ಲಿ ಸೇವೆ ಸಲ್ಲಿಸುತ್ತಿರುವ ಗಾಯಕರು ಹಾಗೂ ರಂಗಭೂಮಿ ಕಲಾವಿದರನ್ನು ಗುರುತಿಸುವ ಕೆಲಸ ಆಗಬೇಕು. ಆ ನಿಟ್ಟಿನಲ್ಲಿ ಸಂಘ ಸಂಸ್ಥೆಗಳು ಮುಂದಾಗಬೇಕು ಎಂದು ಮನವಿ ಮಾಡಿದರು.

ಪ್ರಶಸ್ತಿ ಪ್ರದಾನ: ಕಾರ್ಯಕ್ರಮದಲ್ಲಿ ಕಲಾವಿದರಾದ ಗೋಪಾಲಸ್ವಾಮಿ, ಪುಟ್ಟಯ್ಯ, ಮೋಹನ್ ದೇವಯ್ಯ, ಚಂದ್ರಶೇಖರಮೂರ್ತಿ, ಮಣಿಕಂಠ ವಿಶ್ವಕರ್ಮ, ಶ್ರೀನಿವಾಸ ನಾಯ್ಕ ಅವರಿಗೆ ಡಾ.ಲೀಲಾವತಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕಾರ್ಯಕ್ರಮದಲ್ಲಿ ವಿದ್ಯಾವರ್ಧಕ ಕಾನೂನು ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಡಾ.ಎ.ಆರ್.ಪ್ರಕೃತಿ, ಚಾಮರಾಜನಗರ ಕೃಷಿ ಇಲಾಖೆ ಅಧೀಕ್ಷಕ ಎಂ.ಭಾಸ್ಕರ್, ಗೋಕುಲ ಸಾಂಸ್ಕೃತಿಕ ವೇದಿಕೆಯ ಸಂಸ್ಥಾಪಕ ಕಾರ್ಯದರ್ಶಿ ಜಿ.ಡಿ.ರಾಜಗೋಪಾಲ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ವಿದ್ಯಾರ್ಥಿಗಳು ಗುರಿ, ಛಲದಿಂದ ಸಾಧನೆ ಮಾಡಿ

ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಕರೆ



600ಕ್ಕೆ 589 ಅಂಕ ಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾದ ಸಿಎನ್‌ಎಂ ಪಿಯು ಕಾಲೇಜಿನ ಐಶ್ವರ್ಯ ಟಿ.ಎಂ. ಅವರನ್ನು ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಅಭಿನಂದಿಸಿದರು.

ಮೈಸೂರು, ಏ.10–ಅಬ್ದುಲ್ ಕಲಾಂ, ವಿಶ್ವೇಶ್ವರಯ್ಯ, ಅಂಬೇಡ್ಕರ್‌ರಂತಹ ಮಹನೀಯರನ್ನು ಆದರ್ಶವಾಗಿಟ್ಟುಕೊಂಡು ಹಿಂದೆ ಗುರು ಮುಂದೆ ಗುರಿ ಇಟ್ಟುಕೊಂಡು ಛಲದಿಂದ ಸಾಧನೆ ಮಾಡಬೇಕು ಎಂದು ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಸಿಎನ್‌ಎಂ ಪಿಯು ಕಾಲೇಜು ಹಾಗೂ ವೈಬ್ರೆಂಟ್ ಅಕಾಡೆಮಿ ಮೂಡಬಿದರೆ ವತಿಯಿಂದ ಮಹಾದೇವಪುರದಲ್ಲಿರುವ ಸಿಎನ್‌ಎಂ ಪಬ್ಲಿಕ್ ಶಾಲೆಯಲ್ಲಿ ನಡೆದ ಸಮಾರಂಭದಲ್ಲಿ ಕಾಲೇಜಿನ ವಿದ್ಯಾರ್ಥಿನಿ ಐಶ್ವರ್ಯ ಟಿ.ಎಂ. ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದಲ್ಲಿ 600ಕ್ಕೆ 589 ಅಂಕಗಳನ್ನು ಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾದ ಹಿನ್ನೆಲೆಯಲ್ಲಿ ಅವರನ್ನು ಅಭಿನಂದಿಸಿ ಮಾತನಾಡಿದ ಮಂಜೇಗೌಡರು, ಗುಂಡ್ಲುಪೇಟೆಯ ಮಂಜು ಹಾಗೂ ಭಾಗ್ಯ ಅವರ ಪುತ್ರಿ ಐಶ್ವರ್ಯ ನಮ್ಮ ಕಾಲೇಜಿನ ಹೆಮ್ಮೆಯ ವಿದ್ಯಾರ್ಥಿನಿ. ಉತ್ತಮ ಅಂಕಗಳನ್ನು ಪಡೆದಿದ್ದಾಳೆ. ಮುಂದಿನ ವರ್ಷದಲ್ಲಿ ಐಶ್ವರ್ಯಳನ್ನು ಮಾದರಿಯಾಗಿಟ್ಟುಕೊಂಡು ಇನ್ನೂ ಹೆಚ್ಚಿನ ವಿದ್ಯಾರ್ಥಿಗಳು ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಲು ಪ್ರಯತ್ನಿಸಬೇಕು. ಮನುಷ್ಯ ಈ ಭೂಮಿ ಮೇಲೆ ಹುಟ್ಟಿದ ಮೇಲೆ ಏನಾದರೂ ಗುರುತು ಬಿಟ್ಟು ಹೋಗಬೇಕು. ಒಳ್ಳೆಯ ಸ್ನೇಹಿತರ ಸಹವಾಸ ಮಾಡಬೇಕು. ತಂದೆ, ತಾಯಿಯವರ, ಶಿಕ್ಷಕರ ಮಾರ್ಗದರ್ಶನ ಪಡೆದುಕೊಂಡು ಚೆನ್ನಾಗಿ ಓದಿ ಕೆಎಎಸ್, ಐಎಎಸ್, ಐಪಿಎಸ್‌ನಂತಹ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಿ ಆಯ್ಕೆಯಾಗಿ ಈ ನಾಡಿಗೆ ಈ ದೇಶಕ್ಕೆ ಸೇವೆ ಸಲ್ಲಿಸಬೇಕು.

ಗ್ರಾಮೀಣ ಭಾಗದ ಹೆಣ್ಣು ಮಕ್ಕಳಿಗೆ ಅನುಕೂಲವಾಗಲೆಂದು ಕಾಲೇಜು ಮಾಡಿದ್ದೇನೆ. ಸದುಪಯೋಗಪಡಿಸಿಕೊಳ್ಳಿರಿ. ನಮಗೆ ಇದ್ದಂತಹ ಕಷ್ಟ ನಿಮಗೆ ಇಲ್ಲ. ನಿಮ್ಮ ತಂದೆ ತಾಯಿಯವರು ಎಲ್ಲಾ ಸೌಲಭ್ಯಗಳನ್ನು ನೀಡುತ್ತಿದ್ದಾರೆ. ನಿಮಗೆ ಓದುವ ಇಚ್ಛಾಶಕ್ತಿ ಇರಬೇಕು. ಸಾಧನೆ ಶಿಕ್ಷಣದಿಂದ ಸಾಧ್ಯವಾಗಿದ್ದು ಎಲ್ಲರೂ ಚೆನ್ನಾಗಿ ಓದಿ ಕಾಲೇಜಿಗೆ, ತಂದೆ ತಾಯಿಯರಿಗೆ ಕೀರ್ತಿ ತರಬೇಕು ಎಂದರು. ಸಮಾರಂಭದಲ್ಲಿ ಸಂಸ್ಥೆಯ ಕಾರ್ಯದರ್ಶಿ ಭರತ್ ಮಂಜೇಗೌಡ, ಸುಭಾಶ್ ಜಾ, ಪ್ರಾಂಶುಪಾಲ ಕೆ.ಎನ್.ನಾಗೇಶ್, ಶಾರದಾ ಪ್ರಸಾದ್, ರಾಜೀವ್, ರಾಜಶೇಖರಮೂರ್ತಿ ಉಪಸ್ಥಿತರಿದ್ದರು.

ಪ್ರಾಥಮಿಕ ಶಾಲಾ ಶಿಕ್ಷಕರ ತರಬೇತಿಗೆ ಅರ್ಜಿ

ಮೈಸೂರು,ಏ.10–ದಿ ಆರ್‌ಸಿಎಸ್‌ಎಸ್ ಮೈಸೂರು ಶಾಖೆಯು ಭಾರತ ಸರ್ಕಾರದ ಯೋಜನೆಯಡಿಯಲ್ಲಿ ಎನ್‌ಡಿಎಲ್‌ಎಂನ ಸಹಭಾಗಿತ್ವದೊಂದಿಗೆ ಎನ್‌ಟಿಟಿಸಿ, ಮಾಂಟೆಸರಿ ಹಾಗು ಪೂರ್ವ ಪ್ರಾಥಮಿಕ ಶಾಲಾ ಶಿಕ್ಷಕರ ತರಬೇತಿಗಾಗಿ 2025–26ನೇ ಸಾಲಿಗೆ ಅನ್ವಯವಾಗುವಂತೆ ಅರ್ಜಿ ಆಹ್ವಾನಿಸಿದೆ. ಎಲ್‌ಕೆಜಿ, ಯುಕೆಜಿ, ಪ್ರಿಸ್ಕೂಲ್ ಹಾಗೂ ಮಾಂಟೆಸರಿ ಶಾಲಾ ಶಿಕ್ಷಕರ ತರಬೇತಿ ತರಗತಿಗಳು ಇದಾಗಿದ್ದು, ನುರಿತ ಅಧ್ಯಾಪಕರಿಂದ ಮಕ್ಕಳ ಮಾನಸಿಕ ಬೆಳವಣಿಗೆಗಳು, ಆಹಾರ, ಪೋಷಕಾಂಶ, ಕಂಪ್ಯೂಟರ್ ತರಬೇತಿ ಕುರಿತಂತೆ ಪ್ರಾಯೋಗಿಕ ತರಗತಿಗಳಿರುತ್ತವೆ. ಆನ್‌ಲೈನ್ ತರಬೇತಿ ಬಯಸುವವರೂ ಅರ್ಜಿಗಳನ್ನು ಪಡೆಯಬಹುದಾಗಿದೆ. ಮಾಹಿತಿಗೆ 9686855470, 8310306882.

ಅಭಿನಂದನೆ...



ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕರಾದ ಎನ್.ಯೋಗಾನಂದ, ಮಾಜಿ ಡಿಸಿಎಂ ಡಾ.ಅಶ್ವತ್ ನಾರಾಯಣ್ ಹಾಗೂ ಕಾವೇರಿ ಮಲ್ಟಿಸ್ಪೆಷಾಲಿಟಿ ಹಾಸ್ಪಿಟಲ್ ಮಾಲೀಕ ಡಾ.ಚಂದ್ರಶೇಖರ್ ಅವರನ್ನು ಅಭಿನಂದಿಸಿದರು. ಈ ವೇಳೆ ಸಿಟಿ ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕ ವಿ.ಮಧು, ಚಾಮರಾಜ ಬಿಜೆಪಿ ಅಧ್ಯಕ್ಷ ದಿನೇಶ್, ಸಿಡಿ ಕುಮಾರ್, ಜನಹಿತ ವಿವಿಧೋದ್ದೇಶ ಸೊಸೈಟಿ ನಿರ್ದೇಶಕ ಸಂತೋಷ್ ಇದ್ದರು.

ಕುಂಜಲ್ ಎಸ್.ಆರ್ಯಗೆ ಉನ್ನತ ಶ್ರೇಣಿ



ಮೈಸೂರು: ಪ್ರಮತಿ ಪಿಯು ಕಾಲೇಜು ವಿದ್ಯಾರ್ಥಿನಿ ಕುಂಜಲ್ ಎಸ್.ಆರ್ಯ ದ್ವಿತೀಯ ಪಿಯುಸಿ ಪರೀಕ್ಷೆಯ ವಿಜ್ಞಾನ ವಿಭಾಗದಲ್ಲಿ 582 ಅಂಕಗಳನ್ನು ಪಡೆದು ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಕನ್ನಡ 98, ಇಂಗ್ಲಿಷ್ 91, ಭೌತಶಾಸ್ತ್ರ 98, ರಸಾಯನ ಶಾಸ್ತ್ರ 98, ಗಣಿತ 100, ಜೀವಶಾಸ್ತ್ರ 97 ಅಂಕಗಳನ್ನು ಪಡೆದಿರುವ ವಿದ್ಯಾರ್ಥಿ ಮೈಸೂರು ನಗರ ಸರಸ್ವತಿಪುರಂ ನಿವಾಸಿ ಎನ್.ಎಚ್.ಸುನೀಲ್ ಮತ್ತು ಎಸ್. ಮಾಲತಿ ದಂಪತಿ ಪುತ್ರಿ.

ಧನಗಳ್ಳಿ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಬಿ.ಗುರುಸ್ವಾಮಿ ಆಯ್ಕೆ



ಮೈಸೂರು ತಾಲೂಕು ಧನಗಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಆಯ್ಕೆಯಾದ ಬಿ.ಗುರುಸ್ವಾಮಿ, ಉಪಾಧ್ಯಕ್ಷೆ ಕೆಂಪಮ್ಮ ಅವರನ್ನು ಮುಡಾ ಮಾಜಿ ಅಧ್ಯಕ್ಷ ಕೆ.ಮರೀಗೌಡ ಅಭಿನಂದಿಸಿದರು.

ಮೈಸೂರು,ಏ.10–ಮೈಸೂರು ತಾಲೂಕು ಧನಗಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಬಿ.ಗುರುಸ್ವಾಮಿ (8 ಮತಗಳು) ಹಾಗೂ ಉಪಾಧ್ಯಕ್ಷರಾಗಿ ಕೆಂಪಮ್ಮ (8 ಮತಗಳು) ಆಯ್ಕೆಯಾಗಿದ್ದಾರೆ.

ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಪ್ರತಿಸ್ಪರ್ಧಿ ಮಹೇಶ್, ಉಪಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಮಹದೇವ್ ತಲಾ 5 ಮತಗಳನ್ನು ಪಡೆದು ಪರಾಜಿತರಾದರು. ನೂತನ ಅಧ್ಯಕ್ಷ, ಉಪಾಧ್ಯಕ್ಷರನ್ನು ಅಭಿನಂದಿಸಿದ ಮುಡಾ ಮಾಜಿ ಅಧ್ಯಕ್ಷರಾದ ಕೆ.ಮರೀಗೌಡರು ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯನವರು ರಾಜ್ಯದ ಪ್ರತಿ ಗ್ರಾಮ ಪಂಚಾಯಿತಿಯಲ್ಲಿಯೂ ಕೃಷಿ ಪತ್ತಿನ ಸಹಕಾರ ಸಂಘಗಳನ್ನು ಸ್ಥಾಪನೆ ಮಾಡಬೇಕು ಎಂದು ಆದೇಶಿಸಿದ ಹಿನ್ನೆಲೆಯಲ್ಲಿ ಮೈಸೂರು ತಾಲೂಕಿನಲ್ಲಿ ಹೊಸದಾಗಿ 3 ಸಂಘಗಳನ್ನು ಸ್ಥಾಪಿಸಲಾಗಿದೆ. ರೈತರು ಆರ್ಥಿಕವಾಗಿ ಸ್ವಾವಲಂಬಿಗಳಾಗಬೇಕಾದರೆ ಸಹಕಾರ ಸಂಘಗಳ ಪಾತ್ರ ಬಹಳ ಮುಖ್ಯವಾಗಿದ್ದು, ಧನಗಳ್ಳಿಯಲ್ಲಿ ಸಹಕಾರ ಬ್ಯಾಂಕ್ ಅನ್ನು ಮುಂದಿನ ದಿನಗಳಲ್ಲಿ ಸ್ಥಾಪನೆ ಮಾಡಿ ಎಲ್ಲಾ ಸದಸ್ಯರು ಹಾಗೂ ನಿರ್ದೇಶಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸಂಘವನ್ನು ಉತ್ತಮವಾಗಿ ಬೆಳೆಸಿಕೊಂಡು ಹೋಗಿ ಎಂದರು.

ಸಂಘದ ನೂತನ ಅಧ್ಯಕ್ಷ ಬಿ.ಗುರುಸ್ವಾಮಿ ಮಾತನಾಡಿ, ಸಂಘದ ಎಲ್ಲಾ ಸದಸ್ಯರು ಹಾಗೂ ನಿರ್ದೇಶಕರ ಸಹಕಾರದಿಂದ 2ನೇ ಬಾರಿಗೆ ಅಧ್ಯಕ್ಷನಾಗಿದ್ದೇನೆ. ನಾನು ಅಧ್ಯಕ್ಷನಾದ ಮೇಲೆ ಸಂಘಕ್ಕೆ ಹೊಸ ಕಟ್ಟಡ ನಿರ್ಮಾಣ ಮಾಡಿದ್ದೇವೆ. ರೈತರಿಗೆ ಸುಮಾರು 6 ಕೋಟಿ ರೂ. ಸಾಲ ನೀಡಿದ್ದೇವೆ. ಮುಖ್ಯಮಂತ್ರಿ ಸಿದ್ದರಾಮಯ್ಯನವರ ಆಶೀರ್ವಾದದಿಂದ ರೈತರಿಗೆ ಇನ್ನೂ ಹೆಚ್ಚಿನ ಅನುಕೂಲ ಮಾಡಿಕೊಡಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದರು.


ಈ ಸಂದರ್ಭದಲ್ಲಿ ನಿರ್ದೇಶಕರಾದ ಚಿಕ್ಕಣ್ಣ, ಅಂದಾನಿ, ನಾಗೇಶ್, ಚಂದ್ರು, ದೊಡ್ಡತಾಯಮ್ಮ, ಮುಖಂಡರಾದ ಸಿದ್ದರಾಮೇಗೌಡ, ಜಿ.ಕೆ.ಬಸವಣ್ಣ, ಉದ್ಬೂರು ಕೃಷ್ಣ, ಕೇರೇಗೌಡ, ಎಪಿಎಂಸಿ ಮಾಜಿ ಅಧ್ಯಕ್ಷ ಬಸವರಾಜು, ಕೋಟೆಹುಂಡಿ ಮಹದೇವ, ಬಿ.ರವಿ, ಸಾಲುಂಡಿ ಮಹದೇವ, ಗಡ್ಡಬಸಪ್ಪ, ಚಂದ್ರ, ಧನಗಳ್ಳಿ ಬಸವರಾಜು, ರಾಜೇಗೌಡ, ಕೃಷ್ಣಮೂರ್ತಿ, ಸಿದ್ದರಾಜು, ರವಿಶಂಕರ್, ಜಿ.ಎಸ್.ಬಸವರಾಜು, ಮಹೇಶ್, ಸುರೇಶ್, ಅಂಗಡಿ ಕುಮಾರ್, ಶಂಕರೇಗೌಡ, ಹನುಮಂತ, ಬೀರಲಿಂಗು, ಜಿ.ಎಂ.ಸಿದ್ದರಾಮೇಗೌಡ, ನಂಜುಂಡೇಗೌಡ, ತಮಡಿಗೌಡ, ಶಂಕರನಾಯ್ಕ, ರಾಕೇಶ್, ಶಿವಣ್ಣ, ಪಾಪೇಗೌಡ, ಮುಖ್ಯಕಾರ್ಯನಿರ್ವಹಣಾಧಿಕಾರಿ ಮಾಲೇಗೌಡ, ಚುನಾವಣಾಧಿಕಾರಿ ರಮೇಶ್, ಗಿರೀಶ್ ಹಾಜರಿದ್ದರು.

ಏ.13ರಂದು ಸಾಂಸ್ಕೃತಿಕ ಸ್ಪರ್ಧೆ

ಮೈಸೂರು,ಏ.10(ಪಿಎಂ)–ಶ್ರೀ ಕಾವೇರಿ ಕೊಡಗು ಮಹಿಳಾ ಸಂಘದ ವತಿಯಿಂದ ಏ.13ರಂದು ಬೆಳಗ್ಗೆ 10.30ಕ್ಕೆ ಸಂಘದ ಸದಸ್ಯರು, ಅವರ ಕುಟುಂಬ ವರ್ಗದವರು ಹಾಗೂ ಬಂಧು–ಮಿತ್ರರಿಗೆ ಚಿತ್ರಕಲೆ, ಗಾಯನ, ನೃತ್ಯ ಹಾಗೂ ಪಿಕ್ ಅಂಡ್ ಸ್ಪೀಚ್ ಒಳಗೊಂಡ ಸಾಂಸ್ಕೃತಿಕ ಸ್ಪರ್ಧೆಗಳನ್ನು ಜಯಲಕ್ಷ್ಮಿಪುರಂನ ಕೊಡಗು ಸಹಕಾರ ಸಂಘದ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ. ಮುಖ್ಯ ಅತಿಥಿಗಳಾಗಿ ಸಿ.ಸೀತಮ್ಮ ಕಾಳಯ್ಯ ಪಾಲ್ಗೊಳ್ಳಲಿದ್ದು, ಶ್ರೀ ಕಾವೇರಿ ಕೊಡಗು ಮಹಿಳಾ ಸಂಘದ ಅಧ್ಯಕ್ಷೆ ಕೆ.ಬೊಳ್ಳಮ್ಮ ಕುಟ್ಟಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ. ನೋಂದಣಿ ಮತ್ತು ವಿವರಗಳಿಗೆ ಮೊಬೈಲ್ ಸಂಖ್ಯೆ. 98862–84474, 99642–36284 ಅಥವಾ 77600–47102 ಸಂಪರ್ಕಿಸಬಹುದು.

ದೇಶ - ವಿದೇಶ

ಚೀನಾ ಹೊರತು ಎಲ್ಲಾ ದೇಶಗಳಿಗೆ 90 ದಿನಗಳ ಸುಂಕ ವಿರಾಮ



ವಾಷಿಂಗ್ಟನ್: ಮಹತ್ವದ ಬೆಳವಣಿಗೆಯಲ್ಲಿ ಜಗತ್ತಿನ ಹಲವು ದೇಶಗಳ ಕೆಂಗಣ್ಣಿಗೆ ಗುರಿಯಾಗಿರುವ ಅಮೆರಿಕದ ನೂತನ ಸುಂಕ ಹೇರಿಕೆ ಪ್ರಕ್ರಿಯೆಗೆ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಾತ್ಕಾಲಿಕ ವಿರಾಮ ಘೋಷಿಸಿದ್ದಾರೆ. ಅಮೆರಿಕದ ಸುಂಕ ಹೇರಿಕೆ ಜಗತ್ತಿನಾದ್ಯಂತ ಹೊಸ ಸುಂಕ ಯುದ್ಧವನ್ನೇ ಆರಂಭಿಸಿದ್ದು, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನಡೆಗೆ ವ್ಯಾಪಕ ವಿರೋಧ ವ್ಯಕ್ತವಾಗುತ್ತಲೇ ಈ ವಿವಾದಾತ್ಮಕ ನಡೆಗೆ ಡೊನಾಲ್ಡ್ ಟ್ರಂಪ್ 90 ದಿನಗಳ ವಿರಾಮ ಘೋಷಣೆ ಮಾಡಿದ್ದಾರೆ. ಆದರೆ ಈ ಸುಂಕ ವಿರಾಮದಿಂದ ಚೀನಾ ಸೇರಿದಂತೆ ಜಗತ್ತಿನ ಕೆಲ ದೇಶಗಳನ್ನು ದೂರ ಇರಿಸಲಾಗಿದೆ ಎಂದು ಶ್ವೇತಭವನದ ಮೂಲಗಳು ತಿಳಿಸಿವೆ.

ಈ ಬಗ್ಗೆ ತಮ್ಮ ಟ್ರುತ್ ಸೋಶಿಯಲ್‌ನಲ್ಲಿ ಪೋಸ್ಟ್ ಮಾಡಿರುವ ಟ್ರಂಪ್, ಚೀನಾ ಇನ್ನೂ ತನ್ನ ದೇಶವನ್ನು ಸುಲಿಗೆ ಮಾಡುತ್ತಿದೆ. ವಿಶ್ವ ಮಾರುಕಟ್ಟೆಗಳಿಗೆ ಚೀನಾ ತೋರಿಸಿರುವ ಗೌರವದ ಕೊರತೆ ಆಧಾರದ ಮೇಲೆ, ಅಮೆರಿಕವು ಚೀನಾಕ್ಕೆ ವಿಧಿಸುವ ಸುಂಕವನ್ನು ಶೇ.125ಕ್ಕೆ ಹೆಚ್ಚಿಸುತ್ತಿದ್ದೇನೆ. ಇದು ತಕ್ಷಣವೇ ಜಾರಿಗೆ ಬರುತ್ತದೆ. ಮುಂದಿನ ದಿನಗಳಲ್ಲಿ ಅಮೆರಿಕ ಮತ್ತು ಇತರ ದೇಶಗಳನ್ನು ಸುಲಿಗೆ ಮಾಡುವ ದಿನಗಳು ಇನ್ನು ಮುಂದೆ ಸುಸ್ಥಿರ ಅಥವಾ ಸ್ವೀಕಾರಾರ್ಹವಲ್ಲ ಎಂದು ಚೀನಾ ಅರಿತುಕೊಳ್ಳುತ್ತದೆ ಎಂದರು.

ಬಾಟಲಿಗೆ ಪೆಟ್ರೋಲ್ ಹಾಕದ ಬಂಕ್ ಮ್ಯಾನೇಜರ್‌ಗೆ ಗುಂಡಿಕ್ಕಿ ಹತ್ಯೆ

ಬುಲಂದ್‌ಶಹರ್: ಉತ್ತರ ಪ್ರದೇಶದ ಸಿಕಂದರಾಬಾದ್‌ನಲ್ಲಿ ಪೆಟ್ರೋಲ್ ಪಂಪ್ ಮ್ಯಾನೇಜರ್ ಒಬ್ಬರನ್ನು ಗುಂಡಿಕ್ಕಿ ಹತ್ಯೆ ಮಾಡಿದ ಘಟನೆ ನಡೆದಿದೆ.

ಬುಧವಾರ ತಡರಾತ್ರಿ ಬೈಕ್‌ನಲ್ಲಿ ಬಂದ ಇಬ್ಬರು ವ್ಯಕ್ತಿಗಳು ತಮ್ಮ ಬೈಕ್‌ಗೆ ಪೆಟ್ರೋಲ್ ತುಂಬಿಸಿದ ನಂತರ ಪ್ಲಾಸ್ಟಿಕ್ ಬಾಟಲಿಗೆ ಪೆಟ್ರೋಲ್ ಹಾಕುವಂತೆ ಹೇಳಿದ್ದಾರೆ. ಇದಕ್ಕೆ ಸಿಬ್ಬಂದಿ ನಿರಾಕರಿಸಿದ್ದಾರೆ. ಬಳಿಕ ಪಂಪ್ ಮ್ಯಾನೇಜರ್ ರಾಜು ಶರ್ಮಾ(30) ಅವರ ಬಳಿ ಹೋಗಿ ಬಾಟಲಿಗೆ ಪೆಟ್ರೋಲ್ ಹಾಕುವಂತೆ ಒತ್ತಾಯಿಸಿದ್ದಾರೆ. ಶರ್ಮಾ ಕೂಡ ಇದಕ್ಕೆ ಒಪ್ಪಿಲ್ಲ. ಈ ವೇಳೆ ವಾಗ್ವಾದ ನಡೆದಿದ್ದು, ಅವರ ಮೇಲೆ ಗುಂಡು ಹಾರಿಸಿ ಸ್ಥಳದಿಂದ ಪರಾರಿಯಾಗಿದ್ದಾರೆ. ಗುಂಡಿನ ದಾಳಿಯಲ್ಲಿ ಗಂಭೀರವಾಗಿ ಗಾಯಗೊಂಡಿದ್ದ ಶರ್ಮಾ ಅವರನ್ನು ಆಸ್ಪತ್ರೆಗೆ ಸಾಗಿಸಲಾಯಿತು. ಅಲ್ಲಿ ಅವರು ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ. ಈ ಸಂಬಂಧ ಇಬ್ಬರು ದುಷ್ಕರ್ಮಿಗಳ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಹಿರಿಯ ಪೊಲೀಸ್ ವರಿಷ್ಠಾಧಿಕಾರಿ ಶ್ಲೋಕ್‌ಕುಮಾರ್ ತಿಳಿಸಿದ್ದಾರೆ. ಸಿಸಿಟಿವಿ ಕ್ಯಾಮೆರಾ ದೃಶ್ಯಗಳ ಸಹಾಯದಿಂದ ಆರೋಪಿಗಳನ್ನು ಗುರುತಿಸಲಾಗಿದೆ. ಅವರನ್ನು ಬಂಧಿಸುವ ಪ್ರಯತ್ನಗಳು ನಡೆಯುತ್ತಿವೆ ಎಂದು ಹೇಳಿದ್ದಾರೆ.

ಗಾಜಾದ ಅಪಾರ್ಟ್‌ಮೆಂಟ್ ಮೇಲೆ ವಾಯುದಾಳಿ; 23 ಮಂದಿ ಸಾವು

ಗಾಜಾ: ಇಸ್ರೇಲ್ ಮತ್ತು ಹಮಾಸ್ ನಡುವಿನ ನಿರಂತರ



ಸಂಘರ್ಷದಿಂದ ಧ್ವಂಸಗೊಂಡಿರುವ ಉತ್ತರ ಗಾಜಾ ಮೇಲೆ ಬುಧವಾರ ಮತ್ತೊಮ್ಮೆ ಇಸ್ರೇಲಿ ವಿಮಾನಗಳು ವಸತಿ ಕಟ್ಟಡದ ಮೇಲೆ ಭಾರಿ ದಾಳಿ ನಡೆಸಿದ್ದು, ಇದರಲ್ಲಿ 8 ಮಕ್ಕಳು ಸೇರಿ 23 ಮಂದಿ ಸಾವನ್ನಪ್ಪಿದ್ದಾರೆ ಎಂದು ಗಾಜಾ ಆರೋಗ್ಯ ಸಚಿವಾಲಯ ಬಿಡುಗಡೆ ಮಾಡಿದ ಹೇಳಿಕೆಯಲ್ಲಿ ತಿಳಿಸಿದೆ. ಈ ದಾಳಿ ಗಾಜಾ ನಗರದ ಶಿಜಯ್ಯ ಪ್ರದೇಶದಲ್ಲಿ ನಡೆದಿದೆ. ಆದಾಗ್ಯೂ, ಈ ದಾಳಿಯ ಬಗ್ಗೆ ಇಸ್ರೇಲಿ ಸೇನೆಯು, ಶಿಜಯ್ಯದಿಂದ ದಾಳಿ ನಡೆಸುತ್ತಿದ್ದ ಹಿರಿಯ ಹಮಾಸ್ ಭಯೋತ್ಪಾದಕನನ್ನು ಗುರಿಯಾಗಿಸಿಕೊಂಡು ಈ ದಾಳಿ ನಡೆಸಲಾಗಿದೆ ಎಂದು ಹೇಳಿದೆ. ರಕ್ಷಣಾ ತಂಡಗಳು ಅವಶೇಷಗಳ ಅಡಿಯಲ್ಲಿ ಸಂತ್ರಸ್ತರಿಗಾಗಿ ಹುಡುಕಾಟ ನಡೆಸುತ್ತಿದೆ. ಇಸ್ರೇಲ್ ಗಾಜಾದ ಕೆಲವು ಭಾಗಗಳಲ್ಲಿ, ವಿಶೇಷವಾಗಿ ಶಿಜಯ್ಯದಲ್ಲಿ ವ್ಯಾಪಕ ಸ್ಥಳಾಂತರಿಸುವ ಆದೇಶಗಳನ್ನು ಹೊರಡಿಸಿದೆ. ಇದರ ಅಡಿಯಲ್ಲಿ ಆಹಾರ, ಇಂಧನ ಮತ್ತು ಮಾನವೀಯ ನೆರವಿನ ಮೇಲೆ ದಿಗ್ಬಂಧನ ವಿಧಿಸಲಾಗಿದೆ. ಇದು ನಾಗರಿಕರ ಮೇಲೆ ಪರಿಣಾಮ ಬೀರಿದೆ ಏಕೆಂದರೆ ಅವರು ಈಗ ಅಗತ್ಯ ವಸ್ತುಗಳ ತೀವ್ರ ಕೊರತೆಯನ್ನು ಎದುರಿಸುತ್ತಿದ್ದಾರೆ.

ಸಾಮೂಹಿಕ ವಿವಾಹ ಹೆಸರಲ್ಲಿ ಯುವತಿಯರ ಮಾರಾಟ

ಜೈಪುರ: ಸಾಮೂಹಿಕ ವಿವಾಹದ ಹೆಸರಲ್ಲಿ ಬಡ ಯುವತಿಯರನ್ನು ಪುರುಷರಿಗೆ ಮಾರಾಟ ಮಾಡುತ್ತಿದ್ದ ಖತರ್ನಾಕ್ ಎನ್‌ಜಿಒವನ್ನು ಪೊಲೀಸರು ಖೆಡ್ಡಾಕ್ಕೆ ಕೆಡವಿದ್ದಾರೆ. ರಾಜಸ್ತಾನ ರಾಜಧಾನಿ ಜೈಪುರ ಬಳಿ ಸಾಮೂಹಿಕ ವಿವಾಹದ ಹೆಸರಲ್ಲಿ ಬಡ ಕುಟುಂಬದ ಯುವತಿಯರನ್ನು ಪುರುಷರಿಗೆ ಮಾರಾಟ ಮಾಡುತ್ತಿದ್ದ ಖತರ್ನಾಕ್ ಜಾಲವನ್ನು ಪೊಲೀಸರು ಭೇದಿಸಿದ್ದಾರೆ.

ಆ ಮೂಲಕ ಬಹುದೊಡ್ಡ ಮಾನವ ಕಳ್ಳ ಸಾಗಣೆ ಜಾಲವನ್ನು ಬಯಲು ಮಾಡಿದ್ದಾರೆ. ಸಾಮೂಹಿಕ ವಿವಾಹ ಆಯೋಜನೆ ಮಾಡುತ್ತಿದ್ದ ಎನ್‌ಜಿಒವೊಂದು ಯುವತಿಯರನ್ನು 2.5 ಲಕ್ಷ ರೂನಿಂದ 5 ಲಕ್ಷ ರೂಗಳಿಗೆ ಮಾರಾಟ ಮಾಡುತ್ತಿತ್ತು ಎಂದು ಹೇಳಲಾಗಿದೆ.

ಬಡ ಕುಟುಂಬಗಳ ಮಹಿಳೆಯರಿಗೆ ಸಾಮೂಹಿಕ ವಿವಾಹಗಳನ್ನು ಆಯೋಜಿಸುವ ಎನ್‌ಜಿಒ ಸೋಗಿನಲ್ಲಿ ನಡೆಸಲಾಗುತ್ತಿದ್ದ ಮಾನವ ಕಳ್ಳಸಾಗಣೆ ಜಾಲ ಇದಾಗಿದ್ದು, ಎನ್‌ಜಿಒ ನಡೆಸುತ್ತಿದ್ದ ಮಹಿಳೆ, ಬಡ ಕುಟುಂಬಗಳಿಂದ ಹುಡುಗಿಯರನ್ನು ಕಳ್ಳಸಾಗಣೆ ಮಾಡುವ ಏಜೆಂಟ್‌ಗಳಿಂದ ಖರೀದಿಸಿ ವಧುವನ್ನು ಹುಡುಕುತ್ತಿರುವ ಯುವಕರಿಗೆ 2.5–5 ಲಕ್ಷ ರೂ.ಗೆ ಮಾರಾಟ ಮಾಡುತ್ತಿದ್ದಳು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಕಳೆದ ವಾರ ಇಲ್ಲಿ ನ್ಯಾಯಾಲಯಕ್ಕೆ ತಿಳಿಸಿದ್ದಾರೆ.

ಅಂತ್ಯಸಂಸ್ಕಾರ ವೇಳೆ ಶವಪೆಟ್ಟಿಗೆಯೊಂದಿಗೆ ಗುಂಡಿಗೆ ಬಿದ್ದ ಇಡೀ ಕುಟುಂಬ

ಫಿಲಡೆಲ್ಫಿಯಾ: ವ್ಯಕ್ತಿಯ ಅಂತ್ಯಸಂಸ್ಕಾರಕ್ಕೆಂದು ಸ್ಮಶಾನಕ್ಕೆ ಹೋಗಿದ್ದ ಕುಟುಂಬವು ಶವಪೆಟ್ಟಿಗೆಯೊಂದಿಗೆ ಗುಂಡಿಗೆ



ಬಿದ್ದಿರುವ ಘಟನೆ ಫಿಲಡೆಲ್ಫಿಯಾದಲ್ಲಿ ನಡೆದಿದೆ. ಶವ ಪೆಟ್ಟಿಗೆಯನ್ನು ಹೊತ್ತು ಕುಟುಂಬ ಸದಸ್ಯರು ಭಾರವಾದ ಮನಸ್ಸಿನೊಂದಿಗೆ ಸ್ಮಶಾನಕ್ಕೆ ಬಂದಿದ್ದರು. ಅಂತಿಮ ವಿಧಿ ವಿಧಾನಗಳಿಗಾಗಿ ಗ್ರೀನ್ ಮೌಂಟ್ ಸ್ಮಶಾನದಲ್ಲಿ ಪ್ರೀತಿ ಪಾತ್ರರು ಒಟ್ಟುಗೂಡಿದ್ದಾಗ ಈ ದುರಂತ ಸಂಭವಿಸಿದೆ. ಗುಂಡಿಯ ಬಳಿ ಶವಪೆಟ್ಟಿಯನ್ನು ಕೆಳಗೆ ಇಳಿಸಲು ಪ್ರಯತ್ನಿಸುತ್ತಿದ್ದಾಗ ಕುಟುಂಬ ಸದಸ್ಯರ ಸಮೇತ ಎಲ್ಲರೂ ಸಮಾಧಿಗೆಂದು ತೋಡಲಾಗಿದ್ದ ಗುಂಡಿಯಲ್ಲಿ ಬಿದ್ದಿದ್ದಾರೆ. ಐದಾರು ಮಂದಿ ಶವಪೆಟ್ಟಿಗೆ ಹಿಡಿದು ಮರದ ವೇದಿಕೆಯಂತಿದ್ದ ಸ್ಥಳಕ್ಕೆ ಬಂದಿದ್ದಾರೆ. ಕೂಡಲೇ ಆ ವೇದಿಕೆ ಕುಸಿದಿತ್ತು. ಅಲ್ಲಿ ಮುಂದಿರುವ ಗುಂಡಿಯಲ್ಲಿ ಎಲ್ಲರೂ ಬಿದ್ದಿದ್ದಾರೆ. ಹಲವು ಮಂದಿಗೆ ಕೈಕಾಲುಗಳು ಮುರಿದಿವೆ. ಕ್ಯಾಮೆರಾದಲ್ಲಿ ಸೆರೆಯಾದ ಈ ಆಘಾತಕಾರಿ ಘಟನೆ ಈಗ ವೈರಲ್ ಆಗಿದ್ದು, ಅಂತ್ಯಕ್ರಿಯೆ ಪದ್ಧತಿಗಳಲ್ಲಿನ ಸುರಕ್ಷತಾ ಮಾನದಂಡಗಳ ಬಗ್ಗೆ ಕಳವಳ ವ್ಯಕ್ತಪಡಿಸಿದೆ.

ಮನೆಗೆ ನುಗ್ಗಿ ಮಹಿಳೆ ಮೇಲೆ ಹಲ್ಲೆ ನಡೆಸಿ ಚಿನ್ನಾಭರಣ ದೋಚಿದ್ದವನಿಗೆ 10 ವರ್ಷ ಜೈಲು

ಮಡಿಕೇರಿ,ಏ.10– ನಗರದ ಐಡಿಬಿಐ ಬ್ಯಾಂಕ್ ಮುಂಭಾಗದ ಮನೆಗೆ ನುಗ್ಗಿ ಮಹಿಳೆಯ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿ ಚಿನ್ನಾಭರಣ ದೋಚಿದ್ದ ಆರೋಪಿಗೆ ನ್ಯಾಯಾಲಯ 10 ವರ್ಷ ಕಠಿಣ ಜೈಲು ಶಿಕ್ಷೆ ಮತ್ತು 15 ಸಾವಿರ ರೂ. ದಂಡ ವಿಧಿಸಿ ತೀರ್ಪು ನೀಡಿದೆ.



ನಗರದ ಹೊರವಲಯದ ಪ್ರತಿಷ್ಠಿತ ರೆಸಾರ್ಟ್‌ನಲ್ಲಿ ಕೆಲಸ ಮಾಡುತ್ತಿದ್ದ ರಾಜಸ್ಥಾನ ಮೂಲದ ನಿವಾಸಿ ವಿಕಾಸ್ ಜೋರ್ಡಿಯಾ(35) ಎಂಬಾತನೇ ಶಿಕ್ಷೆಗೆ ಗುರಿಯಾದ ಅಪರಾಧಿ.

ಪ್ರಕರಣ ಹಿನ್ನೆಲೆ: ನಗರದ ಐಡಿಬಿಐ ಬ್ಯಾಂಕ್ ಮುಂಭಾಗದ ಮನೆಯಲ್ಲಿ ಸಾಕಮ್ಮ ಪ್ರಭಾಕರ್ 2023ರ ನವೆಂಬರ್ 5ರಂದು ಒಬ್ಬರೇ ಇದ್ದ ಸಂದರ್ಭದಲ್ಲಿ ಅಪರಿಚಿತ ವ್ಯಕ್ತಿ ಮನೆಗೆ ನುಗ್ಗಿ ಮಹಿಳೆಯ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿದ್ದ. ಬಳಿಕ ಕತ್ತಿನಲ್ಲಿದ್ದ ಚಿನ್ನದ ಕರಿಮಣಿ ಸರ ಮತ್ತು ಕೈ ಬೆರಳಿನಲ್ಲಿದ್ದ ಉಂಗುರವನ್ನು ಕಸಿದುಕೊಂಡು ಹೋಗಿರುವ ಬಗ್ಗೆ ಮಡಿಕೇರಿ ನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿತ್ತು.

ಮಡಿಕೇರಿ ನಗರ ಪೊಲೀಸರು ತನಿಖೆ ಕೈಗೊಂಡು ರೆಸಾರ್ಟ್ ಒಂದರಲ್ಲಿ ಕೆಲಸ ಮಾಡುತ್ತಿದ್ದ ರಾಜಸ್ಥಾನ ಮೂಲದ ನಿವಾಸಿ ವಿಕಾಸ್ ಜೋರ್ಡಿಯಾ ಎಂಬಾತನನ್ನು 2023ರ ನವೆಂಬರ್ 6ರಂದು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದರು. ಪ್ರಕರಣದ ತನಿಖಾಧಿಕಾರಿ ಅನೂಪ್ ಮಾದಪ್ಪ ಅವರು ಆರೋಪಿ ವಿಕಾಸ್ ಜೋರ್ಡಿಯಾ ವಿರುದ್ಧ ನಗರದ 1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯಕ್ಕೆ 2024ರ ಜನವರಿ 2ರಂದು ದೋಷಾರೋಪಣ ವರದಿ ಸಲ್ಲಿಸಿದ್ದರು.

ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಾಲಯ, ಹಲ್ಲೆ ಮಾಡಿ ದರೋಡೆ ಮಾಡಿರುವ ಅಪರಾಧಕ್ಕಾಗಿ ಪ್ರಕರಣದ ಆರೋಪಿ ವಿಕಾಸ್ ಜೋರ್ಡಿಯಾನಿಗೆ 10 ವರ್ಷ ಕಠಿಣ ಜೈಲು ಶಿಕ್ಷೆ ಹಾಗೂ ರೂ.15 ಸಾವಿರ ರೂ.ದಂಡ ವಿಧಿಸಿದೆ. ದಂಡದ ಮೊತ್ತವನ್ನು ಪಾವತಿಸದಿದ್ದಲ್ಲಿ 3 ತಿಂಗಳ ಜೈಲು ಶಿಕ್ಷೆ ಅನುಭವಿಸುವಂತೆ ನ್ಯಾಯಾಧೀಶರಾದ ಜಿ.ಪ್ರಶಾಂತಿ ಅವರು ತೀರ್ಪು ನೀಡಿದ್ದಾರೆ. ಸರ್ಕಾರಿ ಅಭಿಯೋಜಕ ದೇವೇಂದ್ರ.ಎನ್.ಪಿ ಅವರು ಸರಕಾರದ ಪರವಾಗಿ ವಾದ ಮಂಡಿಸಿದ್ದಾರೆ.

ಹನುಮ ಜಯಂತಿ ಪ್ರಯುಕ್ತ ವಿಶೇಷ ಪೂಜೆ



ಮಡಿಕೇರಿ ಏ.10– ನಗರದ ಶ್ರೀ ಆಂಜನೇಯ ದೇವಾಲಯದಲ್ಲಿ ಹನುಮ ಜಯಂತಿ ಹಬ್ಬದ ಪ್ರಯುಕ್ತ ಏಪ್ರಿಲ್ 12ರ ಬೆಳಗ್ಗೆ 10 ರಿಂದ 11.30 ರವರೆಗೆ ಭಕ್ತಾದಿಗಳಿಗೆ ವಿಶೇಷ ಸೇವೆ 'ಶ್ರೀ ರಾಮ ತಾರಕ ಹೋಮ' ನಡೆಯಲಿದೆ. ನಂತರ ಮಧ್ಯಾಹ್ನ 11.30 ಗಂಟೆಗೆ ಮಹಾಪೂಜೆ ಮತ್ತು 12.30 ಗಂಟೆಗೆ ಪ್ರಸಾದ ವಿತರಣೆ ನಡೆಯಲಿದೆ.

ಹೆಚ್ಚಿನ ಮಾಹಿತಿಗೆ ದೂರವಾಣಿ ಸಂ. 9902290302/ 9845821566/ 9481473472 ಅನ್ನು ಸಂಪರ್ಕಿಸಬಹುದು ಎಂದು ಶ್ರೀ ಓಂಕಾರೇಶ್ವರ ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿ ದೇವರಾಜು ಅವರು ತಿಳಿಸಿದ್ದಾರೆ.

ಮುದ್ದಂಡ ಕಪ್ ಹಾಕಿ ಉತ್ಸವ; ಮುಂದಿನ ಸುತ್ತಿಗೆ ತಂಡಗಳು



ಬೊಪ್ಪಂಡ ತಂಡದಿಂದ ಗೋಲು ಗಳಿಸುವ ಯತ್ನ

ಮಡಿಕೇರಿ,ಏ.10– ಮುದ್ದಂಡ ಕಪ್ ಹಾಕಿ ಉತ್ಸವದಲ್ಲಿ ಏ.10ರಂದು ನಡೆದ ಪಂದ್ಯಾವಳಿಯಲ್ಲಿ ಮದ್ರೀರ, ಪಳಂಗಂಡ, ಮೇಚಿಯಂಡ, ಕೂತಂಡ, ಕೇಳಪಂಡ, ವಾಟೇರಿರ, ಕೇಚೆಟೀರ, ಮಂಡೇಪಂಡ, ಮಂಡೇಡ, ಮೂಕಳಮಾಡ, ಚೆರುಮಾಡಂಡ, ಮುರುವಂಡ, ಅಜ್ಜಿನಂಡ, ಅಣ್ಣಾಡಿಯಂಡ, ಪರದಂಡ, ಮುಡ್ಯೋಳಂಡ, ಪಾಡೆಯಂಡ, ಮೈಂದಪಂಡ, ಮಲ್ಲಮಾಡ ಕುಟುಂಬ ತಂಡಗಳು ಮುಂದಿನ ಸುತ್ತಿಗೆ ಅರ್ಹತೆ ಪಡೆದವು.

ಇಂದಿನ ಪಂದ್ಯಾವಳಿಯ ವಿವರ

ಮೈದಾನ–1: ಬೆಳಿಗ್ಗೆ 9 ಗಂಟೆಗೆ ಮಲ್ಚೀರ–ಬೊಟ್ಟೋಳಂಡ, 10 ಗಂಟೆಗೆ ಕನ್ನಂಡ–ಚೊಟ್ಟೇರ, 11 ಗಂಟೆಗೆ ಕೋಡಿರ–ಪಾಲೆಕಂಡ, ಮಧ್ಯಾಹ್ನ 1 ಗಂಟೆಗೆ ಬಡುವಮಂಡ–ಪಳಂಗೇಟಿರ, 2 ಗಂಟೆಗೆ ನೆಲ್ಲಮಕ್ಕಡ–ಕೊಳುವಾಡಂಡ, 3 ಗಂಟೆಗೆ ಮುಕ್ಕಾಟಿರ(ಕಡಗದಾಳು)–ಚಂದೂರ

ಮೈದಾನ–2: ಬೆಳಿಗ್ಗೆ 9 ಗಂಟೆಗೆ ಬಿದ್ದಾಟಂಡ–ಪಾಲಂದೀರ, 10 ಗಂಟೆಗೆ ಮಂದಂಗಡ–ಬೇರೆರ, 11 ಗಂಟೆಗೆ ಮಲ್ಲಂಗಡ–ಮಲ್ಲಂಗಡ, ಮಧ್ಯಾಹ್ನ 1 ಗಂಟೆಗೆ ಮಚ್ಚಮಾಡ–ಅಜ್ಜೆಟ್ಟಿರ, 2 ಗಂಟೆಗೆ ಕುಪ್ಪಂಡ(ಕೈಕೇರಿ)–ಮಾಳೆಯಂಡ, 3 ಗಂಟೆಗೆ ಚೆಂಬಂಡ–ನಾಗಂಡ.

ಮೈದಾನ–3: ಬೆಳಿಗ್ಗೆ 8.30ಕ್ಕೆ ತೀತಮಾಡ–ತಾತಂಡ, 9 ಗಂಟೆಗೆ ತಾಚಮಂಡ–ಐನಂಡ, 10 ಗಂಟೆಗೆ ಐಚೆಟ್ಟಿರ–ಕಾಳೆಯಂಡ, 11 ಗಂಟೆಗೆ ಕಳಕಂಡ–ಬಲ್ಲಣಮಾಡ, ಮಧ್ಯಾಹ್ನ 12.30 ಅಪ್ಪಚ್ಚಿರ–ನಾಳಿಯಂಡ, 1.30ಕ್ಕೆ ಕೊಂಗೆಟ್ಟಿರ–ಪಂದ್ಯಂಡ ಕುಟುಂಬ ತಂಡಗಳ ನಡುವೆ ಪಂದ್ಯಾಟ ನಡೆಯಲಿದೆ.

ವಿರಾಜಪೇಟೆಯಲ್ಲಿ ಒಳರೋಗಿಗಳಿಗೆ ಹಣ್ಣು–ಹಂಪಲು ವಿತರಿಸುವ ಮೂಲಕ ಮಹಾವೀರ ಜಯಂತಿ ಆಚರಣೆ



ಶ್ರೀ ಮಹಾವೀರ ಜಯಂತಿ ಪ್ರಯುಕ್ತ ವಿರಾಜಪೇಟೆ ನಗರದ ಜೈನ ಸಮಾಜದಿಂದ ಸಾರ್ವಜನಿಕ ಆಸ್ಪತ್ರೆಯ ಒಳರೋಗಿಗಳಿಗೆ ಹಣ್ಣು–ಹಂಪಲು ವಿತರಿಸಲಾಯಿತು.

ವಿರಾಜಪೇಟೆ, ಏ.10– ಭಗವಾನ್ ಶ್ರೀ ಮಹಾವೀರ ಜಯಂತಿ ಪ್ರಯುಕ್ತ ವಿರಾಜಪೇಟೆ ನಗರದ ಜೈನ ಸಮಾಜದ ವತಿಯಿಂದ ಸಾರ್ವಜನಿಕ ಆಸ್ಪತ್ರೆಯ ಒಳರೋಗಿಗಳಿಗೆ ಹಣ್ಣು ಹಂಪಲು ವಿತರಿಸಲಾಯಿತು.

ಈ ವೇಳೆ ನಿಕ್ಷೆಪ್ ಜೈನ್ ಅವರು ಮಾತನಾಡಿ, ಭಗವಾನ್ ಶ್ರೀ ಮಹಾವೀರ ಅವರು ವಿಶ್ವಕ್ಕೆ ಉತ್ತಮವಾದ ತತ್ವ ಸಂದೇಶವನ್ನು ನೀಡಿದ್ದರು. ನಾವುಗಳು ಇಂದು ಅವರ ಆದರ್ಶವನ್ನು ಪಾಲಿಸಬೇಕಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಸಾರ್ವಜನಿಕ ಆಸ್ಪತ್ರೆಯ ಮುಖ್ಯ ವೈದ್ಯಾಧಿಕಾರಿ ವಿಶ್ವನಾಥ್ ಸಿಂಪಿ ಮಾತನಾಡಿ, ಭಗವಾನ್ ಶ್ರೀ ಮಹಾವೀರ ಅವರ ಹೆಸರಿನಲ್ಲಿ ದಾನ ಧರ್ಮ ನೀಡುವುದು ಉತ್ತಮ ಕಾರ್ಯ ಎಂದರು.

ಹಣ್ಣು–ಹಂಪಲು ವಿತರಣೆ ಸಂದರ್ಭ ಜೈನ ಸಮಾಜದ ಅಧ್ಯಕ್ಷ ಜೆ.ಎನ್. ಪುಷ್ಪರಾಜ್, ಉಪಾಧ್ಯಕ್ಷ ಜೆ.ಪಿ.ಅರುಣ್ ಕುಮಾರ್, ಕಾರ್ಯದರ್ಶಿ ಚಂದ್ರಪ್ರಸಾದ್, ಖಜಾಂಚಿ ಜಯಲೀಲಾ ಸತೀಶ್, ಸದಸ್ಯರಾದ ಸಂಪತ್ ಕುಮಾರ್, ರವಿ ಕುಮಾರ್, ಪದ್ಮಜಾ ಸುಕುಮಾರ್, ಮಹೇಂದ್ರ ಜೈನ್, ನಿಕ್ಷೇಪ್ ಜೈನ್, ಇಚ್ಚಚಂದ್ರಪ್ರಸಾದ್ ಮತ್ತಿತರರು ಭಾಗವಹಿಸಿದ್ದರು.



ಬೇಟೋಳಿ ಸರ್ಕಾರಿ ಶಾಲೆಗೆ ಅತ್ಯುತ್ತಮ ಎಸ್‌ಡಿಎಂಸಿ ಪ್ರಶಸ್ತಿ



ಬೇಟೋಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಮೇಲುಸ್ತುವಾರಿ ಸಮಿತಿಯ ಅಧ್ಯಕ್ಷ, ಮುಖ್ಯ ಶಿಕ್ಷಕಿ ಸೀತಾರಿಗೆ ಲ್ಯಾಪ್‌ಟಾಪ್ ಅನ್ನು ನೀಡಿದರು.

ಪೊನ್ನಂಪೇಟೆ,ಏ.10– ಶೈಕ್ಷಣಿಕ ಸಾಲಿನ ಅತ್ಯುತ್ತಮ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ (ಎಸ್‌ಡಿಎಂಸಿ) ಪ್ರಶಸ್ತಿಯನ್ನು ವಿರಾಜಪೇಟೆ ಸಮೀಪದ ಗುಂಡಿಕೆರೆಯಲ್ಲಿರುವ ಬೇಟೋಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಪಡೆದುಕೊಂಡಿದೆ. ಜಿಲ್ಲೆಯಲ್ಲಿ ಆಯ್ಕೆಗೊಂಡಿರುವ ಒಟ್ಟು ಮೂರು ಶಾಲೆಯ ಎಸ್‌ಡಿಎಂಸಿ ಪೈಕಿ ವಿರಾಜಪೇಟೆ ತಾಲೂಕಿನಿಂದ ಆಯ್ಕೆಗೊಂಡ ಬೇಟೋಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಏಕೈಕ ಶಾಲೆಯಾಗಿದೆ.

ಸಾರ್ವಜನಿಕ ಶಿಕ್ಷಣ ಇಲಾಖೆ ವಿದ್ಯಾವಾಹಿನಿ ಪೋರ್ಟಲ್‌ನಲ್ಲಿ ನಿರ್ದಿಷ್ಟ ಮಾನದಂಡಗಳ ಆಧಾರದಲ್ಲಿ ಎಸ್‌ಡಿಎಂಸಿಗಳ ಸಮೀಕ್ಷೆಯನ್ನು ಆಯೋಜಿಸಿ ಸಮೀಕ್ಷೆಯ ಅಂತಿಮ ಘಟ್ಟದಲ್ಲಿ ದೊರೆಯುವ ಗರಿಷ್ಠ ಅಂಕಗಳ ಆಧಾರದಲ್ಲಿ ಜಿಲ್ಲಾವಾರು ಅತ್ಯುತ್ತಮ ಎಸ್‌ಡಿಎಂಸಿ ಪ್ರಶಸ್ತಿಯನ್ನು ಘೋಷಿಸಲಾಗಿದೆ.

ಅತ್ಯುತ್ತಮ ಎಸ್‌ಡಿಎಂಸಿ ಪ್ರಶಸ್ತಿಗೆ ಆಯ್ಕೆಗೊಂಡಿರುವ ಗುಂಡಿಕೆರೆಯಲ್ಲಿರುವ ಬೇಟೋಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಅಭಿವೃದ್ಧಿಗಾಗಿ ಇಲಾಖೆ ನೀಡಿದ ರೂ. ಲಕ್ಷ ರೂ.ಮೊತ್ತದ ಬಹುಮಾನದಲ್ಲಿ ಖರೀದಿಸಲಾಗಿರುವ ಲ್ಯಾಪ್‌ಟಾಪ್ ಅನ್ನು ಶಾಲೆಯಲ್ಲಿ ಇಂದು ನಡೆದ ಸಮುದಾಯದತ್ತ ಶಾಲಾ ಕಾರ್ಯಕ್ರಮದಲ್ಲಿ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಅಧ್ಯಕ್ಷರಾದ ಗ್ರಾಪಂ ಸದಸ್ಯ ಮೀತಲತಂಡ ಎಂ ಇಸ್ಮಾಯಿಲ್ ಶಾಲೆಯ ಮುಖ್ಯ ಶಿಕ್ಷಕಿ ಸೀತಾರಿಗೆ ಹಸ್ತಾಂತರಿಸಿದರು.

ಮೊದಲಿನಿಂದಲೂ ಬೇಟೋಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಗುಣಮಟ್ಟದ ಶಿಕ್ಷಣದ ಮೂಲಕ ಖಾಸಗಿ ಶಾಲೆಗೆ ಪೈಪೋಟಿ ನೀಡುವ ಹಂತಕ್ಕೆ ಬೆಳೆದು ನಿಂತಿದೆ ಎಂದು ಇಸ್ಮಾಯಿಲ್ ಹರ್ಷ ವ್ಯಕ್ತಪಡಿಸಿದರು. ಇಚ್ಛಾಶಕ್ತಿಯೊಂದಿದ್ದರೆ ಸರ್ಕಾರಿ ಶಾಲೆಯನ್ನು ಸರ್ವತೋಮುಖವಾಗಿ ಅಭಿವೃದ್ಧಿಗೊಳಿಸಬಹುದು ಮತ್ತು ಪೋಷಕರನ್ನು ಆಕರ್ಷಿಸಬಹುದು ಎಂಬುದಕ್ಕೆ ಈ ಸರಕಾರಿ ಶಾಲೆ ಉತ್ತಮ ಮಾದರಿಯಾಗಿದೆ ಎಂದು ಹೇಳಿದರು.

ಮಾರ್ಗದರ್ಶಕ ಶಿಕ್ಷಕರಾಗಿ ಆಗಮಿಸಿದ ವಿರಾಜಪೇಟೆಯ ಜಯಪ್ರಕಾಶ್ ನಾರಾಯಣ್ ಎಸ್‌ಡಿಎಂಸಿ ಸದಸ್ಯರಾದ ವನಿತಾ ಕುಮಾರ, ಶಾಲೆಯ ದೈಹಿಕ ಶಿಕ್ಷಕ ತಿಮ್ಮಯ್ಯ ಸಹ ಶಿಕ್ಷಕ ಶ್ರೀನಿವಾಸ್, ಸುಜಾತ ಉಪಸ್ಥಿತರಿದ್ದರು.

ಸೋಮಯ್ಯ ಸಾವಿನ ಪ್ರಕರಣದಲ್ಲಿ ಕಾಂಗ್ರೆಸ್ ಪಕ್ಷ ಸಂಭ್ರಮಿಸುವುದಿಲ್ಲ

ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಪಿ.ವಿ. ಜಾನ್ಸನ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ಸದಸ್ಯೆ ಕೋಳೆರ ಟೀನಾ ಇದ್ದಾರೆ.



ವಿರಾಜಪೇಟೆ: ವಿನಯ್ ಸೋಮಯ್ಯ ಸಾವಿನ ಪ್ರಕರಣದಲ್ಲಿ ಕಾಂಗ್ರೆಸ್ ಪಕ್ಷ ಸಂಭ್ರಮಿಸುವುದಿಲ್ಲ. ಅವರ ಕುಟುಂಬಕ್ಕೆ ಧೈರ್ಯ ತುಂಬುವಂತ ಸಹ ಕಾರವನ್ನು ಸರಕಾರ ನೀಡುತ್ತದೆ ಎಂದು ತಾಲೂಕು ಗ್ಯಾರಂಟಿ ಅನುಷ್ಠಾನ ಪ್ರಾಧಿಕಾ ರದ ಅಧ್ಯಕ್ಷ ಪಿ.ವಿ. ಜಾನ್ಸನ್ ಹೇಳಿದ್ದಾರೆ.

ವಿಧಾನಸಭಾ ಕ್ಷೇತ್ರದ ಶಾಸಕರ ಭವನದಲ್ಲಿ ಕರೆದಿದ್ದ ಗೋಷ್ಠಿಯಲ್ಲಿ ಮಾತನಾಡಿ, ಸಾಮಾಜಿಕ ಜಾಲತಾಣದಲ್ಲಿ ಶಾಸಕರನ್ನು ಅವಹೇಳನ ಮಾಡಿ ತೇಜೋವಧೆ ಮಾಡುವುದನ್ನು ಮತ್ತು ಕಾಂಗ್ರೆಸ್ ಪಕ್ಷದ ವಿರುದ್ಧ ಆರೋಪ ಮಾಡುವುದನ್ನು ಖಂಡಿಸುತ್ತದೆ ಎಂದರು.

ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಸದಸ್ಯೆ ಕೋಳೆರ ಟೀನಾ ಮಾತನಾಡಿ, ಜಿಲ್ಲೆಯ ಇಬ್ಬರು ಶಾಸಕರು ಹಿಂದೆಂದೂ ಕಾಣದ ಅಭಿವೃದ್ಧಿಯತ್ತ ಸಾಕಷ್ಟು ಅನುದಾನ ತಂದಿದ್ದಾರೆ ಇದರಿಂದ ಮುಂದಿನ ಚುನಾವಣೆಯಲ್ಲಿ ಸೋಲುವ ಭಯದಿಂದ ಬಿಜೆಪಿ ಅವರು ಇಲ್ಲಸಲ್ಲದ ಆರೋಪಗಳನ್ನು ಮಾಡುತ್ತಿದ್ದಾರೆ ಎಂದರು. ಕೆದಮುಳ್ಳೂರು ಕಾಂಗ್ರೆಸ್ ವಲಯ ಅಧ್ಯಕ್ಷ ನಡಿಕೇರಿಯಂಡ ಮಹೇಶ್ ಉಪಸ್ಥಿತರಿದ್ದರು.

ಏ.13 ರಿಂದ ಪಾಲೂರು ಶ್ರೀ ಮಹಾಲಿಂಗೇಶ್ವರ ದೇವಾಲಯದ ವಾರ್ಷಿಕ ಉತ್ಸವ

ನಾಪೋಕ್ಲು, ಏ.10– ಸಮೀಪದ ಪಾಲೂರು ಗ್ರಾಮದ ಶ್ರೀ ಪಾಲೂರಪ್ಪ ಮಹಾಲಿಂಗೇಶ್ವರ ದೇವಾಲಯದ ವಾರ್ಷಿಕ ಉತ್ಸವ ಏ.13 ರಿಂದ 19 ರವರೆಗೆ ನಡೆಯಲಿದೆ.

ಏಪ್ರಿಲ್ 13ರ ಭಾನುವಾರ ಮಹಾಲಿಂಗೇಶ್ವರ ದೇವರ ಮೂಲ ಸ್ಥಾನದಲ್ಲಿ ಪೂಜೆ ಸಲ್ಲಿಸುವುದರೊಂದಿಗೆ ವಾರ್ಷಿಕ ಹಬ್ಬಕ್ಕೆ ಚಾಲನೆ ನೀಡಲಾಗುವುದು. ಏ.14 ರಂದು ಗಣ ಹೋಮ ಮತ್ತು ಕೊಡಿಮರ ಏರಿಸುವುದು, ಬೆಳಿಗ್ಗೆ, ಮಧ್ಯಾಹ್ನ ಮತ್ತು ರಾತ್ರಿ ಉತ್ಸವ ಬಲಿ ನಡೆಯಲಿದೆ. ಏಪ್ರಿಲ್ 16 ರಂದು ಬುಧವಾರ ಉತ್ಸವ ಬಲಿ ಮತ್ತು ರಾತ್ರಿ ದೀಪಾರಾಧನೆ ನಡೆಯಲಿದೆ. ಏ.17ರಂದು ಗುರುವಾರ ಹಗಲು ಉತ್ಸವ ಬಲಿ ನಡೆದು ಸಂಜೆ ದೀಪಾರಾಧನೆ ನಡೆಯಲಿದೆ. 18 ರಂದು ಪಟ್ಟಣಿ ಹಬ್ಬ ಜರುಗಲಿದೆ. ಬೆಳಗ್ಗೆ ತುಲಾಭಾರ, ಮಧ್ಯಾಹ್ನ ಎತ್ತು ಪೋರಾಟ, ಬಳಿಕ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಭಕ್ತರಿಗೆ ಅನ್ನ ಸಂತರ್ಪಣೆಯನ್ನು ಏರ್ಪಡಿಸಲಾಗಿದೆ. ಅಪರಾಹ್ನ ಜೋಡಿ ದೇವರ ನೃತ್ಯೋತ್ಸವ ನಡೆಯಲಿದೆ ಎಂದು ದೇವಸ್ಥಾನದ ಪ್ರಕಟಣೆ ತಿಳಿಸಿದೆ.



ಪಾಲೂರು ಗ್ರಾಮದ ಪಾಲೂರಪ್ಪ ಮಹಾಲಿಂಗೇಶ್ವರ ದೇವಾಲಯ.

ಕೊಳ್ಳೇಗಾಲದಲ್ಲಿ ಅಂಬೇಡ್ಕರ್ ಹಬ್ಬ; ಇಂದಿನಿಂದ 14ರ ತನಕ ವಿಭಿನ್ನ ರೀತಿಯಲ್ಲಿ ಅಂಬೇಡ್ಕರ್ ಸ್ಮರಣೆ

ಕೊಳ್ಳೇಗಾಲ,ಏ.10– ಡಾ.ಬಿ.ಆರ್.ಅಂಬೇಡ್ಕರ್ ಅವರ 134ನೇ ಜಯಂತ್ಯುತ್ಸವವನ್ನು ಪಟ್ಟಣದ ಭೀಮನಗರದಲ್ಲಿ ಏ.11ರಿಂದ ಮನೆ ಮನೆಯ ಹಬ್ಬವಾಗಿ ನಾಲ್ಕು ದಿನಗಳ ಕಾಲ ವಿಭಿನ್ನ ಹಾಗೂ ವಿಶಿಷ್ಟ ರೀತಿಯಲ್ಲಿ ಆಚರಣೆ ಮಾಡಲಾಗುತ್ತಿದೆ ಎಂದು ಭೀಮನಗರದ ದೊಡ್ಡ ಯಜಮಾನ ಚಿಕ್ಕಮಾಳಿಗೆ ಹೇಳಿದರು.



ಸುದ್ದಿಗೋಷ್ಠಿಯಲ್ಲಿ ಅಂಬೇಡ್ಕರ್ ಜಯಂತಿ 4 ದಿನಗಳ ಆಚರಣೆ ಸಂಬಂಧ ಕಾರ್ಯಕ್ರಮದ ಪತ್ರಿಕೆಯನ್ನು ದೊಡ್ಡ ಯಜಮಾನ ಚಿಕ್ಕಮಾಳಿಗೆ ಪ್ರದರ್ಶಿಸಿದರು.

ಪ್ರವಾಸಿ ಮಂದಿರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಡಾ.ಬಿ.ಆರ್. ಅಂಬೇಡ್ಕರ್ ಅವರ 134ನೇ ಜಯಂತಿ ಆಚರಣಾ ಸಮಿತಿ ವತಿಯಿಂದ ಈ ಬಾರಿ ಜಯಂತ್ಯುತ್ಸವ ಅಂಗವಾಗಿ 4 ದಿನಗಳ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಆಯೋಜಿಸಿದ್ದೇವೆ, ಏ.11 ರಂದು ಭೀಮನಗರದ ಮಾತೆ ಸಾವಿತ್ರಿ ಬಾಯಿಫುಲೆ ಜ್ಞಾನ ಮಂದಿರದಲ್ಲಿ ಕಾನೂನು ಅರಿವು ಕಾರ್ಯಕ್ರಮ, ಏ.12 ರಂದು ರಮಾಬಾಯಿ ಶಾಲೆಯಲ್ಲಿ ಬೆಳಗ್ಗೆ 9 ರಿಂದ 2 ಗಂಟೆವರೆವಿಗೆ ಉಚಿತ ಆರೋಗ್ಯ ತಪಾಸಣಾ ಹಾಗೂ ರಕ್ತದಾನ ಶಿಬಿರ, 13 ರಂದು ಪಟ್ಟಣದ ಬಸವೇಶ್ವರ ಮಿಲ್ ಪಕ್ಕದ ಭೀಮನಗರದ ಆದಿ ಕರ್ನಾಟಕ ಜನಾಂಗದ ನಿವೇಶನದಲ್ಲಿ ಸಂಜೆ 4 ಗಂಟೆಗೆ ಸಾಂಸ್ಕೃತಿಕ ಕಾರ್ಯಕ್ರಮ, 6 ಗಂಟೆಗೆ ಖ್ಯಾತ ರಂಗಕರ್ಮಿ ಗಿರೀಶ್ ಮಾಚಳ್ಳಿಯವರ ರಚನೆ ಮತ್ತು ನಿರ್ದೇಶನದ ಮನುಸ್ಮೃತಿ ಮತ್ತು ಭಾರತ ಸಂವಿಧಾನ ನಾಟಕ ಪ್ರದರ್ಶನ, 14 ರಂದು ಬೆಳಗ್ಗೆ 6ರಿಂದ ರಿಂದ 8 ಗಂಟೆ ವರೆವಿಗೆ ರಂಗೋಲಿ ಸ್ಪರ್ಧೆ ಆಯೋಜಿಸಲಾಗಿದೆ. 9 ಗಂಟೆಗೆ ತಾಲೂಕು ಆಡಳಿತ ವತಿಯಿಂದ ನಡೆಸುವ ಡಾ.ಅಂಬೇಡ್ಕರ್ ಅವರ ಭಾವಚಿತ್ರ ಮೆರವಣಿಗೆ ಭೀಮನಗರದ ಬಸವನಗುಡಿ ಬೀದಿಯಿಂದ ಪ್ರಮುಖ ರಸ್ತೆಗಳಲ್ಲಿ ಸಾಗಲಿದ್ದು ನ್ಯಾಷನಲ್ ಶಾಲಾ ಆವರಣ ವೇದಿಕೆ ಕಾರ್ಯಕ್ರಮ ನಡೆಯಲಿದೆ. ಅಂದು ಸಂಜೆ 7 ಗಂಟೆಗೆ ಭೀಮನಗರದ ಆದಿ ಕರ್ನಾಟಕ ಜನಾಂಗದ ನಿವೇಶನದಲ್ಲಿ ಗೀತಾಗಾಯನ, ಬುದ್ಧಗಾಯನ, ಪ್ರತಿಭಾ ಪುರಸ್ಕಾರ, ಕಲಾವಿದರಿಗೆ ಸನ್ಮಾನ ಕಾರ್ಯಕ್ರಮ ಆಯೋಜಿಸಲಾಗಿದೆ.

ಸಮಾರಂಭದಲ್ಲಿ ಸಚಿವರು, ಸಂಸದರು, ಶಾಸಕರು ಹಾಗೂ ಮಾಜಿ ಶಾಸಕರು, ನಗರಸಭೆ ಅಧ್ಯಕ್ಷರು ಹಾಗೂ ಸದಸ್ಯರು, ಜನಪ್ರತಿನಿಧಿಗಳು, ವಿವಿಧ ಸಮುದಾಯದ ಮುಖಂಡರು, ವಿವಿಧ ಗ್ರಾಮಗಳ ದಲಿತ ಮುಖಂಡರು, ಅಂಬೇಡ್ಕರ್ ಅವರ ಸಂಘಟನೆಗಳ ಪದಾಧಿಕಾರಿಗಳು ಸೇರಿದಂತೆ ಅನೇಕ ಗಣ್ಯರನ್ನು ಆಹ್ವಾನಿಸಿದ್ದೇವೆ. ಈ ಹಿನ್ನಲೆ ಕಾರ್ಯಕ್ರಮಕ್ಕೆ ಹೆಚ್ಚು ಸಂಖ್ಯೆಯಲ್ಲಿ ಸರ್ವರೂ ಆಗಮಿಸಿ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

ಈ ವೇಳೆ ಹಿರಿಯ ಮುಖಂಡ ಎಂ ನಟರಾಜ ಮಾಳಿಗೆ, ಹಿರಿಯ ಪತ್ರಕರ್ತ ನಿಂಪು ರಾಜೇಶ್, ಯಜಮಾನರುಗಳಾದ ವರದರಾಜು, ಪಾಪಣ್ಣ, ಮಹದೇವಸ್ವಾಮಿ, ಸಿದ್ದಾರ್ಥ್, ಸನತ್ಕುಮಾರ್, ಮುಖಂಡ ಲಿಂಗರಾಜು, ಚಂದ್ರಶೇಖರ್, ದಿಲೀಪ್ ಸಿದ್ದಪ್ಪಾಜಿ, ಚೇತನ್, ಎಸ್.ಸಿದ್ದಪ್ಪಾಜಿ, ಕಿರಣ್, ನಟರಾಜು ಇನ್ನಿತರರಿದ್ದರು.

ಶಾಸಕ ಎ.ಆರ್.ಕೃಷ್ಣಮೂರ್ತಿ ವಿರುದ್ಧ ಮಾರಸಂದ್ರ ಮುನಿಯಪ್ಪ ಆರೋಪ ಸತ್ಯಕ್ಕೆ ದೂರ

ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಹೆಚ್.ವಿ.ಚಂದ್ರು



ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಹೆಚ್.ವಿ.ಚಂದ್ರು ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಿರುವುದು.

ಚಾಮರಾಜನಗರ, ಏ.10– ಕೊಳ್ಳೇಗಾಲ ಶಾಸಕ ಎ.ಆರ್.ಕೃಷ್ಣಮೂರ್ತಿ ವಿರುದ್ಧ ಬಿಎಸ್‌ಪಿ ರಾಜ್ಯಾಧ್ಯಕ್ಷ ಮಾರಸಂದ್ರ ಮುನಿಯಪ್ಪ ಮಾಡಿರುವ ಆರೋಪ ಸತ್ಯಕ್ಕೆ ದೂರವಾದದ್ದು ಎಂದು ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಹೆಚ್.ವಿ.ಚಂದ್ರು ಹೇಳಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕೊಳ್ಳೇಗಾಲದ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಮಾರಸಂದ್ರ ಮುನಿಯಪ್ಪ, ಬಡವರ ಹಾಗೂ ರೈತರ ಪರವಾಗಿ ಶಾಸಕ ಎ.ಆರ್.ಕೃಷ್ಣಮೂರ್ತಿ ಕೆಲಸ ಮಾಡುತ್ತಿಲ್ಲ ಎಂದು ಮಾಡಿರುವ ಆರೋಪದಲ್ಲಿ ಯಾವುದೇ ಹುರುಳಿಲ್ಲ ಎಂದರು.

ಮುನಿಯಪ್ಪ ಅವರು ತಮ್ಮ ಹಿಂಬಾಲಕರ ಪ್ರಚೋದನೆಯಿಂದ ಶಾಸಕ ಎ.ಆರ್.ಕೃಷ್ಣಮೂರ್ತಿ ವಿರುದ್ಧ ಇಲ್ಲಸಲ್ಲದ ಆರೋಪ ಮಾಡಿದ್ದಾರೆ. ಎ.ಆರ್.ಕೃಷ್ಣಮೂರ್ತಿ ಬಡವರ ಪರ ಕೆಲಸ ಮಾಡುತ್ತಿದ್ದಾರೆ. ಶಾಸಕರಾದ ನಂತರ ಬೆಂಗಳೂರಿಗೆ ಹೋದಾಗ ಹೊರತುಪಡಿಸಿ ಪ್ರತಿದಿನ ಕ್ಷೇತ್ರದಲ್ಲಿ ಸಂಚರಿಸಿ ಜನಸಂಪರ್ಕ ಸಭೆ ನಡೆಸಿ ಕಷ್ಟ ಸುಖಗಳಿಗೆ ಸ್ಪಂದಿಸುತ್ತಿದ್ದಾರೆ. ಸದನದಲ್ಲಿಯೂ ಕ್ಷೇತ್ರದ ಅಭಿವೃದ್ಧಿ ಪರ ಮಾತನಾಡುತ್ತಾರೆ ಎಂದರು. ಸ್ವಾತಂತ್ರ್ಯ ಬಂದು 75 ವರ್ಷ ಕಳೆದರೂ ಬಿಳಿಗಿರಿರಂಗನಬೆಟ್ಟದ ಪುರಾಣಿ ಪೋಡಿಗೆ ವಿದ್ಯುತ್ ಸೌಲಭ್ಯ ಇರಲಿಲ್ಲ. 10 ಕೋಟಿ ಅನುದಾನ ತಂದು ವಿದ್ಯುತ್ ಸೌಲಭ್ಯ ಕಲ್ಪಿಸಿದ್ದಾರೆ. ಅಲ್ಲದೇ ಯಳಂದೂರಿನಲ್ಲಿ 100 ಹಾಸಿಗೆಯುಳ್ಳ ಆಸ್ಪತ್ರೆ ನಿರ್ಮಾಣಕ್ಕೆ ಮುಂದಾಗಿದ್ದಾರೆ. ಕ್ಷೇತ್ರವನ್ನು ಶೈಕ್ಷಣಿಕವಾಗಿ ಮುಂದೆ ತರುವ ನಿಟ್ಟಿನಲ್ಲಿ 3 ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಮಂಜೂರು ಮಾಡಿಸಿದ್ದಾರೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಚೂಡಾಧ್ಯಕ್ಷ ಮಹಮ್ಮದ್ ಅಸ್ಗರ್, ಕೊಳ್ಳೇಗಾಲ ಬ್ಲಾಕ್ ಕಾಂಗ್ರೆಸ್‌ನ ಅಧ್ಯಕ್ಷ ತೋಟೇಶ್, ಜಿಲ್ಲಾ ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ ಆರ್.ಮಹದೇವ್, ಮುಖಂಡರಾದ ಕಂದಹಳ್ಳಿ ನಂಜುಂಡಸ್ವಾಮಿ, ಬಸ್ತಿಪುರ ರವಿ, ನಗರಸಭಾ ಸದಸ್ಯರಾದ ಸ್ವಾಮಿ ಹಾಜರಿದ್ದರು.

ಚಾ.ನಗರದಲ್ಲಿ ಮಹಾವೀರ ಜಯಂತಿ ಆಚರಣೆ



ಚಾಮರಾಜನಗರ, ಏ.10– ಸತ್ಯ, ಅಹಿಂಸೆಯ ಮೂಲಕ ಜಗತ್ತಿಗೆ ದಿವ್ಯ ಸಂದೇಶವನ್ನು ನೀಡಿದ ಮಹಾವೀರರ ಜೀವನ ಮತ್ತು ಅವರ ಮಾನವ ಪ್ರೀತಿ ಮಾದರಿ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯರಾದ ಡಾ. ಅಕ್ಷತಾ ಜೈನ್ ತಿಳಿಸಿದರು.

ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಂಗಣದಲ್ಲಿ ಕಸಾಪ ಆಶ್ರಯದಲ್ಲಿ ನಡೆದ ಮಹಾವೀರ ಜಯಂತಿ ಅಂಗವಾಗಿ ಮಹಾವೀರರ ಪ್ರತಿಮೆಗೆ ಪುಷ್ಪವನ್ನು ಅರ್ಪಿಸುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ ಶುಭ ಹಾರೈಸಿದರು.

ಈ ವೇಳೆ ಮಾತನಾಡಿದ ರಾಮಸಮುದ್ರ ಜನಪದ ಮಹೇಶ್ ಮಹಾವೀರರು, ಭಾರತದ ಶ್ರೇಷ್ಠ ಸಂತರು, ಜೈನ ಧರ್ಮವನ್ನು ಬೆಳೆಸಿದ ಮಹಾವೀರರು ತಮ್ಮ ಕೋಟ್ಯಾಂತರ ಅನುಯಾಯಿಗಳ ಮೂಲಕ ಶಾಂತ ಸಮಾಜದ ನಿರ್ಮಾಣಕ್ಕೆ ಶ್ರಮಿಸಿದವರು. ಇಂದಿಗೂ ಶಾಂತಿ ಮತ್ತು ನೆಮ್ಮದಿಯ ವಾತಾವರಣವನ್ನು ನಿರ್ಮಿಸಲು ಶ್ರಮಿಸುತ್ತಿದೆ ಎಂದರು.

ಅಧ್ಯಕ್ಷತೆಯನ್ನು ತಾಲೂಕು ಕಸಾಪ ಅಧ್ಯಕ್ಷೆ ಸುರೇಶ್ ಎನ್ ಋಗ್ವೇದಿ ಮಾತನಾಡಿ, ಕ್ಷತ್ರಿಯ ಕುಲದಲ್ಲಿ ಜನಿಸಿ, ರಾಜ ವೈಭವದಲ್ಲಿ ಮೆರೆಯಬಹುದಾಗಿದ್ದ ವರ್ಧಮಾನರು ಸತ್ಯವನ್ನು ಕಂಡುಹಿಡಿಯಲು ತಪಸ್ಸಿನ ಮೂಲಕ ದಿವ್ಯ ಜ್ಞಾನವನ್ನು ಪಡೆದು ಸತ್ಯ, ಅಹಿಂಸೆ, ಕಳ್ಳತನ ಮಾಡದಿರುವುದು, ಬ್ರಹ್ಮಚರ್ಯ ಹಾಗೂ ಅಪರಿಗ್ರಹ ಬೋಧಿಸಿದ ಮಹಾವೀರರು ಜಗತ್ತಿಗೆ ಶಾಂತಿಯ ಪ್ರತೀಕವಾಗಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಕಸಾಪದ ಪದ್ಮಾ ಪುರುಷೋತ್ತಮ್, ಸರಸ್ವತಿ, ಶಿವಲಿಂಗಮೂರ್ತಿ, ಬಿ.ಕೆ.ಆರಾಧ್ಯ, ನಿವೃತ್ತ ಶಿಕ್ಷಕಿ ಗೀತಾ, ಕೃಷ್ಣವೇಣಿ, ಗ್ರಾಪಂ ಮಾಜಿ ಅಧ್ಯಕ್ಷ ರಮೇಶ್ ಬಾಬು ಇತರರು ಇದ್ದರು.

ತಾಯಮ್ಮ ನಿಧನ



ಚಾಮರಾಜನಗರ, ಏ.10– ತಾಲೂಕಿನ ಕರಿಯನಕಟ್ಟೆ ಗ್ರಾಮದ ತಾಯಮ್ಮ(85) ಗುರುವಾರ ಮಧ್ಯಾಹ್ನ ನಿಧನರಾದರು.

ಮೃತರು ಪುತ್ರ ತೆಂಗಿನಕಾಯಿ ವ್ಯಾಪಾರಿ ಡಿ.ಸೋಮಣ್ಣ ಹಾಗು ಅಪಾರ ಬಂಧುವರ್ಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯು ಶುಕ್ರವಾರ ಮಧ್ಯಾಹ್ನ 12 ಗಂಟೆಗೆ ಅವರ ಸ್ವಗ್ರಾಮ ಚಾಮರಾಜನಗರ ತಾಲೂಕಿನ ಕರಿಯನಕಟ್ಟೆ ಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

ದ್ವಿತೀಯ ಪಿಯುಸಿಯಲ್ಲಿ ಭರತ್ ಉತ್ತಮ ಸಾಧನೆ



ಕೊಳ್ಳೇಗಾಲ, ಏ.10– ಪಟ್ಟಣದ ವಾಸಿ ರೇಷ್ಮೆ ಇಲಾಖೆಯ ನೌಕರ ನಾಗೇಶ್ ಮತ್ತು ಪ್ರೇಮ ದಂಪತಿ ಪುತ್ರ ಭರತ್ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇಕಡ 91.8ರಷ್ಟು ಅಂಕಗಳಿಸುವ ಮೂಲಕ ಸಾಧನೆಗೈದಿದ್ದಾರೆ.

ಭರತ್ ವಾಣಿಜ್ಯ ವಿಭಾಗದಲ್ಲಿ 600 ಅಂಕಗಳಿಗೆ 551 ಅಂಕ ಗಳಿಸಿ ಸಾಧನೆಗೈದಿದ್ದು, ಕನ್ನಡ ವಿಷಯದಲ್ಲಿ 94, ಆಂಗ್ಲ ಭಾಷೆಯಲ್ಲಿ 93, ಎಕನಾಮಿಕ್ಸ್‌ನಲ್ಲಿ 85, ಬಿಜಿನೆಸ್ ಸ್ಟಡೀಸ್‌ನಲ್ಲಿ 91, ಅಕೌಂಟೆನ್ಸಿಯಲ್ಲಿ 91, ಗಣಕ ಶಾಸ್ತ್ರ ವಿಭಾಗದಲ್ಲಿ 97 ಅಂಕ ಪಡೆಯುವುದರೊಂದಿಗೆ ಗಮನಾರ್ಹ ಸಾಧನೆಗೈದಿದ್ದು ಈತ ಮಾನಸ ಶಿಕ್ಷಣ ಸಂಸ್ಥೆಯ ನಿಸರ್ಗ ಸ್ವತಂತ್ರ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿ. ಸಂಸ್ಥೆಯ ಕಾರ್ಯದರ್ಶಿ ಡಾ.ದತ್ತೇಶ್ ಕುಮಾರ್, ಅಧ್ಯಕ್ಷ ನಾಗರಾಜು ಪ್ರಾಂಶುಪಾಲ ಕೃಷ್ಣೆಗೌಡ, ಸಂಸ್ಥೆಯ ಸಂಯೋಜನಾಧಿಕಾರಿಗಳು ಅಭಿನಂದಿಸಿದ್ದಾರೆ.

ನಾಲ್ವರು ಬೇಟೆಗಾರರ ಬಂಧನ ನಾಲ್ಕು ನಾಡ ಬಂದೂಕು ವಶ



ಯಳಂದೂರು ತಾಲೂಕಿನ ಅಗರ–ಮಾಂಬಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯ ಬಿಆರ್‌ಟಿ ಹುಲಿರಕ್ಷಿತ ಅರಣ್ಯಪ್ರದೇಶದಲ್ಲಿ ಬೇಟೆಯಾಡಲು ಹೊಂಚು ಹಾಕುತ್ತಿದ್ದ ಕುಣಗಳ್ಳಿ ಗ್ರಾಮದ ನಾಲ್ವರನ್ನು ಪೊಲೀಸರು ವಶಕ್ಕೆ ಪಡೆದಿರುವುದು.

ಯಳಂದೂರು, ಏ.10– ಕುಣಗಳ್ಳಿ ಗ್ರಾಮದಲ್ಲಿ ಮಂಗಳವಾರ ಮತ್ತೆ 4 ಅಕ್ರಮ ನಾಡಬಂದೂಕುಗಳು ಪತ್ತೆಯಾಗಿದ್ದು ಈ ಸಂಬಂಧ ನಾಲ್ವರನ್ನು ಬಂಧಿಸಲಾಗಿದೆ.

ತಾಲೂಕಿನ ಅಗರ–ಮಾಂಬಳ್ಳಿ ಪೊಲೀಸ್ ಠಾಣೆಯ ವ್ಯಾಪ್ತಿಗೆ ಒಳಪಟ್ಟಿರುವ ಈ ಗ್ರಾಮದಲ್ಲಿ ಅಕ್ರಮವಾಗಿ ನಾಡಬಂದೂಕುಗಳನ್ನು ಹಿಡಿದು ಬಿಆರ್‌ಟಿ ಹುಲಿ ರಕ್ಷಿತ ಅರಣ್ಯ ಪ್ರದೇಶ ವ್ಯಾಪ್ತಿಯಲ್ಲಿ ಬೆಳಗಿನ ಜಾವ ಕಾಡುಪ್ರಾಣಿಗಳ ಬೇಟೆಯಾಡಲು ತೆರಳುತ್ತಿದ್ದ ವ್ಯಕ್ತಿಗಳ ಮೇಲೆ ದಾಳಿ ನಡೆಸಿದ ಪೊಲೀಸರು, ಗ್ರಾಮದ ಪ್ರದೀಪ್, ರಾಮು, ಕೃಷ್ಣ, ದೇವರಾಜು ಎಂಬವರ ಬಂಧಿಸಿ ಬಂದೂಕು ವಶಪಡಿಸಿಕೊಂಡಿದ್ದಾರೆ.

ಈ ಕಾರ್ಯಾಚರಣೆಯಲ್ಲಿ ಸಿಪಿಐ ಕೆ. ಶ್ರೀಕಾಂತ್, ಪಿಎಸ್‌ಐ ಎಸ್.ಕೆ. ಆಕಾಶ್ ಎಎಸ್‌ಐ ಚಿಕ್ಕಸ್ವಾಮಿ, ಮುಖ್ಯಪೇದೆ ಸುಕ್ರನಾಯಕ್, ಶಂಕರಮೂರ್ತಿ, ಶಿವಕುಮಾರ್, ಅಭಿಷೇಕ್, ಉಸ್ಮಾನ್, ಶಿವು ಹಾಗೂ ಶ್ರೀಶೈಲ ಭಾಗವಹಿಸಿದ್ದರು.

ಇಂದು ಬಸವ, ಭಗೀರಥ ಜಯಂತಿ ಪೂರ್ವಭಾವಿ ಸಭೆ

ಚಾಮರಾಜನಗರ: ಜಿಲ್ಲಾಡಳಿತದ ವತಿಯಿಂದ ಬಸವ ಹಾಗೂ ಭಗೀರಥ ಜಯಂತಿ ಆಚರಿಸುವ ಸಂಬಂಧ ಚರ್ಚಿಸುವ ಸಲುವಾಗಿ ಏ.11ರಂದು ಮಧ್ಯಾಹ್ನ 12.30 ಗಂಟೆಗೆ ಬಸವ ಜಯಂತಿ ಆಚರಣೆ ಪೂರ್ವಭಾವಿ ಸಭೆ ಹಾಗೂ ಮಧ್ಯಾಹ್ನ 1 ಗಂಟೆಗೆ ಶ್ರೀ ಭಗೀರಥ ಜಯಂತಿ ಆಚರಣೆ ಪೂರ್ವಭಾವಿ ಸಭೆಯು ನಗರದ ಡಿಸಿ ಕಚೇರಿ ಸಭಾಂಗಣದಲ್ಲಿ ನಡೆಯಲಿದೆ.

ಈ ಸಭೆಗೆ ಸಮಾಜದ ಅಧ್ಯಕ್ಷರು, ಪದಾಧಿಕಾರಿಗಳು, ಮುಖಂಡರು, ವಿವಿಧ ಸಂಘ ಸಂಸ್ಥೆಗಳ ಮುಖ್ಯಸ್ಥರು, ಸದಸ್ಯರು ಸೇರಿದಂತೆ ಸರ್ವರು ಆಗಮಿಸಿ ಸಲಹೆ ನೀಡುವಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ಕೋರಿದ್ದಾರೆ.

ಹರ್ಷಿತಾ ಪಟೇಲ್‌ಗೆ ಶೇ.94ರಷ್ಟು ಅಂಕ



ಚಾಮರಾಜನಗರ: ತಾಲೂಕಿನ ಹೆಗ್ಗೋಠಾರ ಗ್ರಾಮದ ಪ್ರಶಾಂತ್ ಪಟೇಲ್ ಮತ್ತು ಪುಷ್ಪಾವತಿ ಅವರ ಪುತ್ರಿ ಹರ್ಷಿತಾ ಪಟೇಲ್ ದ್ವಿತೀಯ ಪಿಯುನಲ್ಲಿ ಶೇ.94.67ರಷ್ಟು ಅಂಕ ಪಡೆದು ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ. ಈಕೆ ಮೈಸೂರಿನ ಜೆ.ಸಿ. ಕಾಲೇಜಿನ ವಿದ್ಯಾರ್ಥಿನಿ.

ಏ.18ಕ್ಕೆ ವೀರಚಂದ್ರಹಾಸ

ಹೊಂಬಾಳೆ ಫಿಲಂಸ್ ಸಹಕಾರ





ಸಂಗೀತ ಕ್ಷೇತ್ರದಲ್ಲಿ ತನ್ನದೇ ಛಾಪು ಮೂಡಿಸಿರುವ ರವಿ ಬಸ್ರೂರು ಅವರು ದಕ್ಷಿಣ ಕನ್ನಡದ ಸಂಸ್ಕೃತಿಯ ಪ್ರತೀಕವಾದ ಯಕ್ಷಗಾನ ಕಲೆಯ ಹಿರಿಮೆಯನ್ನು ಜಗತ್ತಿಗೆ ಹೇಳಲು ಹೊರಟಿದ್ದಾರೆ, ಯಕ್ಷಗಾನ ಪ್ರಸಂಗ ಆಧಾರಿತ ವೀರಚಂದ್ರಹಾಸ ಚಿತ್ರವನ್ನು ಅವರು ನಿರ್ದೇಶಿಸಿದ್ದು, ಆ ಚಿತ್ರ ಇದೇ ತಿಂಗಳ 18ರಂದು ಹೊಂಬಾಳೆ ಫಿಲಂಸ್ ಸಹಕಾರದೊಂದಿಗೆ ಬಿಡುಗಡೆಯಾಗುತ್ತಿದೆ.

ಎನ್.ಎಸ್. ರಾಜಕುಮಾರ್ ನಿರ್ಮಾಣದ ಈ ಚಿತ್ರದ ಮೂಲಕ ಚಿತ್ರರಂಗದ ಇತಿಹಾಸದಲ್ಲೇ ಮೊದಲಬಾರಿಗೆ, ಕರಾವಳಿಯ ಸಾಂಸ್ಕೃತಿಕ ಪರಂಪರೆಯ ಪ್ರತೀಕವಾದ ಯಕ್ಷಗಾನವನ್ನು ಬೆಳ್ಳಿಪರದೆಯ ಮೇಲೆ ತೋರಿಸುವ ಪ್ರಯತ್ನ ಇದಾಗಿದ್ದು, ಈ ಚಿತ್ರದ ಟ್ರೇಲರ್ ಬಿಡುಗಡೆ ಸಮಾರಂಭ ಕುಂದಾಪುರದ ಆನೆಗುಡ್ಡೆ ಶ್ರೀ ವಿನಾಯಕನ ಸನ್ನಿಧಿಯಲ್ಲಿ ನಡೆಯಿತು.

ವೇದಿಕೆಯಲ್ಲಿ ರವಿ ಬಸ್ರೂರ್ ಮಾತನಾಡುತ್ತಾ, ವೀರಚಂದ್ರಹಾಸ ನನ್ನ ಸುಮಾರು ವರ್ಷಗಳ ಕನಸು. ಈ ಚಿತ್ರ ಮಾಡಲು ಹೊರಟಾಗ ನಾಗರಾಜ್ ನೈಕಂಬ್ಳಿ, ನವೀನ್ ಶೆಟ್ಟಿ ನನ್ನ ಬೆನ್ನಿಗೆ ನಿಂತರು. ಚಂದ್ರಹಾಸನಾಗಿ ಶಿತಿಲ್ ಶೆಟ್ಟಿ, ದುಷ್ಟಬುದ್ಧಿಯಾಗಿ ಪ್ರಸನ್ನ ಶೆಟ್ಟಿಗಾರ್ ಅಲ್ಲದೆ ಪ್ರತಿಯೊಬ್ಬರೂ ಚಿತ್ರಕ್ಕಾಗಿ ನೀಡಿದ ಡೆಡಿಕೇಶನ್ ದೊಡ್ಡದು. ಎಲ್ಲಾ ಪಾತ್ರಗಳನ್ನು ನಿಜವಾದ ಯಕ್ಷಗಾನ ಕಲಾವಿದರೇ ಮಾಡಿದ್ದಾರೆ. ಹಿನ್ನೆಲೆ ಸಂಗೀತಕ್ಕಾಗಿ 600ರಿಂದ 700 ಮ್ಯೂಸಿಕ್ ಟ್ರ್ಯಾಕ್ಸ್ ಬಳಸಿದ್ದೇವೆ. 400ರಿಂದ 500 ಯಕ್ಷಗಾನ ಕಲಾವಿದರು ಈ ಚಿತ್ರದಲ್ಲಿ ಅಭಿನಯಿಸಿದ್ದಾರೆ. ಪ್ರಭು ಬಡಿಗೇರ್ ನಮ್ಮ ಕಲ್ಪನೆಗೂ ಮೀರಿ ಸೆಟ್ ವರ್ಕ್ ಮಾಡಿಕೊಟ್ಟರು. ವಿಶೇಷವಾಗಿ ಸಿನಿಮಾದಲ್ಲಿ ಸೆಟ್‌ಲೈಟ್ ಬಳಸದೆ ನೈಜ ಬೆಳಕಲ್ಲೇ ಶೂಟ್ ಮಾಡಿದ್ದೇವೆ. ಹೆಬ್ಬಾಳ ಬಳಿಯ ಗ್ರೌಂಡ್‌ನಲ್ಲಿ ಬೇರೆಬೇರೆ ಸೆಟ್ ಹಾಕಿ 35ರಿಂದ 40ದಿನ ಚಿತ್ರೀಕರಿಸಿದ್ದೇವೆ ಎಂದು ವಿವರಿಸಿದರು. ನಾಗರಾಜ್ ನೈಕಂಬ್ಳಿ ಮಾತನಾಡಿ, ಜೈಮಿನಿ ಭಾರತದ ಒಂದು ಭಾಗವಾದ ವೀರ ಚಂದ್ರಹಾಸನ ಕಥೆ ಈ ಚಿತ್ರದಲ್ಲಿದೆ ದಕ್ಷಿಣ ಕನ್ನಡ ಜಿಲ್ಲೆಯ ಗಂಡು ಕಲೆಯನ್ನು ರವಿ ಬಸ್ರೂರ್ ತೆರೆಮೇಲೆ ತೋರಿಸುತ್ತಿದ್ದಾರೆ. ಎಂದರು.

ಚಂದ್ರಹಾಸನ ಪಾತ್ರಧಾರಿ ಶಿಥಿಲ್ ಶೆಟ್ಟಿ ಮಾತನಾಡಿ, ಕೇವಲ ನಾಲ್ಕೈದು ಜಿಲ್ಲೆಗಳಿಗೆ ಮಾತ್ರ ಸೀಮಿತವಾಗಿದ್ದ ಯಕ್ಷಗಾನ ಕಲೆಯನ್ನು ರವಿ ಬಸ್ರೂರ್ ಈ ಸಿನಿಮಾ ಮೂಲಕ ವಿಶ್ವಮಾನ್ಯ ಮಾಡಿದ್ದಾರೆ. ಎಂದರು.

ಒಂದೇ ಸಿನಿಮಾಕ್ಕಾಗಿ ಇಷ್ಟೊಂದು ಹಾಡುಗಳನ್ನು ಯಾರೂ ಬರೆದಿದ್ದಿಲ್ಲ. ಇದನ್ನು ಗಿನ್ನಿಸ್ ದಾಖಲೆಗೆ ಕಳುಹಿಸುತ್ತಿದ್ದೇವೆ ಎಂದು ಹೇಳಿದ ರವಿ ಬಸ್ರೂರ್, ಶಿವರಾಜಕುಮಾರ್ ಅವರ ಪಾತ್ರದ ಬಗ್ಗೆ ಮಾತನಾಡುತ್ತ ವೀರಕಾಳಗದ ವಿಜೇತರಿಗೆ ಪ್ರಶಸ್ತಿ ನೀಡುವ ಪಾತ್ರ. ಅನಾರೋಗ್ಯವಿದ್ದರೂ, ಹೇಳಿದ ಸಮಯಕ್ಕೆ ಸರಿಯಾಗಿ ಬಂದು ಮುಗಿಸಿಕೊಟ್ಟರು. ಹೆಬ್ಬಾಳದ ಸೆಟ್‌ನಲ್ಲಿ ದಿನವಿಡೀ ನಮ್ಮ ಜತೆಗಿದ್ದರು. ಚಂದನ್ ಶೆಟ್ಟಿ, ಗರುಡರಾಮ್ ಅವರ ಪಾತ್ರಗಳು ಪ್ರಮುಖ ಘಟ್ಟದಲ್ಲಿ ಬರುತ್ತವೆ ಎಂದರು.

ಬಂಡೆ ಸಾಹೇಬ್ ಟೀಸರ್ ಶರಣ್ ಬಿಡುಗಡೆ



ಕೆಲ ವರ್ಷಗಳ ಹಿಂದೆ ಕಲ್ಬುರ್ಗಿಯಲ್ಲಿ ಮುನ್ನಾ ಎಂಬ ರೌಡಿಶೀಟರ್ ಅನ್ನು ಸೆರೆಹಿಡಿಯುವಾಗ ಶೂಟೌಟ್‌ಗೆ ಬಲಿಯಾದ ದಕ್ಷ ಪೊಲೀಸ್ ಅಧಿಕಾರಿ ಮಲ್ಲಿಕಾರ್ಜುನ ಬಂಡೆ ಅವರ ಜೀವನಾಧಾರಿತ ಚಿತ್ರವೊಂದು ಬಿಡುಗಡೆಗೆ ಸಿದ್ಧವಾಗಿದೆ, ಯುವನಟ ಸಂತೋಷ್‌ರಾಮ್, ಮಲ್ಲಿಕಾರ್ಜುನ ಬಂಡೆ ಅವರ ಪಾತ್ರ ನಿರ್ವಹಿಸಿರುವ ಈ ಚಿತ್ರಕ್ಕೆ ಚಿನ್ಮಯ್‌ರಾಮ್ ಆಕ್ಷನ್ ಕಟ್ ಹೇಳಿದ್ದಾರೆ. ಇತ್ತೀಚೆಗೆ ಚಿತ್ರದ ಟೀಸರನ್ನು ನಟ ಶರಣ್ ಬಿಡುಗಡೆಗೊಳಿಸಿ ಇದರಲ್ಲಿ ಏನೋ ಇದೆ ಅಂದುಕೊಳ್ಳುವಷ್ಟರಲ್ಲೇ ಟೀಸರ್ ಮುಗಿದುಹೋಗುತ್ತದೆ. ಈ ವಿಷಯದಲ್ಲಿ ನಿಜಕ್ಕೂ ನಿರ್ದೇಶಕರನ್ನು ಶ್ಲಾಘಿಸಬೇಕು. ತೆರೆಮೇಲೆ ಹುತಾತ್ಮ ಪೊಲೀಸ್ ಅಧಿಕಾರಿ ಮಲ್ಲಿಕಾರ್ಜುನ ಬಂಡೆಯವರ ಜೀವನದ ಕಥೆಯನ್ನು ನೋಡಲು ನಾನು ಕೂಡ ಕಾತುರನಾಗಿದ್ದೇನೆ ಎಂದರು. ಮುಖ್ಯ ಅತಿಥಿಯಾಗಿದ್ದ ಶಾಸಕ ರಾಜುಗೌಡ ಮಾತನಾಡುತ್ತಾ, ನಿರ್ಮಾಪಕರು ನನ್ನ ಸಹೋದರನಿದ್ದಂತೆ. ಅವರು ಸಿನಿಮಾ ಮಾಡುತ್ತೇನೆಂದಾಗ ಬೇಡ ಅಂದಿದ್ದೆ. ಈಗ ಚಿತ್ರದ ಟೀಸರ್ ನೋಡಿ ಒಳ್ಳೆಯ ನಿರ್ಧಾರ ಮಾಡಿದ್ದಾರೆ ಅನಿಸಿತು. ನಾವೆಲ್ಲ ಬಂಡೆ ಅವರನ್ನು ಹತ್ತಿರದಿಂದ ನೋಡಿದ್ದೇವೆ. ತೆರೆ ಮೇಲೆ ಸಂತೋಷ್‌ರಾಮ್ ಅಭಿನಯ ನೋಡಿದಾಗ ಅವರನ್ನೇ ನೋಡಿದಂತಾಯಿತು, ದಕ್ಷ ಪೊಲೀಸ್ ಅಧಿಕಾರಿಯೊಬ್ಬರ ಕಥೆಯಿರುವ ಈ ಚಿತ್ರವನ್ನು ಜನ ಹೆಚ್ಚಿನ ಸಂಖ್ಯೆಯಲ್ಲಿ ನೋಡಬೇಕು ಎಂದರು.


ನಿರ್ದೇಶಕ ಚಿನ್ಮಯ್‌ರಾಮ್ ಮಾತನಾಡಿ, ಆರಂಭದಲ್ಲಿ ನಿರ್ಮಾಪಕರು ಈ ಕಥೆಯನ್ನು ಹೇಳಿದಾಗ ನೈಜ ಘಟನೆ ಇಟ್ಟುಕೊಂಡು ಸಿನಿಮಾ ಮಾಡೋದು ಸುಲಭವಲ್ಲ ಅನಿಸಿತ್ತು. ಬಂಡೆ ಅವರ ಕಥೆ ಕೇಳ್ತಾ ಹೋದರೆ ಮೈ ರೋಮಾಂಚನವಾಗುತ್ತೆ. ಚಿತ್ರವನ್ನು ಸದ್ಯದಲ್ಲೇ ತೆರೆಗೆ ತರಲು ಸಿದ್ಧತೆ ಮಾಡಿಕೊಂಡಿದ್ದೇವೆ ಎಂದರು,

ನಾಯಕ ಸಂತೋಷ್‌ರಾಮ್ ಮಾತನಾಡುತ್ತಾ, ನಾನು ಹಾಗೂ ವೀರಣ್ಣ ಕೊರಳ್ಳಿ ಗುಲ್ಬರ್ಗದಲ್ಲೇ ಎರಡು ತಿಂಗಳು ಇದ್ದು, ಮಲ್ಲಿಕಾರ್ಜುನ ಬಂಡೆ ಅವರ ಒಡನಾಡಿಗಳನ್ನು ಸಂಪರ್ಕಿಸಿ ಮಾಹಿತಿ ಕಲೆಹಾಕಿ ಚಿತ್ರಕಥೆ ಮಾಡಿಕೊಂಡೆವು, ಚಿತ್ರದಲ್ಲಿ ನಾನು ಮಲ್ಲಿಕಾರ್ಜುನ ಬಂಡೆ ಅವರ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ ಎಂದು ಹೇಳಿದರು. ನಾಯಕಿ ಕಾವ್ಯ ಭಾರದ್ವಾಜ್, ಛಾಯಾಗ್ರಾಹಕ ಮುಂಜಾನೆ ಮಂಜು, ಸಂಗೀತ ನಿರ್ದೇಶಕ ಎಂ.ಎಸ್.ತ್ಯಾಗರಾಜ್ ಹಾಗೂ ಹಿನ್ನೆಲೆ ಸಂಗೀತ ನೀಡಿರುವ ಅಲೆಕ್ಸಾ ಮುಂತಾದವರು ಚಿತ್ರದ ಕುರಿತಂತೆ ಮಾತನಾಡಿದರು. ಮಲ್ಲಿಗೆ ಸಿನಿ ಕುಬೈನ್ಸ್ ಲಾಂಛನದಲ್ಲಿ ಗೋಪಣ್ಣ ದೊಡ್ಮನಿ, ಕಮಲ ದೊಡ್ಮನಿ ಹಾಗೂ ಮಾಲ ವಿ.ಕೊರಳ್ಳಿ ಅವರು ನಿರ್ಮಿಸಿರುವ ಈ ಚಿತ್ರಕ್ಕೆ ಪ್ರಮುಖ ಪಾತ್ರದಲ್ಲಿ ನಟಿಸಿರುವ ವೀರಣ್ಣ ಕೊರಳ್ಳಿ ಅವರೇ ಕಥೆ, ಚಿತ್ರಕಥೆ ಹಾಗೂ ಸಂಭಾಷಣೆ ಬರೆದಿದ್ದಾರೆ.

ಸಿನಿಪದಬಂಧ-572



ಉಮ್ಮತ್ತೂರು ಇಂದುಶೇಖರ್
ಮೊ.9880820462



ಹೆಸರು ____________

ವಿಳಾಸ ____________

ದೂರವಾಣಿ ಸಂಖ್ಯೆ ____________

ಎಡದಿಂದ ಬಲಕ್ಕೆ

1. ವಿಜಯಕಾಶಿಯ ಬೆಕ್ಕು 3
2. ರಘುವೀರ್ – ಮುರಳಿ ಜೋಡಿಯ ಚಿತ್ರ 6
5. _ _ ಮೆನನ್ 2
6. ರಾಮ್‌ಕುಮಾರ್‌ಗೆ ಆದ ವ್ರಣ 2
7. ಶಿವರಾಜ್ ಕುಮಾರ್ ಅಭಿನಯಕ್ಕೆ ಟಿ. ಎಸ್. ನಾಗಾಭರಣ ನಿರ್ದೇಶಕ 5
8. ಪ್ರಜ್ವಲ್ ದೇವರಾಜ್ ಅಭಿನಯದ ಸ್ನೇಹಿತ 3
9. ಕಾಮನಬಿಲ್ಲು ಚಿತ್ರದ ನಾಯಕಿ ಇಲ್ಲಿ ತಿರುಗಿದ್ದಾಳೆ 3
11. ಬಿ. ಸಿ. ಪಾಟೀಲ್ ಹಾಡಿದ ಲಾಲಿ 3
12. 'ಏಕೇ _ _ _ _ ವು ಹೇಳು ಕರವನು ಹಿಡಿಯದೆ ಸರಸಕೆ ಕರೆಯದೆ.....', 4
14. ವಿಷ್ಣುವರ್ಧನ್– ರೂಪಿಣಿ ಅಭಿನಯದ ಚಿತ್ರ 7
15. ಗಿರೀಶ್ ಕಾಸರವಳ್ಳಿಯ ಗೃಹ ಇಲ್ಲಿ ತಿರುಗಿದೆ 2
16. ಬಗ್ಗಡದಲ್ಲಿ ಅರಳಿದ ಪುಷ್ಪ 3
17. ರಾಜ್, ಆಳ್ವಾ ಹೆಸರಿನ ಪೂರ್ವ 3
18. ಕಾಲಿನ ಗೆಜ್ಜೆಗೆ ಹೀಗೊಂದು ಪದ 3

ಮೇಲಿನಿಂದ ಕೆಳಕ್ಕೆ

1. ಹೆಂಡತಿಯ ಅಪ್ಪ ಲೋಕೇಶ್‌ಗೆ ಮಗಳ ಗಂಡ ಶಿವಣ್ಣ ಸರಿಯಾದವನು 9
2. ಮಗಳ ಗಂಡನೊಂದಿಗೆ ಸ್ನೇಹಿತನೂ ಇದ್ದಾನೆ 6
3. ಶಿವಣ್ಣ – ಶಿಲ್ಪಾ ಅಭಿನಯದ ಚಿತ್ರವಿದು 6
4. ಸುರೇಶ್ ಹೆಬ್ಳಿಕರ್‌ನ ಒಳಮನಸ್ಸು 4
7. '_ _ _ _ _ _ _ _ ನಿನ್ನ ನಾಮವು ಶಾಂತಿಧಾಮವು ಸೌಖ್ಯದಾರಾಮು....', 8
10. ನೆನಪಿರಲಿ ಪ್ರೇಮ್ – ಮಲ್ಲಿಕಾ ಕಪೂರ್ ಅಭಿನಯದ ಚಿತ್ರ 7
13. ಕಾಕನ ಕೋಟೆ ಚಿತ್ರದ ಹಾಡೊಂದರ ಆರಂಭ 5

ಸಿನಿ ಪದಬಂಧ 571ರ ಉತ್ತರ

ನಾ	ಗಿ	ಣಿ		ಮಾ	ಗಿ	ಯ	ಕ	ನ	ಸು	
ವಿ				ವ				ಮ್ಮೊ		ಪ್ರೇ
ಬ್ಬ	ಹ		ಧ	ನ		ಅ	ಮ	ರ	ಪ್ರೇ	ಮ
ರು				ಮ	ಲ್ಲ	ಮ್ಮ		ಬ		ಬ
ನ	ದ	ಮ		ಗ		ನಿ		ಸ	ಮ	ರ
ಮ		ದ		ಳು		ನ್ನ		ವಿ		ಹ
ಗಿ	ರಿ	ಕ	ನ್ಯೆ			ತೋ			ಹೊ	
ಬ್ಬ		ರಿ		ಕೆ	ರ	ಳಿ	ದ	ಕೇ	ಸ	ರಿ
ರು		ನಾ	ರಿ			ನ			ಜೀ	
		ಯ		ನ್ಯೂ	ಡೆ	ಲ್ಲಿ		ಭಾ	ವ	ನಾ
	ಕಿಂ	ಕ	ರ						ನ	

ವಿಜೇತರು: ವಸಂತ್ ಕುಮಾರ್.ಪಿ, #2051, ಸಿಹೆಚ್ 22, 6ನೇ ತಿರುವು, ಅಶೋಕಪುರಂ, ಮೈಸೂರು-08

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

ಜಾಂಟಿ ಸನ್ ಆಫ್ ಜಯರಾಜ್

ತಾಯಿ ಹಾಡಿಗೆ ಯೋಗರಾಜ ಭಟ್ ಚಾಲನೆ





80-90ರ ದಶಕದಲ್ಲಿ ಭೂಗತ ಲೋಕವನ್ನಾಳಿದ ಡಾನ್ ಜಯರಾಜ್ ಅವರ ನಂತರ ಬೆಂಗಳೂರು ನಗರ ಹೇಗಿತ್ತು? ಭೂಗತ ಚಟುವಟಿಕೆಗಳು ಹೇಗೆಲ್ಲಾ ನಡೆಯುತ್ತಿದ್ದವು ಎಂಬುದನ್ನು ಜಾಂಟಿ ಸನ್ ಆಫ್ ಜಯರಾಜ್ ಚಿತ್ರದ ಮೂಲಕ ನಿರ್ದೇಶಕ ಆನಂದ ರಾಜ್ ಅವರು ಹೇಳಹೊರಟಿದ್ದಾರೆ. ಅವರೇ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿರುವ ಈ ಚಿತ್ರದಲ್ಲಿ ಜಯರಾಜ್ ಅವರ ಪುತ್ರ ಅಜಿತ್ ಜಯರಾಜ್ ಅವರು ತಂದೆಯ ಪಾತ್ರವನ್ನೇ ನಿರ್ವಹಿಸಿದ್ದಾರೆ. ಇತ್ತೀಚೆಗೆ ಈ ಚಿತ್ರದಲ್ಲಿ ಬರುವ ತಾಯಿ ಸೆಂಟಿಮೆಂಟ್ ಹಾಡನ್ನು ನಿರ್ದೇಶಕ ಯೋಗರಾಜ ಭಟ್ಟರು ಬಿಡುಗಡೆ ಮಾಡಿದರು, 'ಲೋಕದ ಮೂಲ ಬ್ರಹ್ಮನಂತೆ, ಪ್ರೀತಿಯ ಮೂಲ ಅಮ್ಮನಂತೆ, ಅಮ್ಮ ಕ್ಷಮಿಸು ಅಮ್ಮ' ಎನ್ನುವ ಸಾಹಿತ್ಯ ಇರುವ ಭಾವುಕ ಗೀತೆಯನ್ನು ಯೋಗರಾಜ ಭಟ್ ಮತ್ತು ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮಿ ಅವರು ಅನಾವರಣಗೊಳಿಸಿದರು. ಸುಗೂರು ಕುಮಾರ್ ಅವರು ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ.

ನಿರ್ದೇಶಕ ಆನಂದರಾಜ್ ಮಾತನಾಡುತ್ತಾ, ತಾಯಿಗೀತೆಗೆ ಪಲ್ಲವಿ ಬರೆದು ರಾಗ ಸಂಯೋಜಿಸಲು ಸಂಗೀತ ನಿರ್ದೇಶಕರಿಗೆ ಕಳುಹಿಸಿದೆ, ನಂತರ ಅವರು ಅದ್ಭುತವಾದ ಟ್ಯೂನ್ ಮಾಡಿಕೊಟ್ಟರು. ಆಗಲೇ ನಾನು ಚಿತ್ರದ ಜತೆಗೆ ಈ ಹಾಡು ಕೂಡ ಖಂಡಿತ ಹಿಟ್ ಆಗುತ್ತೆ ಅಂತ ಹೇಳಿದೆ ನಮ್ಮನ್ನು ಹೆತ್ತು, ಹೊತ್ತು ಸಾಕಿ ಬೆಳೆಸಿದ ಅಮ್ಮನ ಬಳಿ ನಾವೆಂದೂ ಅಮ್ಮ ನನ್ನನ್ನು ಕ್ಷಮಿಸು ಅಂತ ಸಾರಿ ಕೇಳೋದಿಲ್ಲ. ಇದು ಚಿತ್ರದ ಕ್ಲೈಮಾಕ್ಸ್‌ನಲ್ಲಿ ಬರುವ ಹಾಡು. ನಾಯಕ ತನ್ನ ತಾಯಿಯ ಆಸೆಯಂತೆ ಸಮಾಜದಲ್ಲಿ ಒಳ್ಳೇ ವ್ಯಕ್ತಿಯಾಗಿ ಬದುಕದೆ, ಕೆಟ್ಟಹಾದಿ ತುಳಿಯುತ್ತಾನೆ. ಕೊನೆಗೆ ತನ್ನಮ್ಮನೇ ತನಗೆ ಸರ್ವಸ್ವ ಎಂಬ ಅರಿವಾಗುತ್ತದೆ, ಆ ಸಂದರ್ಭದಲ್ಲಿ ಈ ಹಾಡು ಮೂಡಿಬರುತ್ತದೆ. ಜೋಗಿ ಪ್ರೇಮ್ ಅವರ ಒಳಗೊಬ್ಬ ತಾಯಿಯಿದ್ದಾಳೆ. ಅವರು ಹಾಡಿದ ಅಮ್ಮನ ಎಲ್ಲಾ ಹಾಡುಗಳು ಇಂದಿಗೂ ಎವರ್‌ಗ್ರೀನ್ ಆಗಿವೆ ಎಂದು ಹೇಳಿದರು. ನಾವು ಏನೇ ತಪ್ಪು ಮಾಡಿದರೂ ಕ್ಷಮಿಸುವಂತಹ ಗುಣ ಇರೋದು ತಾಯಿಗೆ ಮಾತ್ರ ಇಂತಹ ವಿಷಯ ಇಟ್ಟುಕೊಂಡು ಆನಂದ ರಾಜ್ ಅವರು ಸಾಹಿತ್ಯ ಬರೆದಿರುವ ಈ ಗೀತೆಗೆ ಜೋಗಿ ಪ್ರೇಮ್ ದನಿಯಾಗಿದ್ದಾರೆ.

ನನ್ನ ತಂದೆಯ ಪಾತ್ರವನ್ನೇ ಮಾಡುವಾಗ ನಾನು ತುಂಬಾ ನರ್ವಸ್ ಆಗಿದ್ದೆ. ನಿರ್ದೇಶಕರು ಕಥೆ ಹೇಳಿದಾಗ ಒಪ್ಪಿದ್ದರೂ, ಕ್ಯಾಮೆರಾ ಮುಂದೆ ನಿಂತಾಗ ನಡುಕ ಬಂತು. ಅಂಥ ಪವರ್‌ಫುಲ್ ಪಾತ್ರ ಮಾಡುವುದು ಆರಂಭದಲ್ಲಿ ಸ್ವಲ್ಪ ಕಷ್ಟವಾಯ್ತು. ನನ್ನ ಪಾತ್ರಕ್ಕೆ ಎರಡು ಶೇಡ್‌ಗಳಿವೆ ಎಂದು ನಾಯಕ ಅಜಿತ್ ಜಯರಾಜ್ ಅವರು ಹೇಳಿದರು. ಉಳಿದಂತೆ ನಾಯಕಿ ನಿವಿಷ್ಕಾ ಪಾಟೀಲ್, ಪೆಟ್ರೋಲ್ ಪ್ರಸನ್ನ, ಸಂಗೀತ ನಿರ್ದೇಶಕ ವಿಜೇತ್ ಮಂಜೇಹ ಇವರೆಲ್ಲ ಚಿತ್ರದ ಕುರಿತಂತೆ ತಮ್ಮ ಅನುಭವಗಳನ್ನು ಹಂಚಿಕೊಂಡರು.

'ರಿಕ್ಷಾ ಚಾಲಕ' ಆಟೋಡ್ರೈವರ್ ನೋವು ನಲಿವಿನ ಕಥೆ



ಗಾಂಧಿನಗರದಲ್ಲಿ ಹೊಸಬರ, ವಿಭಿನ್ನ ಕಥೆಯನ್ನೊತ್ತು ಬರುವ ಚಿತ್ರಗಳು ಗಮನ ಸೆಳೆಯುತ್ತಿವೆ, ಇದೀಗ ಅಂಥದ್ದೇ ಒಂದು ಸಿನಿಮಾ ಬಿಡುಗಡೆಗೆ ಸಿದ್ಧವಾಗಿದೆ. ಆ ಚಿತ್ರದ ಹೆಸರು ರಿಕ್ಷಾ ಚಾಲಕ. ಚಿರಂತ್ ಎಂಬ ಯುವನಟ ಈ ಸಿನಿಮಾ ಮೂಲಕ ನಾಯಕನಾಗಿ ಸ್ಯಾಂಡಲ್‌ವುಡ್‌ಗೆ ಎಂಟ್ರಿಯಾಗಿದ್ದಾರೆ. ಆಯುಷ್ ಶಶಿಕುಮಾರ್ ಅವರ ನಿರ್ದೇಶನ ಈ ಚಿತ್ರಕ್ಕಿದೆ. ಇವರಿಬ್ಬರ ತಾಯಿ ಶರಾವತಿ ಶಶಿಕುಮಾರ್ ಅವರು ಈ ಚಿತ್ರವನ್ನು ನಿರ್ಮಿಸಿದ್ದಾರೆ. ಇತ್ತೀಚೆಗೆ ಈ ಚಿತ್ರದ ಆಡಿಯೋ ಟೀಸರ್ ಬಿಡುಗಡೆ ಕಾರ್ಯಕ್ರಮ ನಡೆಯಿತು.

ನಾಯಕ ಚಿರಂತ್ ಮಾತನಾಡುತ್ತಾ, 2020-22ರ ಸಮಯದಲ್ಲಿ ಲಾಕ್‌ಡೌನ್ ಆದಾಗ ಆಟೋ ಡ್ರೈವರ್‌ಗಳು ಎದುರಿಸಿದ ಸಂಕಷ್ಟಗಳು, ಅನುಭವಿಸಿದ ನೋವುಗಳನ್ನು ಕಣ್ಣಾರೆ ಕಂಡಿದ್ದ ಆಯುಷ್, ಅದೆಲ್ಲವನ್ನೂ ಈಗ ಸಿನಿಮಾ ರೂಪದಲ್ಲಿ ತೆರೆಮೇಲೆ ಮೂಡಿಸಿದ್ದಾರೆ, ಒಬ್ಬ ಒಳ್ಳೇ ಆಟೋ ಡ್ರೈವರ್ ಸಮಾಜದಲ್ಲಿ ಏನೆಲ್ಲ ಕಷ್ಟಗಳನ್ನು ಎದುರಿಸಬೇಕಾಗುತ್ತೆ, ಆಟೋ ಡ್ರೈವರ್‌ಗಳಿಗಿರುವ ಕಷ್ಟವೇನು ಅಂತ ಈ ಸಿನಿಮಾದಲ್ಲಿ ತೋರಿಸಿದ್ದೇವೆ. ಮೈಸೂರು, ವರುಣ, ಕೆಆರ್.ನಗರ, ಸಾಲಿಗ್ರಾಮ ಹಾಗೂ ಮುರುಡೇಶ್ವರದಲ್ಲಿ ಚಿತ್ರೀಕರಣ ನಡೆಸಿದ್ದೇವೆ. ನಾಯಕಿಯಾಗಿ ನಂದಿನಿ ನಟಿಸಿದ್ದಾರೆ ಎಂದರು.

ನಿರ್ದೇಶಕ ಆಯುಷ್ ಶಶಿಕುಮಾರ್ ಮಾತನಾಡಿ, ಚಿಕ್ಕ ವಯಸ್ಸಿನಿಂದಲೇ ನನಗೆ ಸಿನಿಮಾ ಮೇಲೆ ಆಸಕ್ತಿ ಬೆಳೆಯುತ್ತಾ ಬಂತು. ಇದೊಂದು ಆಕ್ಷನ್, ಫ್ಯಾಮಿಲಿ ಡ್ರಾಮಾ ಕಥೆಯಾಗಿದ್ದು, ಚಿತ್ರದಲ್ಲಿ ಐದು ಹಾಡುಗಳಿವೆ. ಈಗಾಗಲೇ ಸೆನ್ಸಾರ್‌ನಿಂದ ಯು/ಎ ಪ್ರಮಾಣಪತ್ರ ಸಿಕ್ಕಿದೆ. ಶೀಘ್ರದಲ್ಲಿಯೇ ಚಿತ್ರವನ್ನು ರಿಲೀಸ್ ಮಾಡುತ್ತೇವೆ ಎಂದು ಹೇಳಿದರು,

ನೃತ್ಯ ನಿರ್ದೇಶಕ ಶಶಿ ಆರಕ್ಷಕ್ ತಮ್ಮ ಮಕ್ಕಳಿಗಾಗಿ ಈ ಚಿತ್ರವನ್ನು ನಿರ್ಮಿಸುತ್ತಿದ್ದಾರೆ. ಅವರೇ ಕಥೆ, ಸಾಹಿತ್ಯ ಬರೆದಿದ್ದಾರೆ, ನಿರ್ದೇಶಕ ಆಯುಷ್ ನನ್ನ ದೊಡ್ಡ ಮಗ, ಚಿರಂತ್ ನನ್ನ ಚಿಕ್ಕ ಮಗ, ಹೊಸಬರಿಗೆ ಸಿನಿಮಾ ಮಾಡಲು ಯಾರೂ ಮುಂದೆ ಬರಲ್ಲ ಹಾಗಾಗಿ ನಾವೇ ಸೇರಿ ಈ ಚಿತ್ರ ನಿರ್ಮಿಸಿದ್ದೇವೆ. ನಮ್ಮ ಮಕ್ಕಳಿಗೆ ಮೊದಲಿನಿಂದಲೂ ಸಿನಿಮಾದ ಮೇಲೆ ಆಸಕ್ತಿ ಇತ್ತು. ಅದಕ್ಕೆ ಆಕ್ಟಿಂಗ್ ಕ್ಲಾಸ್ ಸೇರಿಸಿ, ಒಂದಷ್ಟು ಕಲಿಸಿದ್ದೆವಿ. ನಾನು ನೃತ್ಯಪಟುವಾಗಿದ್ದರಿಂದ ಸಿನಿಮಾ ಬಗ್ಗೆ ಸ್ವಲ್ಪ ಗೊತ್ತಿತ್ತು ಎಂದು ಹೇಳಿದರು.

ನಿರ್ಮಾಪಕಿ ಶರಾವತಿ ಮಾತನಾಡಿ, ನಾಯಕ, ನಿರ್ದೇಶಕ ಇಬ್ಬರೂ ನನ್ನ ಮಕ್ಕಳೆ. ಮಕ್ಕಳ ಕನಸನ್ನು ನನಸು ಮಾಡಲು ನಾವು ಚಿತ್ರಕ್ಕೆ ಬಂಡವಾಳ ಹೂಡಿದ್ದೇವೆ, ಈ ಚಿತ್ರದ ಕಥೆಯೇ ಇಂಟ್ರೆಸ್ಟಿಂಗ್ ಆಗಿದೆ ಎಂದು ಹೇಳಿದರು. ಧರ್ಮಾಚಾರಿ ಅವರ ಸಹ ನಿರ್ಮಾಣ, ವೇದಾಂತ್ ಅತಿಶಯ್ ಜೈನ್ ಅವರ ಸಂಗೀತ, ಆನಂದ್ ಅವರ ಛಾಯಾಗ್ರಹಣ ಈ ಚಿತ್ರಕ್ಕಿದೆ.

ಖದೀಮ ಟ್ರೇಲರ್ ಹಾಡು ಬಿಡುಗಡೆ



ಕಳ್ಳನೊಬ್ಬ ಲವ್‌ನಲ್ಲಿ ಬಿದ್ದಾಗ ಏನೇನೆಲ್ಲ ಆಯಿತು ಎಂಬುದನ್ನು ಕುತೂಹಲಕರ ಕಥಾನಕದೊಂದಿಗೆ ನಿರ್ದೇಶಕ ಸಾಯಿಪ್ರದೀಪ್ ಅವರು ಖದೀಮ ಎಂಬ ಚಿತ್ರದ ಮೂಲಕ ಹೇಳಹೊರಟಿದ್ದಾರೆ. ಇತ್ತೀಚೆಗೆ ಈ ಚಿತ್ರದ ಟ್ರೇಲರ್, ಆಡಿಯೋ ಬಿಡುಗಡೆ ಕಾರ್ಯಕ್ರಮ ನಡೆಯಿತು. ಟಿ.ಸಿವಕುಮಾರನ್ ಹಾಗೂ ಯಶಸ್ವಿನಿ. ಆರ್. ಅವರ ನಿರ್ಮಾಣದ ಈ ಚಿತ್ರಕ್ಕೆ ಸಾಯಿಪ್ರದೀಪ್ ಅವರೇ ಕಥೆ, ಚಿತ್ರಕಥೆ ಬರೆದಿದ್ದಾರೆ. ಯುವನಟ ಚಂದನ್, ಅನುಷಾ ಕೃಷ್ಣ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ.

ಈ ಸಂದರ್ಭದಲ್ಲಿ ನಿರ್ದೇಶಕ ಸಾಯಿ ಪ್ರದೀಪ್ ಮಾತನಾಡುತ್ತಾ, ಸಣ್ಣಪುಟ್ಟ ಕಳ್ಳತನ ಮಾಡಿಕೊಂಡಿದ್ದ ಯುವಕನೊಬ್ಬನ ಜೀವನದಲ್ಲಿ ಎಂಟ್ರಿ ಕೊಟ್ಟ ಸುಂದರ ಯುವತಿಯೊಬ್ಬಳು ಆತನ ಜೀವನದಲ್ಲಿ ಆಗೋ ಬದಲಾವಣೆಗಳಿಗೆ ಹೇಗೆ ಕಾರಣಳಾದಳು? ಮುಂದೆ ಆತನಿಂದ ಸಮಾಜಕ್ಕೆ ಏನೆಲ್ಲಾ ಒಳ್ಳೆಯದಾಗುತ್ತದೆ ಎಂಬುದನ್ನು ಖದೀಮ ಚಿತ್ರದ ಮೂಲಕ ಹೇಳಹೊರಟಿದ್ದೇವೆ. ಇಡೀ ಚಿತ್ರದ ಕಥೆ ನಡೆಯುವುದು ಸಿಟಿ ಮಾರ್ಕೆಟ್‌ನಲ್ಲೇ. ಇಲ್ಲಿವರೆಗೂ ಮಚ್ಚು, ಲಾಂಗುಗಳೇ ಝಳಪಿಸುತ್ತಿದ್ದ ಸಿಟಿ ಮಾರ್ಕೆಟ್‌ನಲ್ಲಿ ನಾವು ಪ್ರೀತಿಯನ್ನು ಅರಳಿಸುವ ಪ್ರಯತ್ನ ಮಾಡಿದ್ದೇವೆ. ಸಿಟಿ ಮಾರ್ಕೆಟ್‌ನ ಜನಸಂದಣಿಯ ನಡುವೆಯೇ 60ರಷ್ಟು ಭಾಗದ ಚಿತ್ರೀಕರಣ ಮಾಡಿದ್ದು ಸವಾಲಿನ ಕೆಲಸವಾಗಿತ್ತು ಎಂದು ಹೇಳಿದರು.

ನಾಯಕ ಚಂದನ್ ಮಾತನಾಡುತ್ತಾ, ಜಿಮ್ ತರಬೇತುದಾರನಾಗಿದ್ದ ನನಗೆ ಗೆಳೆಯರು ಹೀರೋ ಆಗು ಅಂತ ಹುರಿದುಂಬಿಸುತ್ತಿದ್ದರು. ನಂತರ ನಿರ್ಮಾಪಕರನ್ನು ಹುಡುಕಿದ್ದೆ ಮೊದಲ ಸಾಧನೆ ಎನ್ನಬಹುದು. ನಟನೆಯ ಅನುಭವ ಇಲ್ಲದಿದ್ದರೂ, ನಿರ್ದೇಶಕರು ಹೇಳಿಕೊಟ್ಟಂತೆ ನಟಿಸಿದ್ದೇನೆ. ಒಂದು ರೀತಿಯಲ್ಲಿ ಅವರೇ ನನಗೆ ಗುರುಗಳು ಎಂದು ಹೇಳಿದರು.

ರಂಗಭೂಮಿ ನಂಟಿರುವ ನಾಯಕಿ ಅನುಷಾ ಕೃಷ್ಣ ಮಾತನಾಡುತ್ತಾ, ಚಿತ್ರದಲ್ಲೂ ಸಹ ನನಗೆ ರಂಗಭೂಮಿ ಕಲಾವಿದೆಯ ಪಾತ್ರವೇ ಸಿಕ್ಕಿದ್ದು ಪಾತ್ರ ನಿರ್ವಹಿಸೋಕೆ ಸುಲಭವಾಯಿತು ಎಂದು ಹೇಳಿದರು, ಎಂಎನ್‌ಸಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೆ. ಚಂದನ್ ನಮ್ಮ ಸ್ನೇಹಿತರು, ಒಳ್ಳೇ ಕಥೆ ನನ್ನನ್ನು ನಿರ್ಮಾಪಕಿಯಾಗಲು ಪ್ರೇರೇಪಿಸಿತು ಎಂದು ಸಹ ನಿರ್ಮಾಪಕಿ ಯಶಸ್ವಿನಿ. ಆರ್. ಅವರು ಹೇಳಿದರು. ಸಚಿತ್ ಫಿಲಂಸ್ ಮೂಲಕ ವೆಂಕಟ್‌ಗೌಡ ಅವರು ಈ ಚಿತ್ರವನ್ನು ಇದೇ ತಿಂಗಳಲ್ಲಿ ಬಿಡುಗಡೆ ಮಾಡುವುದಾಗಿ ಮಾಹಿತಿ ನೀಡಿದರು.

ಶಶಾಂಕ್ ಶೇಷಗಿರಿ ಅವರ ಸಂಗೀತ ಸಂಯೋಜನೆ, ನಾಗಾರ್ಜುನ. ಆರ್.ಡಿ, ಅವರ ಛಾಯಾಗ್ರಹಣ ಈ ಚಿತ್ರಕ್ಕಿದ್ದು ಶೋಭರಾಜ್, ಗಿರಿಜಾ ಲೋಕೇಶ್, ಮುಖ್ಯಮಂತ್ರಿ ಚಂದ್ರು, ವಿ.ಮನೋಹರ್, ಯಶ್ ಶೆಟ್ಟಿ, ಮಿಮಿಕ್ರಿ ದಯಾನಂದ್ ಉಳಿದ ತಾರಾಗಣದಲ್ಲಿದ್ದಾರೆ.

ಎಲ್ಲರೂ ನಂದಿನಿ ಉತ್ಪನ್ನಗಳನ್ನೇ ಖರೀದಿಸಿ

ಮಿಲ್ಕ್ ಪಾರ್ಲರ್ ಉದ್ಘಾಟಿಸಿದ ಮೈಮುಲ್ ಅಧ್ಯಕ್ಷ ಆರ್.ಚಲುವರಾಜ್

ತಿ.ನರಸೀಪುರ, ಏ.10– ಮೈಮುಲ್‌ನಲ್ಲಿ ತಯಾರಾಗುವ ನಂದಿನಿ ಉತ್ಪನ್ನಗಳು ಗುಣಮಟ್ಟದಿಂದ ಕೂಡಿದ್ದು, ಹಸುವಿನ ಬೆಣ್ಣೆಯಿಂದ ಮಾಡಲಾದ ತುಪ್ಪದಿಂದಲೇ ತಯಾರಿಸಲಾಗುತ್ತದೆ ಎಂದು ಮೈಮುಲ್ ಅಧ್ಯಕ್ಷ ಆರ್.ಚೆಲುವರಾಜು ತಿಳಿಸಿದರು.

ವರುಣ ಕ್ಷೇತ್ರದ ಮೇಗಳಾಪುರ ಬಸ್ ನಿಲ್ದಾಣದಲ್ಲಿ ನೂತನ ನಂದಿನಿ ಮಿಲ್ಕ್ ಪಾರ್ಲರ್ ಉದ್ಘಾಟಿಸಿ ಮಾತನಾಡಿದ ಅವರು, ನಂದಿನಿ ಉತ್ಪನ್ನಗಳು ರಾಜ್ಯದ ಸಾವಿರಾರು ರೈತರ ಹಾಗೂ ಬಡ ಕುಟುಂಬಗಳ ಆರ್ಥಿಕ ಪರಿಸ್ಥಿತಿ ಉತ್ತಮಗೊಳಿಸುವ ಆಸ್ತಿಯಾಗಿದ್ದು, ಉತ್ತಮ ಗುಣಮಟ್ಟದಿಂದ ತಯಾರಾಗುವ ನಂದಿನಿ ಉತ್ಪನ್ನಗಳನ್ನು ಎಲ್ಲರೂ ಖರೀದಿಸುವ ಮೂಲಕ ಮೈಮುಲ್ ಅನ್ನು ಮತ್ತಷ್ಟು ಬೆಳೆಸಲು ಸಹಕರಿಸಬೇಕು ಎಂದರು.


ನಂದಿನಿ ಮಿಲ್ಕ್ ಪಾರ್ಲರ್ ಅನ್ನು ಮೈಮುಲ್ ಅಧ್ಯಕ್ಷ ಆರ್.ಚೆಲುವರಾಜ್ ಉದ್ಘಾಟಿಸಿದರು.

ಒಕ್ಕೂಟದಿಂದ ಹಲವು ಭಾಗದಲ್ಲಿ ಹಾಲಿನ ಏಜೆನ್ಸಿ ಸೇರಿದಂತೆ ಅವಶ್ಯಕತೆ ಇರುವ ಕಡೆ ಮಿಲ್ಕ್ ಪಾರ್ಲರ್ ಆರಂಭಿಸಲಾಗಿದೆ. ಎಲ್ಲೆಡೆ ನಂದಿನಿ ಉತ್ಪನ್ನಗಳಿಗೆ ಬಹು ಬೇಡಿಕೆ ಇದೆ. ಶಾಲಾ ಮಕ್ಕಳು ಸೇರಿದಂತೆ ಎಲ್ಲರೂ ನಂದಿನಿ ಉತ್ಪನ್ನಗಳು ಖರೀದಿಸುವ ಮೂಲಕ ದೇಸಿ ಉತ್ಪನ್ನಗಳನ್ನು ಬೆಂಬಲಿಸುವಂತೆ ಕೋರಿದರು.

ಮಿಲ್ಕ್ ಪಾರ್ಲರ್ ತೆರೆಯಲು ಒಕ್ಕೂಟದಿಂದ ಸಹಕಾರ ನೀಡುವುದಾಗಿ ಭರವಸೆ ನೀಡಿದ ಅವರು, ಪಾರ್ಲರ್ ನಡೆಸುವವರು ಬೇಡಿಕೆ ಇಟ್ಟರೆ ಉತ್ಪನ್ನಗಳನ್ನು ಸರಬರಾಜು ಮಾಡಲಾಗುತ್ತದೆ ಎಂದರು.

ಮೈಮುಲ್ ಮಾಜಿ ಅಧ್ಯಕ್ಷ ಓಂಪ್ರಕಾಶ್ ಮಾತನಾಡಿ, ನಂದಿನಿ ಉತ್ಪನ್ನಗಳು ನಂಬಿಕೆಗೆ ಅರ್ಹವಾಗಿದ್ದು, ಬೇಕರಿಗಳಲ್ಲಿ ಬಳಸುವಂತೆ ಡಾಲ್ಡ ತುಪ್ಪ ಬಳಸುವುದಿಲ್ಲ. ಬದಲಿಗೆ ಹಸುವಿನ ಬೆಣ್ಣೆಯಿಂದ ಮಾಡಲಾದ ತುಪ್ಪದಿಂದಲೇ ಉತ್ಪನ್ನಗಳ ತಯಾರಿಕೆ ನಡೆಯುತ್ತದೆ. ಮಜ್ಜಿಗೆ, ಲಸ್ಸಿ, ವಾಟರ್ ಬಾಟಲ್‌ಗಳು ಉತ್ತಮವಾಗಿದ್ದು, ಬೆಲೆ ಮಾತ್ರ ಲೋಕಲ್ ಉತ್ಪನ್ನಗಳಿಗಿಂತ ಸ್ವಲ್ಪ ಹೆಚ್ಚಿರುತ್ತದೆ. ಗ್ರಾಹಕರು ಬೆಲೆ ಬಗ್ಗೆ ತಲೆಕೆಡಿಸಿಕೊಳ್ಳದೇ ಪರಿಶುದ್ಧವಾದ ಉತ್ಪನ್ನಗಳಿಗೆ ಪ್ರಾಮುಖ್ಯತೆ ನೀಡಿ ನಂದಿನಿ ಬೂತ್‌ಗಳಲ್ಲಿ ದೊರಕುವ ಉತ್ಪನ್ನಗಳನ್ನು ಖರೀದಿಸುವಂತೆ ಮನವಿ ಮಾಡಿದರು.

ಪಿಕಾರ್ಡ್ ಬ್ಯಾಂಕ್ ಅಧ್ಯಕ್ಷ ಕೆಂಪಯ್ಯನಹುಂಡಿ ಮಹದೇವಣ್ಣ, ಮೈಮುಲ್ ಮಾಜಿ ಅಧ್ಯಕ್ಷ ಕೆ.ಉಮಾಶಂಕರ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮುದ್ದೇಗೌಡ, ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಎಸ್.ಅನಿಲ್ ಕುಮಾರ್, ಹೊಸಕೋಟೆ ಗ್ರಾಪಂ ಮಾಜಿ ಅಧ್ಯಕ್ಷ ಆನಂದ, ಗಂಗಾಧರ, ಮಹೇಶ್, ಮಾಜಿ ಅಧ್ಯಕ್ಷ ಅಣ್ಣಯ್ಯ, ಸಿದ್ದಪ್ಪ, ರವಿ, ರಾಜೇಂದ್ರ, ಗಿರಿ, ಪುಟ್ಟನಾಯ್ಕ, ನಾಗೇಶ್, ಗುರುಪ್ರಸಾದ್, ಮಹದೇವ ಸ್ವಾಮಿ, ಸೋಮಣ್ಣ ಇದ್ದರು.

ಮನುಷ್ಯನಿಗೆ ದೈಹಿಕ, ಮಾನಸಿಕ ಆರೋಗ್ಯ ಮುಖ್ಯ

ಸಾಲಿಗ್ರಾಮ, ಏ.10– ಮನುಷ್ಯ ಉತ್ತಮ ರೀತಿ ಬಾಳ್ವೆ ನಡೆಸಲು ಆರೋಗ್ಯ ಅತ್ಯಗತ್ಯ. ಅದು ದೈಹಿಕ ಮತ್ತು ಮಾನಸಿಕ ಆರೋಗ್ಯ ಎರಡನ್ನೂ ಒಳಗೊಂಡಿರುತ್ತದೆ ಎಂದು ಕೆ.ಆರ್.ನಗರ ತಾಲೂಕು ಆರೋಗ್ಯಾಧಿಕಾರಿ ಡಾ.ನಟರಾಜು ತಿಳಿಸಿದರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಕೆಆರ್.ನಗರ ಸಮುದಾಯ ಆರೋಗ್ಯ ಕೇಂದ್ರ ಸಾಲಿಗ್ರಾಮ ವತಿಯಿಂದ ಆಯೋಜಿಸಿದ್ದ ವಿಶ್ವ ಆರೋಗ್ಯ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ಪ್ರತಿ ವರ್ಷದಂತೆ ಈ ವರ್ಷವೂ ವಿಶ್ವ ಆರೋಗ್ಯ ದಿನದ ಘೋಷವಾಕ್ಯ ಆರೋಗ್ಯಕರ ಆರಂಭ, ಭರವಸೆಯ ಭವಿಷ್ಯ. ಈ ಘೋಷವಾಕ್ಯವು ವಿಶ್ವ ಆರೋಗ್ಯ ಸಂಸ್ಥೆಯ ತಾಯಂದಿರು ಮತ್ತು ನವಜಾತ ಶಿಶುಗಳ ಆರೋಗ್ಯವನ್ನು ಕುರಿತು ವರ್ಷಪೂರ್ತಿ ನಡೆಸಲಿರುವ ಅಭಿಯಾನದ ಆರಂಭವನ್ನು ಸೂಚಿಸುತ್ತದೆ ಎಂದರು.



ತಾಲೂಕು ವೈದ್ಯಾಧಿಕಾರಿ ಡಾ.ನಟರಾಜು ಕಾರ್ಯಕ್ರಮ ಉದ್ಘಾಟಿಸಿದರು.

ಆರೋಗ್ಯಕರ ಆರಂಭ, ಭರವಸೆಯ ಭವಿಷ್ಯ ಘೋಷಣೆಯು ಅಭಿವೃದ್ಧಿ ಹೊಂದುತ್ತಿರುವ ಸಮುದಾಯಗಳು ಮತ್ತು ಸಮಾಜಗಳ ನಿರ್ಮಾಣದಲ್ಲಿ ತಾಯಂದಿರು ಮತ್ತು ನವಜಾತ ಶಿಶುಗಳ ಆರೋಗ್ಯವು ವಹಿಸುವ ಮೂಲಭೂತ ಪಾತ್ರವನ್ನು ಸಾರುತ್ತದೆ. ಈ ಅಭಿಯಾನವು ಗರ್ಭಧಾರಣೆ, ಹೆರಿಗೆ ಮತ್ತು ಜೀವನದ ಆರಂಭಿಕ ಹಂತಗಳಿಗೆ ಸಂಬಂಧಿಸಿದ ತಡೆಗಟ್ಟಬಹುದಾದ ಸಾವಿನ ಸಂಖ್ಯೆಯನ್ನು ಗಮನಾರ್ಹವಾಗಿ ಕಡಿಮೆ ಮಾಡುವ ಜಾಗತಿಕ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ ಎಂದರು.

ತಾಪಂ ಇಓ ರವಿಕುಮಾರ್ ಮಾತನಾಡಿ, ಆರೋಗ್ಯವೇ ಭಾಗ್ಯ ಎನ್ನುವ ಮಾತೊಂದಿದೆ. ಆರೋಗ್ಯ ವಿದ್ದರೆ ಮಾತ್ರ ಮನುಷ್ಯ ನೆಮ್ಮದಿಯಿಂದ ಬದುಕಲು ಸಾಧ್ಯ. ಅದೊಂದನ್ನು ಬಿಟ್ಟು ಉಳಿದೆಲ್ಲ ಇದ್ದರೂ ಮನುಷ್ಯನಿಗೆ ಅವು ಗಳನ್ನು ಅನುಭವಿಸಲು ಸಾಧ್ಯವೇ ಇಲ್ಲ ಎಂದರು. ಈ ವೇಳೆ ಡಾ.ಅಶೋಕ್, ಪ್ರಾಂಶುಪಾಲರಾದ ಹಂಸವೇಣಿ, ರೇಖಾ, ನೇತ್ರಾವತಿ ಸೇರಿದಂತೆ ಆಶಾ ಕಾರ್ಯಕರ್ತೆಯರು ಹಾಗೂ ವಿದ್ಯಾರ್ಥಿಗಳು ಮತ್ತಿತರರಿದ್ದರು.

ನಾಳೆ ಬದನವಾಳಲ್ಲಿ ಅಂಬೇಡ್ಕರ್ ಪುತ್ಥಳಿ ಅನಾವರಣ


ಸುದ್ದಿಗೋಷ್ಠಿಯಲ್ಲಿ ತಾಪಂ ಮಾಜಿ ಸದಸ್ಯ ರಾಮು ಮಾತನಾಡಿದರು.

ನಂಜನಗೂಡು, ಏ.10– ತಾಲೂಕಿನ ಬದನವಾಳು ಗ್ರಾಮದಲ್ಲಿ 35 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಿರುವ ಅಂಬೇಡ್ಕರ್ ಪುತ್ಥಳಿ ಅನಾವರಣ ಕಾರ್ಯಕ್ರಮ ಏ.12 ರಂದು ಬೆಳಗ್ಗೆ 11 ಗಂಟೆಗೆ ನಡೆಯಲಿದೆ ಎಂದು ತಾಪಂ ಮಾಜಿ ಸದಸ್ಯ ಬದನವಾಳು ರಾಮು ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗ್ರಾಮದ ಪ್ರಮುಖ ವೃತ್ತದಲ್ಲಿ 3 ವರ್ಷಗಳ ಹಿಂದೆ ಅಂಬೇಡ್ಕರ್ ಪ್ರತಿಮೆ ಸ್ಥಾಪಿಸುವ ಬಗ್ಗೆ ನಿರ್ಧಾರ ಕೈಗೊಂಡು ನಿರ್ಮಾಣ ಕಾರ್ಯ ಆರಂಭಿಸಲಾಗಿತ್ತು. ನಿರ್ಮಾಣಕ್ಕೆ ಯಾರಿಂದಲೂ ದೇಣಿಗೆ ಸಂಗ್ರಹಿಸದೇ ಗ್ರಾಮಸ್ಥರೇ ತಮ್ಮ ಸ್ವಂತ ಖರ್ಚಿನಲ್ಲಿ ನಿರ್ಮಿಸಿದ್ದಾರೆ. ಅಂಬೇಡ್ಕರ್ ಪುತ್ಥಳಿಯನ್ನು ಉಸ್ತುವಾರಿ ಸಚಿವ ಹೆಚ್.ಸಿ. ಮಹದೇವಪ್ಪ ಅನಾವರಣಗೊಳಿಸಿ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಸಚಿವ ಪ್ರಿಯಾಂಕ್ ಖರ್ಗೆ, ಶಾಸಕ ದರ್ಶನ್, ಎ.ಆರ್. ಕೃಷ್ಣಮೂರ್ತಿ, ಎಂಎಲ್‌ಸಿ ಡಾ.ಯತೀಂದ್ರ, ಸಂಸದ ಸುನೀಲ್ ಬೋಸ್, ಪ್ರಾಧ್ಯಾಪಕ ಡಾ.ಎಂ.ಕುಮಾರಸ್ವಾಮಿ, ಮಾಜಿ ಶಾಸಕರಾದ ಬಿ.ಹರ್ಷವರ್ಧನ್, ಕೇಶವಮೂರ್ತಿ, ಎಸ್.ಬಾಲರಾಜ್, ಎನ್.ಮಹೇಶ್, ನಟ, ಪ್ರಗತಿಪರ ಹೋರಾಟಗಾರ ಚೇತನ್ ಅಹಿಂಸಾ ಉಪಸ್ಥಿತರಿರುತ್ತಾರೆ. ಕೊಳತ್ತೂರು ಬುದ್ಧ ವಿಹಾರ ಕೇಂದ್ರದ ಸುಗತಪಾಲ ಭಂತೇಜಿ ಸಾನಿಧ್ಯ ವಹಿಸಲಿದ್ದಾರೆ. ಕಾರ್ಯಕ್ರಮದಲ್ಲಿ ವರುಣ, ಚಾಮರಾಜನಗರ ಮತ್ತು ನಂಜನಗೂಡು ಕ್ಷೇತ್ರದ ಹಲವು ಮುಖಂಡರು ಗ್ರಾಮಸ್ಥರು ಸೇರಿದಂತೆ 5 ಸಾವಿರ ಮಂದಿ ಭಾಗವಹಿಸಲಿದ್ದು, ಭೋಜನ ವ್ಯವಸ್ಥೆ ಮಾಡಲಾಗಿದೆ. ಸಾರ್ವಜನಿಕರು ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

ಗೋಷ್ಠಿಯಲ್ಲಿ ಮುಖಂಡರಾದ ಸೋಮಣ್ಣ, ಪುಟ್ಟಸ್ವಾಮಿ, ಅವಿನಾಶ್, ಮಹದೇವು ಉಪಸ್ಥಿತರಿದ್ದರು.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು, ಏ.10– ವಾಜಮಂಗಲ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತುರ್ತು ಕಾಮಗಾರಿ ನಿಮಿತ್ತ ಏ.11 ರಂದು ಬೆಳಗ್ಗೆ 10 ರಿಂದ ಸಂಜೆ 6 ಗಂಟೆವರೆಗೆ ಭುಗತಹಳ್ಳಿ, ಚಿಕ್ಕಹಳ್ಳಿ, ಚೋರನಹಳ್ಳಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ನೇಮಕ



ತಿ.ನರಸೀಪುರ, ಏ.10– ಬನ್ನೂರು ಪುರಸಭೆ ನಾಮ ನಿರ್ದೇಶಿತ ಸದಸ್ಯರಾಗಿ ಆರ್.ಶಿವಣ್ಣ ಅವರನ್ನು ನೇಮಕ ಮಾಡಲಾಗಿದೆ ಎಂದು ನಗರಾಭಿವೃದ್ಧಿ ಇಲಾಖೆ ಅಧೀನ ಕಾರ್ಯದರ್ಶಿ ಟಿ.ಮಂಜುನಾಥ್ ತಿಳಿಸಿದ್ದಾರೆ.

ಭಾಸ್ಕರ್ ಪ್ರಸಾದ್ ವಿರುದ್ಧ ಎಸ್ಪಿಗೆ ದೂರು

ತಿ.ನರಸೀಪುರ, ಏ.10–ಪರಿಶಿಷ್ಟ ಸಮುದಾಯದ ನಾಯಕರ ಹೆಸರಿನಲ್ಲಿ ಸಮುದಾಯಗಳ ನಡುವೆ ದ್ವೇಷ ಹುಟ್ಟುಹಾಕಿ ಒಡಕು ಮೂಡಿಸುತ್ತಿರುವ ಭಾಸ್ಕರ್ ಪ್ರಸಾದ್ ವಿರುದ್ಧ ಕ್ರಮ ಕೈಗೊಳ್ಳುವಂತೆ ಅಖಿಲ ಕರ್ನಾಟಕ ಡಾ.ಹೆಚ್.ಸಿ.ಮಹದೇವಪ್ಪ ಅಭಿಮಾನಿಗಳ ಬಳಗದ ರಾಜ್ಯ ಸಮಿತಿ ಸದಸ್ಯರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಷ್ಣುವರ್ಧನ್ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿತು.

ಭಾಸ್ಕರ್ ಪ್ರಸಾದ್ ಎಂಬುವರು ಒಳಮೀಸಲಾತಿ ಜಾರಿ ಹೋರಾಟದ ನೆಪದಲ್ಲಿ ಸರ್ಕಾರದ ಅಗತ್ಯ ಕ್ರಮಗಳ ಪ್ರಕ್ರಿಯೆಗಳ ಹೊರತಾಗಿಯೂ ಸಮಾಜ ಕಲ್ಯಾಣ ಇಲಾಖೆ ಸಚಿವ, ಪರಿಶಿಷ್ಟ ಸಮುದಾಯದ ಪ್ರಮುಖ ನಾಯಕ ಡಾ.ಹೆಚ್.ಸಿ.ಮಹದೇವಪ್ಪನವರ ವಿರುದ್ಧ ಅವಹೇಳನಕಾರಿಯಾಗಿ ಮಾತನಾಡುತ್ತಿದ್ದು, ಅವರ ಘನತೆಗೆ ನಿರಂತರವಾಗಿ ಧಕ್ಕೆ ಉಂಟು ಮಾಡುತ್ತಾ ಬಂದಿದ್ದಾರೆ. ಬಲಗೈ ಸಮುದಾಯಗಳನ್ನು ಗುರಿಯಾಗಿಸಿಕೊಂಡು ಅಪಪ್ರಚಾರ ಮಾಡುತ್ತಿರುವ ಭಾಸ್ಕರ್ ಪ್ರಸಾದ್ ಮಾದಿಗ ಮತ್ತು ಬಲಗೈ ಸಮುದಾಯಗಳ ನಡುವೆ ದ್ವೇಷ ಬರುವ ಹಾಗೆ ನಡೆದುಕೊಳ್ಳುತ್ತಿದ್ದಾರೆ. ಅಲ್ಲದೇ ಸಚಿವರ ಮನೆಗೆ ಮುತ್ತಿಗೆ ಹಾಕಿ ಎಂದು ಜನರನ್ನು ಪ್ರಚೋದನೆ ಮಾಡುತ್ತಿರುವುದು ಅಪಾಯಕಾರಿ ಸಂಗತಿ ಆಗಿದೆ. ಹಾಗಾಗಿ ಸಾಮಾಜಿಕ ಸಾಮರಸ್ಯ ಮತ್ತು ವ್ಯಕ್ತಿ ಘನತೆ ಕಾಪಾಡುವ ದೃಷ್ಟಿಯಿಂದ ತಾವು ಭಾಸ್ಕರ್ ಪ್ರಸಾದ್ ವಿರುದ್ಧ ಎಫ್‌ಐಆರ್ ದಾಖಲಿಸಬೇಕೆಂದು ಮನವಿ ಪತ್ರದಲ್ಲಿ ತಿಳಿಸಿದ್ದಾರೆ.


ಭಾಸ್ಕರ್ ಪ್ರಸಾದ್ ವಿರುದ್ಧ ಎಸ್ಪಿಗೆ ದೂರು ನೀಡಲಾಯಿತು.

ಈ ವೇಳೆ ಅಭಿಮಾನಿ ಬಳಗದ ರಾಜ್ಯಾಧ್ಯಕ್ಷ ಹಿನಕಲ್ ನಂಜುಂಡ, ರಾಜ್ಯ ಕಾರ್ಯಾಧ್ಯಕ್ಷ ಡಾ.ಕುರುಬೂರು ಬಸವರಾಜು, ರಾಜ್ಯ ಉಪಾಧ್ಯಕ್ಷ ಭರತ್‌ರಾಜ್, ರಾಜ್ಯ ಪ್ರಧಾನ ಕಾರ್ಯದರ್ಶಿ ನಾಗರಾಜು, ರಾಜ್ಯ ಖಜಾಂಚಿ ಮಹದೇವ, ನಿರ್ದೇಶಕ ನಾಗೇಶ್, ಮೈಸೂರು ಜಿಲ್ಲಾ ಅಧ್ಯಕ್ಷ ಮಧುಕುಮಾರ್ ಬಸವರಾಜು ಹಾಜರಿದ್ದರು.

ಶಿವಕುಮಾರ ಶ್ರೀ ಜಯಂತಿ, ರೇಣುಕಾ ರಾಜಶೇಖರ ಶಿವಾಚಾರ್ಯ ಸ್ವಾಮೀಜಿ ಪುಣ್ಯಸರಣೆ


ಡಾ.ಶ್ರೀಶಿವಕುಮಾರ ಸ್ವಾಮೀಜಿಗಳ 118ನೇ ಜನ್ಮದಿನ, ಲಿಂಗೈಕ್ಯ ರೇಣುಕಾ ರಾಜಶೇಖರ ಶಿವಾಚಾರ್ಯ ಸ್ವಾಮೀಜಿ ಪುಣ್ಯಸರಣೆ ನಡೆಯಿತು.

ಚುಂಚನಕಟ್ಟೆ, ಏ.10– ಸಾಲಿಗ್ರಾಮ ತಾಲೂಕಿನ ಕರ್ತಾಳು ಗ್ರಾಮದಲ್ಲಿ ತ್ರಿವಿಧ ದಾಸೋಹಿ ಡಾ.ಶ್ರೀಶಿವಕುಮಾರ ಸ್ವಾಮೀಜಿಗಳ 118ನೇ ಜನ್ಮದಿನ ಹಾಗೂ ಲಿಂಗೈಕ್ಯ ರೇಣುಕಾ ರಾಜಶೇಖರ ಶಿವಾಚಾರ್ಯ ಸ್ವಾಮೀಜಿ ಪುಣ್ಯಸರಣೆ ನಡೆಯಿತು.

ಗ್ರಾಮದ ವೀರಶೈವ ಲಿಂಗಾಯಿತ ಸಮಾಜದ ಮುಖಂಡರ ನೇತೃತ್ವದಲ್ಲಿ ನಡೆದ ಕಾರ್ಯಕ್ರಮದಲ್ಲಿ ತೆರೆದ ಟ್ರಾಕ್ಟರ್‌ನಲ್ಲಿ ಡಾ.ಶ್ರೀಶಿವಕುಮಾರ ಸ್ವಾಮೀಜಿ ಹಾಗೂ ರೇಣುಕಾ ರಾಜಶೇಖರ ಶಿವಾಚಾರ್ಯ ಸ್ವಾಮೀಜಿ ಭಾವಚಿತ್ರವನ್ನಿಟ್ಟು ವಿವಿಧ ಪುಷ್ಪಗಳಿಂದ ಅಲಂಕರಿಸಿ ಮಂಗಳವಾದ್ಯದೊಂದಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಲಾಯಿತು. ಈ ವೇಳೆ ಸ್ಥಳೀಯರು ತಮ್ಮ ಮನೆ ಬಳಿ ಪೂಜೆ ಸಲ್ಲಿಸಿ ಭಕ್ತಿ ಸಮರ್ಪಿಸಿದರು. ಬಳಿಕ ಮಠದ ಆವರಣ ಬಳಿ ಗ್ರಾಮಸ್ಥರಿಗೆ ಅನ್ನಸಂತರ್ಪಣೆ ನಡೆಯಿತು.

ಗ್ರಾಮದ ಮುಖಂಡ ನಟರಾಜ್, ಶಿಕ್ಷಕರಾದ ವಿಜಯಕುಮಾರ್, ಜಗದೀಶ್, ಹನಸೋಗೆ ಪಿಎಸಿಎಸ್ ಅಧ್ಯಕ್ಷ ಕೆ.ವಿ. ಮಹದೇವಪ್ಪ ಮಾತನಾಡಿ, ನಡೆದಾಡುವ ದೇವರು ಡಾ.ಶ್ರೀಶಿವಕುಮಾರ ಸ್ವಾಮೀಜಿಗಳು ತ್ರಿವಿಧ ದಾಸೋಹದ ಮೂಲಕ ಜಗತ್ತಿಗೆ ಉತ್ತಮ ಸಂದೇಶ ಸಾರಿ ಅಮರರಾದವರು. ಅವರು ನಡೆದು ಬಂದ ಹಾದಿ ಹಾಗೂ ಜೀವನಶೈಲಿ ನಮ್ಮೆಲ್ಲರಿಗೂ, ಮುಂದಿನ ಪೀಳಿಗೆಗೂ ಆದರ್ಶಪ್ರಾಯವಾಗಬೇಕಿದೆ. ಜಾತಿ, ಮತ, ಪಂಥ ಮರೆತು ತ್ರಿವಿಧ ದಾಸೋಹದ ಮೂಲಕ ಕೋಟ್ಯಾಂತರ ವಿದ್ಯಾರ್ಥಿಗಳ ಬಾಳಿಗೆ ಬೆಳಕಾಗಿದ್ದರು ಎಂದರು.

ಬಾಳೆಹೊನ್ನೂರು ಸಂಸ್ಥಾನ ಪೀಠದ ಕರತಾಳು ಶಾಖೆ ಗುರುಗಳಾದ ರೇಣುಕಾ ರಾಜಶೇಖರ ಶಿವಾಚಾರ್ಯ ಸ್ವಾಮೀಜಿಗಳು ಸಹ ಹಲವು ಸಾಮಾಜಿಕ ಹಾಗೂ ಧಾರ್ಮಿಕ ಕಾರ್ಯಕ್ರಮಗಳ ಮೂಲಕ ಮನೆ ಮಾತಾಗಿದ್ದರು ಎಂದು ಸ್ಮರಿಸಿದರು.

ಗ್ರಾಮದ ಮುಖಂಡರಾದ ಕಿರಣ್ ಕುಮಾರ್, ರುದ್ರೇಶ್, ಉಮೇಶ್, ಕುಮಾರ್, ಸುರೇಶ್, ಕೆಂಡಗಣ್ಣಪ್ಪ, ನಾಗರಾಜ್, ಹರೀಶ್, ನವೀನ್, ರಾಜೇಶ್, ಸಂದೇಶ್, ದಿನೇಶ್, ನೀಲಕಂಠ, ವೃಷಭೇಂದ್ರ, ಪರಮೇಶ್, ದಯಾನಂದ್, ಧನುಷ್, ಸಾಗರ್, ಹರೀಶ್, ಸಂದೀಪ್, ಶಿವಾನಂದ್, ಚಂದ್ರಶೇಖರ್ ಸೇರಿದಂತೆ ಇನ್ನಿತರರಿದ್ದರು.

ಕೂಂಬಿಂಗ್‌ಗೂ ಪತ್ತೆಯಾಗದ ಹುಲಿರಾಯ

ಹುಲಿ ಪತ್ತೆಗೆ ಸಾಕಾನೆಗಳಿಂದ ಕಾರ್ಯಾಚರಣೆ

ಹುಣಸೂರು, ಏ.10– ತಾಲೂಕಿನ ಹೈರಿಗೆ ಗ್ರಾಮದ ಜಮೀನಿನಲ್ಲಿ ಪ್ರತ್ಯಕ್ಷವಾಗಿ ಜನರನ್ನು ಆತಂಕಕ್ಕೀಡು ಮಾಡಿದ್ದ ಹುಲಿ ಪತ್ತೆಗಾಗಿ ಮಂಗಳವಾರ, ಬುಧವಾರ 2 ಸಾಕಾನೆಗಳ ಸಹಾಯದಿಂದ ಹೈರಿಗೆ, ಮುತ್ತುರಾಯನಹೊಸಹಳ್ಳಿ ಸುತ್ತಮುತ್ತ ಕೂಂಬಿಂಗ್ ಕಾರ್ಯಾಚರಣೆ ನಡೆಸಿದರೂ ಹುಲಿ ಪತ್ತೆಯಾಗಿಲ್ಲ.

ಆರ್‌ಎಫ್‌ಓ ನಂದಕುಮಾರ್, ಡಿಆರ್‌ಎಫ್‌ಓ ಮಲ್ಲಿಕಾರ್ಜುನ್ ನೇತೃತ್ವದಲ್ಲಿ 25ಕ್ಕೂ ಹೆಚ್ಚು ಅರಣ್ಯ ಸಿಬ್ಬಂದಿಗಳು ನಾಗರಹೊಳೆ ಉದ್ಯಾನವನದ ಮತ್ತಿಗೋಡು ಸಾಕಾನೆ ಶಿಬಿರದ ಭೀಮ, ಅಭಿ ಆನೆಗಳ ನೆರವಿನಿಂದ ಹೈರಿಗೆ ಕೆರೆ ಸುತ್ತ ಮುತ್ತಲ ತೋಟಗಳು, ಮುತ್ತುರಾಯನ ಹೊಸಹಳ್ಳಿ ಅರಣ್ಯ ಪ್ರದೇಶದ ಅಂಚಿನಲ್ಲಿ ಸಂಜೆವರೆಗೂ ಕೂಂಬಿಂಗ್ ಕಾರ್ಯಾ ಚರಣೆ ನಡೆಸಿತಾದರೂ ಹುಲಿ ಕಾಣಿಸಿಕೊಂಡಿಲ್ಲ.


ಸಾಕಾನೆಗಳ ನೆರವಿನಿಂದ ಕಾರ್ಯಾಚರಣೆ ನಡೆಸಲಾಯಿತು.

ಮುಂಜಾಗ್ರತೆ ವಹಿಸಿ: ಹುಲಿ ಸೆರೆಗಾಗಿ ಸಾಕಾನೆಗಳ ಸಹಾಯದಿಂದ ಕೂಂಬಿಂಗ್ ಕಾರ್ಯಾಚರಣೆ ನಡೆಸಲಾಗುತ್ತಿದೆ. ಕೆರೆ ಅಂಚಿನ ತೋಟ, ಜಮೀನುಗಳಲ್ಲಿ ಜಾನುವಾರು ಮೇಯಿಸುವ ವೇಳೆ ಅಗತ್ಯ ಮುಂಜಾಗ್ರತೆ ವಹಿಸಬೇಕು ಎಂದು ಆರ್‌ಎಫ್‌ಓ ನಂದಕುಮಾರ್ ಮನವಿ ಮಾಡಿದ್ದಾರೆ.

ಆತಂಕದಲ್ಲಿ ಗ್ರಾಮಸ್ಥರು: ಹುಲಿ ಮತ್ತೆ ಯಾವಾಗ ಕಾಣಿಸಿಕೊಳ್ಳುವುದೋ ಎಂಬ ಆತಂಕ ಗ್ರಾಮಸ್ಥರನ್ನು ಕಾಡುತ್ತಿದ್ದು, ತೋಟ, ಹೊಲಗಳಿಗೆ ಹೋಗದಂತೆ ಹಾಗೂ ಜಾನುವಾರುಗಳನ್ನು ಮೇಯಿಸಲು, ರಾತ್ರಿ ವೇಳೆ ತಿರುಗಾಡಲು ಆಗದಂತಾಗಿದೆ. ಕೂಡಲೇ ಹುಲಿ ಸೆರೆ ಹಿಡಿಯಲೇಬೇಕು. ಇಲ್ಲದಿದ್ದಲ್ಲಿ ಅರಣ್ಯ ಇಲಾಖೆ ವಿರುದ್ಧ ಪ್ರತಿಭಟನೆ ನಡೆಸಲಾಗುವುದು ಎಂದು ಹೈರಿಗೆ ಹಾಗೂ ಹುಣಸೇಗಾಲ ಗ್ರಾಮಸ್ಥರು ಎಚ್ಚರಿಸಿದ್ದಾರೆ.

ಧರ್ಮಸ್ಥಳ ಸಂಘದಿಂದ ಸಮಾಜ ಸದೃಢ

ಹುಣಸೂರು, ಏ.10– ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆ ಸಮಾಜವನ್ನು ಸದೃಢಗೊಳಿಸುವ ಕಾರ್ಯದಲ್ಲಿ ನಿರತವಾಗಿದೆ ಎಂದು ಜಿಲ್ಲಾ ಜನಜಾಗೃತಿ ವೇದಿಕೆ ಅಧ್ಯಕ್ಷ ಸೋಮಶೇಖರ್ ತಿಳಿಸಿದರು.

ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ತಾಲೂಕು ಕಚೇರಿಯಲ್ಲಿ ನಡೆದ ಹುಣಸೂರು ಮತ್ತು ಚಿಕ್ಕಹುಣಸೂರು ತಾಲೂಕು ಜನಜಾಗೃತಿ ವೇದಿಕೆ ಸಭೆ ಉದ್ಘಾಟಿಸಿ ಮಾತನಾಡಿದ ಅವರು, ಜನಜಾಗೃತಿ ಕಾರ್ಯಕ್ರಮದ ಧ್ಯೇಯೋದ್ದೇಶ, ಗಾಂಧಿ ಜಯಂತಿ, ಮದ್ಯಪಾನ ವಿರೋಧಿ ದಿನ, ವ್ಯಸನಮುಕ್ತ ಸಮಾಜ ನಿರ್ಮಾಣ, ಸ್ವಾಸ್ಥ್ಯ ಸಂಕಲ್ಪ ಕಾರ್ಯಕ್ರಮ, ನವಜೀವನ ಸಮಿತಿ ಸಭೆ ಸೇರಿದಂತೆ ಯೋಜನೆ ವತಿಯಿಂದ ಕೈಗೊಳ್ಳುವ ಎಲ್ಲಾ ಕಾರ್ಯಕ್ರಮಗಳನ್ನು ಪರಿಣಾಮ ಕಾರಿಯಾಗಿ ಅನುಷ್ಠಾನ ಮಾಡುವಂತೆ ಸಲಹೆ ಹಾಗೂ ಸೂಚನೆ ನೀಡಿ 2025ನೇ ಸಾಲಿನ ಕ್ರಿಯಾ ಯೋಜನೆ ಬಗ್ಗೆ ಮಾಹಿತಿ ನೀಡಿದರು.

ಸಭೆಯಲ್ಲಿ ಪ್ರಾದೇಶಿಕ ನಿರ್ದೇಶಕ ಜಯರಾಮ್ ನೆಲ್ಲಿತಾಯ ಮಾತನಾಡಿ, ಸಮಾಜದ ಸ್ವಾಸ್ಥ್ಯ ಕಾಪಾಡುವುದರ ಜೊತೆಗೆ ಕುಟುಂಬ ನಿರ್ವಹಣೆ ಮತ್ತು ಮಕ್ಕಳ ವಿದ್ಯಾಭ್ಯಾಸ ಸೇರಿದಂತೆ ಹಲವು ಕಾರ್ಯಗಳಿಗೆ ನೆರವಾಗುವ ರೀತಿ ಕೆಲಸ ಮಾಡುತ್ತಿದೆ. ನಮ್ಮೆಲ್ಲ ಕಾರ್ಯಗಳಿಗೆ ಜನಜಾಗೃತಿ ವೇದಿಕೆ ಸದಸ್ಯರು ಸಹ ಸಹಕಾರ ನೀಡುತ್ತಿರುವುದು ಹೆಮ್ಮೆಯ ಸಂಗತಿ ಎಂದರು.

ಸಭೆಯಲ್ಲಿ ಜಿಲ್ಲಾ ಯೋಜನಾ ನಿರ್ದೇಶಕ ಮುರಳೀಧರ್, ಸದಸ್ಯರಾದ ಗದ್ದಿಗೆ ದೇವರಾಜ್, ವಕೀಲೆ ಪವಿತ್ರ, ದಾ.ರಾ.ಮಹೇಶ್, ನೇರಳಕುಪ್ಪೆ ಮಹದೇವ್, ಯೋಜನಾಧಿಕಾರಿ ನಾರಾಯಣಶೆಟ್ಟಿ, ಧನಂಜಯ ಸೇರಿದಂತೆ ಸಿಬ್ಬಂದಿ ವರ್ಗ ಹಾಜರಿದ್ದರು.

ಆಲ್ಫಾ ಪಿಯು ಕಾಲೇಜು ಕೆ.ಆರ್.ನಗರಕ್ಕೆ ಪ್ರಥಮ


ಕೆ.ಎಂ.ಸಮಿತ್


ಕೆ.ಎಂ.ಸಂಕೇತ್


ಬಿ.ಆರ್.ಮದನ್

ಕೆ.ಆರ್.ನಗರ, ಏ.10– ಪ್ರಸಕ್ತ ಸಾಲಿನ ದ್ವಿತೀಯ ಪಿಯುಸಿ ಫಲಿತಾಂಶದಲ್ಲಿ ನಗರದ ಪ್ರತಿಷ್ಠಿತ ಆಲ್ಫಾ ಪಿಯು ಕಾಲೇಜು ಪ್ರತಿ ವರ್ಷದಂತೆ ಈ ವರ್ಷವೂ ತಾಲೂಕಿಗೆ ಪ್ರಥಮ ಸ್ಥಾನ ಪಡೆದುಕೊಂಡಿದೆ.

ವಿಜ್ಞಾನ ವಿಭಾಗದಲ್ಲಿ ಕೆ.ಎಂ.ಸಮಿತ್ 586 ಅಂಕ ಪಡೆದು ತಾಲೂಕಿಗೆ ಪ್ರಥಮ ಸ್ಥಾನ ಪಡೆದಿದ್ದಾರೆ. ಕೆ.ಎಂ.ಸಂಕೇತ್ 584, ಬಿ.ಆರ್.ಮದನ್ 580, ವಿನಯ್ 579, ಜನ್ನಶ್ರೀ 578, ಸಿ.ಯು.ಆದಿತ್ಯ 578 ಅಂಕ ಪಡೆದು ಕಾಲೇಜಿಗೆ ಕೀರ್ತಿ ತಂದಿದ್ದಾರೆ. ವಿದ್ಯಾರ್ಥಿಗಳನ್ನು ಸಂಸ್ಥೆ ಕಾರ್ಯದರ್ಶಿ ವೈ.ಎಸ್.ಸುಬ್ರಮಣ್ಯ ಅಭಿನಂದಿಸಿದರು.

ವಾಣಿಜ್ಯ ವಿಭಾಗದಲ್ಲಿ ಇಮ್ದಾದ್ ಉಲ್ಲಾ ಖಾನ್ ಕಾಲೇಜಿಗೆ ಪ್ರಥಮ ಸ್ಥಾನ ಪಡೆದಿದ್ದಾರೆ. ವಿಜ್ಞಾನ ವಿಭಾಗದಲ್ಲಿ ಶೇ.99 ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ವಾಣಿಜ್ಯ ವಿಭಾಗದಲ್ಲಿ ಶೇ.100% ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ. ವಿಜ್ಞಾನ ವಿಭಾಗದಲ್ಲಿ ಅತ್ಯುನ್ನತ ಶ್ರೇಣಿ 32 ವಿದ್ಯಾರ್ಥಿಗಳು, 95 ಉನ್ನತ ಶ್ರೇಣಿಯಲ್ಲಿ ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ. ವಾಣಿಜ್ಯ ವಿಭಾಗದಲ್ಲಿ ಅತ್ಯುನ್ನತ ಶ್ರೇಣಿ 7 ವಿದ್ಯಾರ್ಥಿಗಳು, ಉನ್ನತ ಶ್ರೇಣಿ 28 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ.

ಸಂಸ್ಥೆ ಅಧ್ಯಕ್ಷ ಡಿ.ಎಂ.ರವಿಕುಮಾರ್, ಪ್ರಾಂಶುಪಾಲ ನವೀನ, ಉಪನ್ಯಾಸಕರು, ವಿದ್ಯಾರ್ಥಿಗಳನ್ನು ಅಭಿನಂದಿಸಿದ್ದಾರೆ.

ಶಾಸ್ತ್ರೀ ಕಾಲೇಜಿಗೆ ಉತ್ತಮ ಫಲಿತಾಂಶ


ಎಂ.ಭರತ್


ನಿರೀಕ್ಷಾ ಬೋಜಮ್ಮ


ಲಕ್ಷ್ಮೀಶ

ಹುಣಸೂರು, ಏ.10– ನಗರದ ಶಾಸ್ತ್ರೀ ಸಂಯುಕ್ತ ಪದವಿ ಪೂರ್ವ ಕಾಲೇಜಿನ ವಿಜ್ಞಾನ ವಿಭಾಗದ ವಿದ್ಯಾರ್ಥಿ ಎಂ.ಭರತ್ 589 ಅಂಕಗಳಿಸಿ ತಾಲೂಕಿಗೆ ಪ್ರಥಮ ಹಾಗೂ ರಾಜ್ಯಕ್ಕೆ 9ನೇ ರ್‍ಯಾಂಕ್, ವಾಣಿಜ್ಯ ವಿಭಾಗದಲ್ಲಿ ನಿರೀಕ್ಷಾ ಭೋಜಮ್ಮ 588 ಅಂಕ ಪಡೆದು ತಾಲೂಕಿಗೆ ದ್ವಿತೀಯ ಟಾಪರ್ ಆಗುವ ಮೂಲಕ ಉತ್ತಮ ಸಾಧನೆಗೈದಿದ್ದಾರೆ ಎಂದು ಪ್ರಾಂಶುಪಾಲ ಎಂ.ಎಲ್.ರವಿಶಂಕರ್ ತಿಳಿಸಿದ್ದಾರೆ.

ವಿಜ್ಞಾನ ವಿಭಾಗದಲ್ಲಿ ಲಕ್ಷ್ಮೀಶ 580 ಅಂಕ ಪಡೆದು ಕಾಲೇಜಿಗೆ ದ್ವಿತೀಯ ಸ್ಥಾನ ಪಡೆದಿದ್ದು, 21 ಅತ್ಯುನ್ನತ, 50 ಮಂದಿ ಪ್ರಥಮ ಶ್ರೇಣಿ, ವಾಣಿಜ್ಯ ವಿಭಾಗದಲ್ಲಿ 14 ಅತ್ಯುನ್ನತ, 24 ಮಂದಿ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ.

100 ಅಂಕ ಪಡೆದವರು: ಕನ್ನಡದಲ್ಲಿ ಮಾನ್ಯಶ್ರೀ ಎಂ.ಸಂಜನಮಗರ್, ಚೈತನ್ಯ ಎನ್. ತಲಾ 100 ಅಂಕ, ಗಣಿತದಲ್ಲಿ ಎಂ.ಭರತ್, ಜೆ.ಗಗನ್, ಆರ್.ವೈ. ಯಶಸ್ ತಲಾ 100 ಅಂಕ ಪಡೆದಿದ್ದಾರೆ. ಭೌತಶಾಸ್ತ್ರದಲ್ಲಿ ಎಂ.ಲಕ್ಷ್ಮೀಶ 100 ಅಂಕ ಪಡೆದಿದ್ದಾರೆ. ವಿದ್ಯಾರ್ಥಿಗಳನ್ನು ಪ್ರಾಚಾರ್ಯ ರವಿಶಂಕರ್, ಆಡಳಿತ ಮಂಡಳಿ ಕಾರ್ಯದರ್ಶಿ ಎಸ್.ರಾಧಾಕೃಷ್ಣ ಹಾಗೂ ಉಪನ್ಯಾಸಕ ವೃಂದ ಅಭಿನಂದಿಸಿದ್ದಾರೆ.

ಕೋಟೆ, ಸರಗೂರಲ್ಲಿ ಮಹಾವೀರ ಜಯಂತಿ ಆಚರಣೆ




ಹೆಚ್.ಡಿ.ಕೋಟೆಯ ಮಿನಿ ವಿಧಾನಸೌಧದ ಆವರಣ, ಸರಗೂರಿನ ತಾಲೂಕು ಕಚೇರಿಯಲ್ಲಿ ಭಗವಾನ್ ಮಹಾವೀರ ಜಯಂತಿ ಆಚರಿಸಲಾಯಿತು.

ಹೆಚ್.ಡಿ.ಕೋಟೆ, ಏ.10– ಅಹಿಂಸಾ ಧರ್ಮದ ಪ್ರವರ್ತಕರರಾಗಿ, ಜನ ಕಲ್ಯಾಣಕ್ಕಾಗಿ ಅರಮನೆ, ಸಂಸಾರ ತ್ಯಾಗ ಮಾಡಿ ಕಠಿಣ ಮಾರ್ಗವನ್ನು ಭಗವಾನ್ ಮಹಾವೀರರು ಅನುಸರಿಸಿದರು ಎಂದು ಜೈನ ಸಮಾಜದ ಮುಖಂಡ ಗೀಸುಲಾಲ್ ನಾರಾಯಣ್ ತಿಳಿಸಿದರು.

ಪಟ್ಟಣದ ಮಿನಿ ವಿಧಾನಸೌಧದ ಆವರಣದಲ್ಲಿ ಗುರುವಾರ ಮಹಾವೀರ ಜಯಂತಿ ಅಂಗವಾಗಿ ಮಹಾವೀರರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಅವರು ಮಾತನಾಡಿದರು.

ಅಹಿಂಸಾ ಧರ್ಮಗಳನ್ನು ಪಾಲಿಸುವ ಮೂಲಕ ಬ್ರಹ್ಮಚರ್ಯವನ್ನು ತಮ್ಮ ಬದುಕಿನಲ್ಲಿ ಆಯ್ದುಕೊಂಡರು. ಕಠೋರ ತಪಸ್ಸಿನ ಮಧ್ಯೆ ಬಂದ ಅನೇಕ ಕಷ್ಟ ನಷ್ಟ, ಹಿಂಸೆಗಳನ್ನು ಸಹಿಸಿಕೊಂಡು ಅನೇಕ ಪ್ರಶ್ನೆಗಳಿಗೆ ತಾವೇ ಉತ್ತರವನ್ನು ಜನರಿಗೆ ತಿಳಿಸಿದರು. ತಮ್ಮ ಉಪದೇಶದಲ್ಲಿ ಅಹಿಂಸೆ, ಸತ್ಯ, ಬ್ರಹ್ಮಚರ್ಯ ವ್ರತಗಳ ಅನುಷ್ಠಾನ ಮಾಡಿದರು. ತಾನೂ ಜೀವಿಸಿ, ಇತರರಿಗೂ ಜೀವಿಸಲು ಅವಕಾಶ ನೀಡುವ ಗುಣಗಳನ್ನು ಸಾರಿದರು. ಕಳ್ಳತನ, ಸುಳ್ಳು ಹೇಳುವುದು ಮಹಾ ಪಾಪ ಎಂದು ಸಾರಿದ ಮಹಾನ್ ದಾರ್ಶನಿಕ ಮಹಾವೀರ ಎಂದರು.

ಮೋಹ, ಸ್ವಾರ್ಥ, ದುರಾಸೆಯಿಂದ ಬಿಡುಗಡೆ ಪಡೆದು ಮಾನವೀಯ ಮೌಲ್ಯದೊಂದಿಗೆ ನೈತಿಕವಾದ ಶುದ್ಧತೆಯ ಸದ್ಗುಣಗಳಿಂದ ಜೀವನ ನಡೆಸಬೇಕು ಎಂಬ ಜೀವನ ಸಂದೇಶ ಸಾರಿದ್ದಾರೆ ಎಂದರು.

ತಹಸೀಲ್ದಾರ್ ಶ್ರೀನಿವಾಸ, ಸಮರ್ಥ್ ಲಾಲ್, ಕನ್ಹಯ್ಯಲಾಲ್, ಓಂಪ್ರಕಾಶ್, ಗಣಪತಿ ಲಾಲ್, ಶ್ಯಾಮಲಾಲ್, ರವಿರಾಜ್, ಸುನೀತಾ, ಪಾಯಲ್, ಪಪ್ಪು ಗನ್ನ, ಮನೋಜ್ ಗನ್ನ, ಅನಿಲ್ ಗನ್ನ, ಗೋಪಾಲ್ ಶರ್ಮಾ, ರಾಜೇಶ್ ಇದ್ದರು.

ಸರಗೂರು: ಮಹಾವೀರ ಜಯಂತಿ ಜೈನರ ಪ್ರಮುಖ ಧಾರ್ಮಿಕ ಆಚರಣೆಯಲ್ಲಿ ಒಂದಾಗಿದೆ ಎಂದು ಜೈನ ಸಮಾಜದ ಮುಖಂಡರಾದ ಪದ್ಮಪ್ರಭ ತಿಳಿಸಿದರು.

ಪಟ್ಟಣದ ತಾಲೂಕು ಕಚೇರಿಯಲ್ಲಿ ಗುರುವಾರ ನಡೆದ ಭಗವಾನ್ ಮಹಾವೀರ ಜಯಂತಿಯಲ್ಲಿ ಮಾತನಾಡಿದ ಅವರು, 24ನೇ ತೀರ್ಥಂಕರರಾದ ಮಹಾವೀರರು ಚಿಕ್ಕ ವಯಸ್ಸಿನಲ್ಲಿಯೇ ಸನ್ಯಾಸತ್ವ ಸ್ವೀಕರಿಸಿದರು. ಮಹಾವೀರರು 5 ತತ್ವಗಳನ್ನು ನೀಡಿದ್ದಾರೆ. ಅವುಗಳೆಂದರೆ ಅಹಿಂಸೆ, ಸತ್ಯ, ಅಸ್ತಿತ್ವ, ಬ್ರಹ್ಮಚರ್ಯ ಮತ್ತು ಭೌತಿಕವಲ್ಲದ ವಸ್ತುಗಳಿಂದ ದೂರವಿರುವುದು ಎಂದರು.

ಅಸಮಾಧಾನ: ಮಹಾವೀರ ಜಯಂತಿಯಂದು ಎಂದಿನಂತೆ ಮಾಂಸದ ಅಂಗಡಿಗಳು ತೆರೆದು ವ್ಯಾಪಾರ ನಡೆಸಿದ್ದರಿಂದ ಜೈನ ಸಮುದಾಯದ ಮುಖಂಡರು ಅಸಮಾಧಾನ ವ್ಯಕ್ತಪಡಿಸಿದರು.

ಜೈನ ಸಮಾಜದ ಕಾರ್ಯದರ್ಶಿ ಎಸ್.ಎನ್.ದೇವೇಂದ್ರಯ್ಯ, ಡಿಎಸ್‌ಎಸ್ ಜಿಲ್ಲಾ ಸಂಘಟನಾ ಸಂಚಾಲಕ ಎಸ್.ಡಿ. ಸಣ್ಣಸ್ವಾಮಿ ಮಾತನಾಡಿದರು. ಪಪಂ ಅಧ್ಯಕ್ಷೆ ರಾಧಿಕಾ, ಉಪಾಧ್ಯಕ್ಷ ಶಿವಕುಮಾರ್, ಸದಸ್ಯರಾದ ನೂರಾಳಸ್ವಾಮಿ, ಸಣ್ಣತಾಯಮ್ಮ, ಶ್ರೀನಿವಾಸ್, ಉಮಾ, ರಮೇಶ್, ಉಪ ತಹಸೀಲ್ದಾರ್ ಮನೋಹರ್, ಜೈನ ಸಮಾಜ ಅಧ್ಯಕ್ಷ ಎಸ್.ಬಿ. ನಾಗರಾಜು, ನಿತಿನ್, ಎಸ್.ಬಿ.ಜೀವೇಂದ್ರಕುಮಾರ್, ಬ್ರಹ್ಮದೇವಯ್ಯ, ಅನಂತಮತಿ ಮಹಿಳಾ ಸಮಾಜದ ಮಂಜುಳಾ, ಎಸ್.ಪಿ. ಪ್ರಸಾದ್, ಎಸ್.ಡಿ.ಬ್ರಹ್ಮದೇವ್, ಅನಿಲ್ ಕುಮಾರ್, ಎಂ.ಕೆಂಡಗಣ್ಣಸ್ವಾಮಿ, ಅನಿಲ್ ಕುಮಾರ್, ಎಸ್.ಡಿ.ಓಂಕಾರ್ ಜೈನ್, ಎಸ್.ಬಿ.ಸುಮಂತ್, ಎಸ್.ಡಿ.ವಿಮಲ್ ಜೈನ್, ಶ್ರೀನಿವಾಸ್, ಮಹದೇವಸ್ವಾಮಿ ಹಾಗೂ ಸಮಾಜದ ಬಂಧುಗಳು ಹಾಗೂ ಇನ್ನಿತರರು ಹಾಜರಿದ್ದರು.

ಕಂಪಲಾಪುರ ಸುತ್ತಮುತ್ತ ಭಾರೀ ಮಳೆ

ಕಂಪಲಾಪುರ, ಏ.10– ಗ್ರಾಮದ ಸುತ್ತಮುತ್ತ ಗುರುವಾರ ಮಧ್ಯಾಹ್ನ ಬಿರುಗಾಳಿ ಸಹಿತ ಭಾರೀ ಮಳೆ ಸುರಿಯಿತು.

ಬಿರುಗಾಳಿ ಮಳೆಯಿಂದಾಗಿ ಇಲ್ಲಿಗೆ ಸಮೀಪದ ಜವನಿಕುಪ್ಪೆ ಗೇಟ್‌ನಲ್ಲಿ 4 ವಿದ್ಯುತ್ ಕಂಬಗಳು ಹಾಗೂ ಮರಗಳು ಮುರಿದು ಬಿದ್ದಿದ್ದರಿಂದ ರಸ್ತೆ ಸಂಚಾರ ಅಸ್ತವ್ಯಸ್ತಗೊಂಡಿತ್ತು.



ಭಾರೀ ಮಳೆಗೆ ರಸ್ತೆ ಸಂಚಾರ ಅಸ್ತವ್ಯಸ್ತಗೊಂಡಿತ್ತು.

ವಿಷಯ ತಿಳಿದು ಪಿರಿಯಾಪಟ್ಟಣ ಠಾಣೆ ಪೊಲೀಸರು ಸ್ಥಳಕ್ಕಾಗಮಿಸಿ ಸುಗಮ ಸಂಚಾರಕ್ಕೆ ವ್ಯವಸ್ಥೆ ಮಾಡಿದರು. ನಂತರ ಚೆಸ್ಕಾಂ ಸಿಬ್ಬಂದಿ ಮುರಿದ ವಿದ್ಯುತ್ ಕಂಬಗಳ ದುರಸ್ತಿ ನಡೆಸಿದರು.

ಶಿವಪ್ಪಶೆಟ್ಟಿ ನಿಧನ



ಹುಣಸೂರು, ಏ.10– ತಾಲೂಕಿನ ತೊಂಡಾಳು ಗ್ರಾಮದ ನಿವಾಸಿ ಶಿವಪ್ಪಶೆಟ್ಟಿ (90) ಗುರುವಾರ ಮುಂಜಾನೆ ನಿಧನರಾದರು. ಮೃತರು ಉದ್ಯಮಿ ಶಂಕರ್ ಸೇರಿದಂತೆ ಐವರು ಪುತ್ರರು, ಐವರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮೃತರ ಜಮೀನಿನಲ್ಲಿ ಸಂಜೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಐಪಿಎಲ್ ಹಂಗಾಮ

ಗೆಲುವಿನ ನಾಗಾಲೋಟ ಮುಂದುವರೆಸಿದ ಡೆಲ್ಲಿ

ತವರಿನಲ್ಲೇ ಆರ್‌ಸಿಬಿಗೆ ಮತ್ತೊಮ್ಮೆ ಮುಖಭಂಗ

ಬೆಂಗಳೂರು, ಏ.10(ಸಂತೋಷ್)– ಕೆ.ಎಲ್.ರಾಹುಲ್ ಅವರ ಆಕರ್ಷಕ ಅರ್ಧ ಶತಕದ ನೆರವಿನಿಂದ ಡೆಲ್ಲಿ ಕ್ಯಾಪಿಟಲ್ಸ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ವಿರುದ್ಧ 6 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ.

ಇದರೊಂದಿಗೆ ಡೆಲ್ಲಿ ಕ್ಯಾಪಿಟಲ್ಸ್ ಟೂರ್ನಿಯಲ್ಲಿ ಗೆಲುವಿನ ನಾಗಾಲೋಟ ಮುಂದುವರೆಸಿದರೇ, ಬೆಂಗಳೂರು ತವರಿನಲ್ಲಿ ಮತ್ತೊಮ್ಮೆ ಮುಖಭಂಗ ಅನುಭವಿಸಿತು.

ಇಲ್ಲಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ರಾಯಲ್ ಚಾಲೆಂಜರ್ಸ್ ಬೆಂಗಳೂರು 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 163 ರನ್ ಗಳಿಸಿತು. ಗುರಿ ಬೆನ್ನತ್ತಿದ ಡೆಲ್ಲಿ 17.5 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 169 ರನ್ ಗಳಿಸಿ ಇನ್ನೂ 13 ಎಸೆತಗಳು ಬಾಕಿ ಇರುವಂತೆಯೇ ಗೆಲುವಿನ ನಗೆ ಬೀರಿತು.

ಡೆಲ್ಲಿಗೆ ರಾಹುಲ್ ಆಸರೆ: ತಂಡದ ಮೊತ್ತ 30 ರನ್ ಆಗುವಷ್ಟರಲ್ಲಿ ಫಾಫ್ ಡು ಪ್ಲೆಸಿಸ್(2), ಮೆಕ್‌ಗುರ್ಕ್(7) ಮತ್ತು ಅಭಿಷೇಕ್ ಪೋರೆಲ್ (2) ವಿಕೆಟ್ ಕಳೆದುಕೊಂಡು ಡೆಲ್ಲಿ ಸಂಕಷ್ಟಕ್ಕೆ ಸಿಲುಕಿತ್ತು.



ನಂತರ ಬಂದ ನಾಯಕ ಅಕ್ಷರ್ ಪಟೇಲ್ 15 ರನ್ ಗಳಿಸಿ ನಿರ್ಗಮಿಸಿದರು. ಈ ವೇಳೆ ಜೊತೆಯಾದ ಕೆ.ಎಲ್.ರಾಹುಲ್, ತ್ರಿಸ್ಟನ್ ಸ್ಟಬ್ಸ್ 5ನೇ ವಿಕೆಟ್‌ಗೆ 111 ರನ್‌ಗಳ ಜೊತೆಯಾಟವಾಡಿ ಜಯ ತಂದುಕೊಟ್ಟರು. ಆರಂಭದಲ್ಲಿ ನಿಧಾನಗತಿ ಬ್ಯಾಟಿಂಗ್ ನಡೆಸಿದ ಕೆ.ಎಲ್.ರಾಹುಲ್ ಪಂದ್ಯದಲ್ಲಿ ದೊರೆತ ಜೀವದಾನ ಸದುಪಯೋಗಪಡಿಸಿಕೊಂಡು 53 ಎಸೆತಗಳಲ್ಲಿ 6 ಸಿಕ್ಸರ್, 7 ಬೌಂಡರಿ ಒಳಗೊಂಡ ಅಜೇಯ 93 ರನ್ ಗಳಿಸಿದರೇ, ತ್ರಿಸ್ಟನ್ ಸ್ಟಬ್ಸ್ ಅಜೇಯ 38 ರನ್ ಗಳಿಸಿದರು. ಆರ್‌ಸಿಬಿ ಪರ ಭುವನೇಶ್ವರ್ ಕುಮಾರ್ 2, ಸುಯಾಶ್ ಶರ್ಮಾ, ಯಶ್ ದಯಾಳ್ ಒಂದೊಂದು ವಿಕೆಟ್ ಪಡೆದರು.

ಇದಕ್ಕೂ ಮುನ್ನಾ ಟಾಸ್ ಸೋತರೂ ಗೆಲುವಿನ ಛಲದೊಂದಿಗೆ ಬ್ಯಾಟಿಂಗ್ ನಡೆಸಿದ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮೊದಲ 3 ಓವರ್‌ಗಳಲ್ಲೇ 50 ರನ್ ಸಿಡಿಸಿ ಅಬ್ಬರಿಸಿತು. ಫಿಲ್ ಸಾಲ್ಟ್ 17 ಬಾಲ್‌ಗಳಲ್ಲಿ 3 ಸಿಕ್ಸರ್ ಮತ್ತು 4 ಬೌಂಡರಿ ಒಳಗೊಂಡ 37 ರನ್ ಗಳಿಸಿದ್ದರು. ಈ ಮಧ್ಯೆ ರನ್ ಕದಿಯಲು ಹೋಗಿ ಸಾಲ್ಟ್ ರನೌಟ್ ಆದರು. ನಂತರ ಬಂದ ದೇವದತ್ ಪಡಿಕ್ಕಲ್ 1 ರನ್‌ಗೆ ವಿಕೆಟ್ ಒಪ್ಪಿಸಿ ಹೊರ ನಡೆದರು. ಈ ಮಧ್ಯೆ ಭರವಸೆ ಆಟಗಾರ ನಾಗಿದ್ದ ವಿರಾಟ್ ಕೊಹ್ಲಿ 2 ಸಿಕ್ಸರ್, 1 ಬೌಂಡರಿ ಒಳಗೊಂಡ 22 ರನ್ ಗಳಿಸಿ ಔಟಾಗಿದ್ದು ನಿರಾಸೆ ಮೂಡಿಸಿತು. ನಂತರ ಬಂದ ಯಾರೊಬ್ಬರೂ ಕ್ರೀಸ್‌ನಲ್ಲಿ ನಿಲ್ಲಲಿಲ್ಲ. ರಜತ್ ಪಾಟೀದಾರ್ 25 ರನ್‌ಗೆ ವಿಕೆಟ್ ಒಪ್ಪಿಸಿದರು. ಲಿಯಾವಿಂಗ್‌ಸ್ಟೋನ್ 4, ಜಿತೇಶ್ ಶರ್ಮಾ 3 ರನ್ ಗಳಿಸಿ ವಿಫಲರಾದರು. ಕೃನಾಲ್ ಪಾಂಡ್ಯ 18 ರನ್ ಗಳಿಸಿ ಔಟಾದರು. ಕೊನೆ ಘಳಿಗೆಯಲ್ಲಿ ಟೀಮ್ ಡೇವಿಡ್ 20 ಎಸೆತಗಳಲ್ಲಿ 4 ಸಿಕ್ಸರ್, 2 ಬೌಂಡರಿ ಒಳಗೊಂಡ 37 ರನ್ ಗಳಿಸಿ ತಂಡ ಸವಾಲಿನ ಮೊತ್ತ ಪೇರಿಸಲು ನೆರವಾದರು. ಡೆಲ್ಲಿ ಪರ ವಿಪ್ರಾಜ್ ನಿಗಮ್, ಕುಲದೀಪ್ ಯಾದವ್ ತಲಾ 2, ಮುಖೇಶ್ ಕುಮಾರ್, ಮೋಹಿತ್ ಶರ್ಮಾ ತಲಾ ಒಂದೊಂದು ವಿಕೆಟ್ ಉರುಳಿಸಿದರು. ಕೆ.ಎಲ್.ರಾಹುಲ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ತಂಡದ ಅಂಕಪಟ್ಟಿ ವಿವರ

ತಂಡ	ಪಂದ್ಯಗಳು	ಗೆಲುವು	ಸೋಲು	ಡ್ರಾ	ಅಂಕ
ಗುಜರಾತ್	5	4	1	0	8
ಡೆಲ್ಲಿ	4	4	0	0	8
ಬೆಂಗಳೂರು	5	3	2	0	6
ಪಂಜಾಬ್	4	3	1	0	6
ಲಕ್ನೋ	5	3	2	0	6
ಕೋಲ್ಕತ್ತಾ	5	2	3	0	4
ರಾಜಸ್ಥಾನ್	5	2	3	0	4
ಮುಂಬೈ	5	1	4	0	2
ಚೆನ್ನೈ	5	1	4	0	2
ಹೈದರಾಬಾದ್	5	1	4	0	2

ಇಂದಿನ ಪಂದ್ಯ

ಚೆನ್ನೈ ಸೂಪರ್ ಕಿಂಗ್ಸ್
V/S
ಕೊಲ್ಕತ್ತಾ ನೈಟ್ ರೈಡರ್ಸ್
ಸಮಯ: ಸಂಜೆ 7.30
ಸ್ಥಳ : ಎಂ.ಎ. ಚಿದಂಬರಂ ಕ್ರೀಡಾಂಗಣ, ಚೆನ್ನೈ

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಪುಷ್ಪ–2 (ತೆ)	3 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಗುಡ್ ಬ್ಯಾಡ್ ಅಗ್ಲಿ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಸಿಕಂದರ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಡಾಕೂ ಮಹಾರಾಜ್ (ತೆ)	4 ಪ್ರದರ್ಶನಗಳು
ಗಾಯಿತ್ರಿ	
ಅಪ್ಪು (ಕ)	4 ಪ್ರದರ್ಶನಗಳು
ರಾಜಕಮಲ್	
ಜಾಕ್ (ತೆ)	4 ಪ್ರದರ್ಶನಗಳು
ಸಂಗಂ	
ವಾಮನ (ಕ)	4 ಪ್ರದರ್ಶನಗಳು
ಲಿಡೋ	
ನಿಮ್ದೇ ಕಥೆ (ಕ–2), ಬೆಂಕಿಯ ಬಲೆ (ಕ–2)	4 ಪ್ರದರ್ಶನಗಳು
ತಿಬ್ಬಾದೇವಿ	
ಭಗೀರಥ (ಕ)	4 ಪ್ರದರ್ಶನಗಳು
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1 ಡಿಸ್ನಿ ಸ್ನೋ ವೈಟ್ (ಇಂ): ಬೆ.9.55ಕ್ಕೆ, ಮ.12.20ಕ್ಕೆ, ಮ.2.40ಕ್ಕೆ, ಸಂ.5ಕ್ಕೆ, ದಿ ಡಿಪ್ಲೊಮೆಟ್ (ಹಿಂ): ರಾ.7.20ಕ್ಕೆ, ಯಾರಿಯನ್ (ಹಿಂ): ರಾ.10.10ಕ್ಕೆ.

ಸ್ಕ್ರೀನ್ 2 ಬರ್ಗೆಟ್ ಬಸ್ಯಾ (ಕ): ಬೆ.10.20ಕ್ಕೆ, ಅಸ್ತ್ರಂ (ತ): ಮ.1.10ಕ್ಕೆ, ಕೋರ್ಟ್ ಸ್ಟೇಟ್ V/s ಎ ನೋಬಡಿ (ತೆ): ಮ.3.55ಕ್ಕೆ, ತುಮ್ಕೊ ಮೇರಿ ಕಸಮ್ (ಹಿಂ): ರಾ.7ಕ್ಕೆ, ರಾ.10.20ಕ್ಕೆ.

ಸ್ಕ್ರೀನ್ 3 ಬಳ್ಳಾರಿ ಜಿಲ್ಲೆ ಬಳ್ಳಾರಿ ತಾಲೂಕು ಗ್ರಾಮ ಯಾಳ್ಪಿ (ಕ): ಬೆ.10.35ಕ್ಕೆ, ಡ್ರ್ಯಾಗನ್ (ತ): ಮ.1.05ಕ್ಕೆ, ಪಿಂಟು ಕಿ ಪಪ್ಪಿ (ಹಿಂ): ಸಂ.4.15ಕ್ಕೆ, ಛಾವಾ (ಹಿಂ): ರಾ.7ಕ್ಕೆ, ಘಾತಕ್ (ಹಿಂ): ಬೆ.10.15ಕ್ಕೆ.

ಸ್ಕ್ರೀನ್ 4 ಡ್ರ್ಯಾಗನ್ (ತ): ಬೆ.10.20ಕ್ಕೆ, ಅಪ್ಪು (ಕ): ಮ.1.30ಕ್ಕೆ, ಷಣ್ಮುಖ (ತೆ): ಸಂ.4.15ಕ್ಕೆ, ರಾ.9.45ಕ್ಕೆ, ಡಿಸ್ನಿ ಸ್ನೋ ವೈಟ್ (ಇಂ): ರಾ.7.05ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1 ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.

ಸ್ಕ್ರೀನ್ 2 ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.

ಸ್ಕ್ರೀನ್ 3 ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.

ಸ್ಕ್ರೀನ್ 4 ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1 ಫಾರೆಸ್ಟ್ (ಕ): ಮ.1.45ಕ್ಕೆ, ಬಳ್ಳಾರಿ ಜಿಲ್ಲೆ ಬಳ್ಳಾರಿ ತಾಲೂಕು ಗ್ರಾಮ ಯಾಳ್ಪಿ (ಕ): ಸಂ.6.35ಕ್ಕೆ ಅಸ್ತ್ರಂ (ತ): ರಾ.7ಕ್ಕೆ, ಷಣ್ಮುಖ (ತೆ): ರಾ.9.15ಕ್ಕೆ.

ಸ್ಕ್ರೀನ್ 2 ಪಿಂಟು ಕಿ ಪಪ್ಪಿ (ಹಿಂ): ಮ.1.15ಕ್ಕೆ, ಮ.3.55ಕ್ಕೆ, ಛಾವಾ (ಹಿಂ): ಸಂ.6.30ಕ್ಕೆ, ತುಮ್ಕೊ ಮೇರಿ ಕಸಮ್ (ಹಿಂ): ರಾ.9.30ಕ್ಕೆ.

ಸ್ಕ್ರೀನ್ 3 ಡಿಸ್ನಿ ಸ್ನೋ ವೈಟ್ (ಇಂ): ಮ.1.30ಕ್ಕೆ, ಸಂ.4.05ಕ್ಕೆ, ರಾ.9.20ಕ್ಕೆ, ತುಮ್ಕೊ ಮೇರಿ ಕಸಮ್ (ಹಿಂ): ಸಂ.6.15ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಗೋವಿಂದಸ್ವಾಮಿ ಗುಂಡಾಪುರ ರಚಿತ ಗುಡಿಸಲ ಜ್ಯೋತಿ ಪುಸ್ತಕ ಬಿಡುಗಡೆ

ಜಾತಿ ಬಂಧನದಿಂದ ಸಾಮಾಜಿಕ ಪರಿವರ್ತನೆ ಹರಿಕಾರರ ಬಿಡುಗಡೆ ಅಗತ್ಯ

ಹಿರಿಯ ಸಾಹಿತಿ ಡಾ.ಅರವಿಂದ ಮಾಲಗತ್ತಿ ಅಭಿಮತ

ಮೈಸೂರು,ಏ.10(ಪಿಎಂ)– ಸಾಮಾಜಿಕ ಪರಿವರ್ತನೆಯ ಹರಿಕಾರರನ್ನು ಜಾತಿ ಬಂಧನದಿಂದ ಬಿಡುಗಡೆಗೊಳಿಸುವ ಅಗತ್ಯವಿದೆ ಎಂದು ಹಿರಿಯ ಸಾಹಿತಿ ಡಾ.ಅರವಿಂದ ಮಾಲಗತ್ತಿ ಅಭಿಪ್ರಾಯಪಟ್ಟರು.

ಮೈಸೂರಿನ ರಂಗಾಯಣದ ಬಿ.ವಿ. ಕಾರಂತ ರಂಗಚಾವಡಿಯಲ್ಲಿ ಪದ್ಮಪಾಣಿ ಲಲಿತಕಲಾ ಅಕಾಡೆಮಿ ವತಿಯಿಂದ ಗುರುವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಗೋವಿಂದಸ್ವಾಮಿ ಗುಂಡಾಪುರ ಅವರ 'ಗುಡಿಸಲಜ್ಯೋತಿ–ಪದ ಪಯಣ' ಪುಸ್ತಕ ಬಿಡುಗಡೆಗೊಳಿಸಿ ಅವರು ಮಾತನಾಡಿದರು.



ಮೈಸೂರಿನ ರಂಗಾಯಣದ ಬಿ.ವಿ.ಕಾರಂತ ರಂಗಚಾವಡಿಯಲ್ಲಿ ಗುರುವಾರ ಗುಡಿಸಲಜ್ಯೋತಿ ಪುಸ್ತಕ ಬಿಡುಗಡೆ ಮಾಡಲಾಯಿತು.

ಗುಡಿಸಲಜ್ಯೋತಿ ಕೃತಿಯಲ್ಲಿ ಹೆಚ್ಚು ವ್ಯಕ್ತಿನಿಷ್ಠ ಕವಿತೆಗಳಿಗೆ ಆದ್ಯತೆ ನೀಡಲಾಗಿದೆ. ಅವರೆಲ್ಲಾ ಸಾಮಾಜಿಕ ಪರಿವರ್ತನೆಗೆ ಶ್ರಮಿಸಿದ ನಾಯಕರು. ಇದಕ್ಕೆ ಪೂರಕವಾಗಿ ಗಮನ ಸೆಳೆಯಬೇಕಾದ ಅಂಶವೆಂದರೆ, ನಾವು ಇಂತಹ ಸಾಮಾಜಿಕ ಪರಿವರ್ತನೆಯ ಹರಿಕಾರರನ್ನು ಜಾತಿಗೆ ಸೀಮಿತಗೊಳಿಸಿದ್ದೇವೆ. ಒಂದೊಂದು ಜಾತಿಗೆ ಒಬ್ಬೊಬ್ಬ ನಾಯಕರನ್ನು ಗಂಟು ಹಾಕಿದ್ದೇವೆ. ಎಲ್ಲಿಯವರೆಗೆ ಈ ಸಾಂಸ್ಕೃತಿಕ ನಾಯಕರನ್ನು ಜಾತಿಯ ಕಗ್ಗಂಟಿನಿಂದ ಬಿಡುಗಡೆ ಮಾಡುವುದಿಲ್ಲವೋ ಅಲ್ಲಿಯವರೆಗೆ ಈ ಸಾಂಸ್ಕೃತಿಕ ನಾಯಕರ ಶಕ್ತಿ ವೃದ್ಧಿಸಲು ಸಾಧ್ಯವಿಲ್ಲ ಎಂದರು.

ಕನ್ನಡ ಸಂಸ್ಕೃತಿ ಇಲಾಖೆ ಸಹ ಇಂತಹ ಸಾಂಸ್ಕೃತಿಕ ನಾಯಕರ ಕಾರ್ಯಕ್ರಮಗಳನ್ನು ಸಂಯೋಜಿಸುವಾಗ ಜಾತಿಗೆ ಸೀಮಿತ ಮಾಡುತ್ತಿದೆ. ಇದರಿಂದ ಆ ಮಹನೀಯರ ವ್ಯಕ್ತಿತ್ವಕ್ಕೆ ಮಾತ್ರವಲ್ಲ, ಸಮಾಜಕ್ಕೂ ಕುಂದಾಗುತ್ತದೆ. ಬಸವಣ್ಣನವರ ಜಯಂತಿಯನ್ನು ನಾವು ಮಾಡುತ್ತೇವೆ. ಆದರೆ ಇತರರು ಅಂಬೇಡ್ಕರ್ ಜಯಂತಿ ಮಾಡುತ್ತಾರೆಯೇ ಎಂಬ ಪ್ರಶ್ನೆ ತಳಸಮುದಾಯಗಳ ಸಭೆಯಲ್ಲಿ ಬರುವುದನ್ನು ನೋಡಿದ್ದೇನೆ. ಆದರೆ ಈಗ ಕಾಲ ಬದಲಾಗಿದ್ದು, ಅಂಬೇಡ್ಕರ್ ಅವರ ಬಗ್ಗೆ ಈಗ ಇಡೀ ಭಾರತವೇ ಜೈಕಾರ ಹಾಕುತ್ತಿದೆ. ಸಂವಿಧಾನ ಬಗ್ಗೆ ಎಲ್ಲಾ ಸಮುದಾಯದವರು ಮಾತನಾಡಲು ಆರಂಭಿಸಿದ್ದಾರೆ. ಬುದ್ಧ, ಬಸವ ಮತ್ತು ಅಂಬೇಡ್ಕರ್ ಒಳಗೊಂಡಂತೆ ಕಾರ್ಯಕ್ರಮ ಆಯೋಜಿಸಲು ಶರಣ ಸಾಹಿತ್ಯ ಪರಿಷತ್ತು ಮುಂದಾಗಿದೆ ಈ ಸಂಬಂಧ ನಡೆದ ಸಭೆಯಲ್ಲಿ ನಾನು ಭಾಗವಹಿಸಿದ್ದೆ ಎಂದು ತಿಳಿಸಿದರು.

ಸಾಮಾನ್ಯವಾಗಿ ಗಂಭೀರ ಕಾವ್ಯ ಮತ್ತು ಜನಪ್ರಿಯ ಕಾವ್ಯ ಎಂದು ವರ್ಗೀಕರಣ ಮಾಡುತ್ತೇವೆ. ಗುಡಿಸಲಜ್ಯೋತಿ ಕೃತಿಯು ಜನಪ್ರಿಯ ಕಾವ್ಯವೋ ಅಲ್ಲ, ಗಂಭೀರ ಕಾವ್ಯವೋ ಅಲ್ಲ. ಮಧ್ಯಂತರ ಸ್ವರೂಪದಲ್ಲಿ ಮೂಡಿಬಂದಿದೆ. ಈಗಾಗಲೇ ಯೂಟ್ಯಾಬ್‌ನಲ್ಲಿ ಈ ಕವಿತೆಗಳು ಹರಿದಾಡುತ್ತಿವೆ. ಯೂಟ್ಯಾಬ್ ಅನ್ನು ಇಂದಿನ ಕವಿಗಳು ಅತ್ಯಂತ ಸಮರ್ಥವಾಗಿ ಬಳಸಿಕೊಳ್ಳುತ್ತಿದ್ದಾರೆ. ಸಾಮಾಜಿಕ ಮಾಧ್ಯಮಗಳ ಜೊತೆಗೆ ಸಾಧ್ಯವಾದಷ್ಟು ಬೆರೆತುಕೊಳ್ಳುವ ಅಗತ್ಯವಿದೆ ಎಂದರು.

ಬಿವಿಎಸ್ ಸಂಘಟನೆ ಬಹುಜನ ಪರಿಕಲ್ಪನೆ ಮೂಲಕ ಸಾಮಾಜಿಕ ಪರಿವರ್ತನೆಗೆ ಶ್ರಮಿಸಿದ ಹರಿಕಾರರನ್ನು ಸಮಾಜಕ್ಕೆ ತಲುಪಿಸಿದೆ. ಹೀಗಾಗಿ ಬಿವಿಎಸ್‌ಗೆ ಕೃತಜ್ಞತೆ ಹೇಳಬೇಕು. ಗುಡಿಸಲಜ್ಯೋತಿ ಸಂಕಲನ ಆ ಎಲ್ಲಾ ಹರಿಕಾರರನ್ನು ಪ್ರತಿನಿಧಿಸುತ್ತದೆ. ಬೋರ್ಡ್‌ನಲ್ಲಿ ಬಿವಿಎಸ್ ಸಂಘಟನೆಯವರು ಎಷ್ಟು ಮಹನೀಯರ ಚಿತ್ರಗಳನ್ನು ಹಾಕುತ್ತಾರೆಯೋ ಅದಕ್ಕಿಂತಲೂ ಹೆಚ್ಚಿನ ನಾಯಕರನ್ನು ಈ ಸಂಕಲನ ಪ್ರತಿನಿಧಿಸುತ್ತದೆ. ಸ್ವಾಮಿ ವಿವೇಕಾನಂದರ ಬಗ್ಗೆ ಕೂಡ ಇಲ್ಲಿ ಕವಿತೆಗಳಿವೆ ಎಂದು ತಿಳಿಸಿದರು.

ಸಮಾರಂಭ ಉದ್ಘಾಟಿಸಿದ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮಾತನಾಡಿ, ನಾಲ್ವಡಿ ಕೃಷ್ಣರಾಜ ಒಡೆಯರ್, ಶಾಹು ಮಹಾರಾಜ್, ನಾರಾಯಣಗುರು, ಟಿಪ್ಪು ಸುಲ್ತಾನ್, ಕಾನ್ಸಿರಾಂ, ಸಾವಿತ್ರಿ ಬಾಫುಲೆ, ಪೆರಿಯಾರ್, ಡಾ.ಬಿ.ಆರ್.ಅಂಬೇಡ್ಕರ್, ಬುದ್ಧ, ಬಸವಣ್ಣ, ಮಹದೇಶ್ವರ ಮೊದಲಾದ ದಾರ್ಶನಿಕರ ಬಗ್ಗೆ ಇಲ್ಲಿ ಕವನಗಳಿವೆ. ಪ್ರಸ್ತುತ ಸಮಾಜಕ್ಕೆ ಈ ಎಲ್ಲಾ ಮಹನೀಯರ ಆದರ್ಶಗಳು ಅಗತ್ಯ. ಸಮಾಜದ ಸಾಮರಸ್ಯ–ಸಹಬಾಳ್ವೆಗೆ ಪೂರಕವಾದ ವಿಚಾರಗಳನ್ನು ಈ ಸಂಕಲನದಲ್ಲಿ ಕಟ್ಟಿಕೊಡಲಾಗಿದೆ ಎಂದರು.

ಇದೇ ವೇಳೆ ಗಾಯನ ಕ್ಷೇತ್ರದ ಹತ್ತು ಹಲವು ಸಾಧಕರಿಗೆ 'ಪದಪಯಣ' ಪ್ರಶಸ್ತಿ ಪ್ರದಾನ ಮಾಡಲಾಯಿತು. ಗುಡಿಸಲ ಜ್ಯೋತಿ ಧ್ವನಿಸುರುಳಿಯನ್ನು ಪ್ರಗತಿಪರ ಚಿಂತಕ ಬಸವರಾಜು ದೇವನೂರು ಬಿಡುಗಡೆ ಮಾಡಿದರು. ಹಿರಿಯ ಸಾಹಿತಿ ಶಂಕನಪುರ ಮಹದೇವ, ಕೃತಿ ಕರ್ತೃ ಗೋವಿಂದ ಸ್ವಾಮಿ ಗುಂಡಾಪುರ ಮತ್ತಿತರರು ಹಾಜರಿದ್ದರು.

ಸಿಐಐಎಲ್‌ನಲ್ಲಿ ಇಂದಿನಿಂದ ಭಾಷಾ ಸಮ್ಮೇಳನ

ಮೈಸೂರು, ಏ.10(ಆರ್‌ಕೆ)–ಮೈಸೂರಿನ ಹುಣಸೂರು ರಸ್ತೆಯ ಭಾರತೀಯ ಭಾಷೆಗಳ ಕೇಂದ್ರ ಸಂಸ್ಥೆ (CIIL)ಯಲ್ಲಿ ನಾಳೆ (ಏ.11)ಯಿಂದ ಎರಡು ದಿನಗಳ 'ಭಾರತ ಒಂದು ಭಾಷಿಕ ಕ್ಷೇತ್ರ: ಅಂತಾರಾಷ್ಟ್ರೀಯ ನೋಟ' ಕುರಿತ ಅಂತಾರಾಷ್ಟ್ರೀಯ ಸಮ್ಮೇಳನ ನಡೆಯಲಿದೆ.

ಭಾರತ ಸರ್ಕಾರದ ಶಿಕ್ಷಣ ಮಂತ್ರಾಲಯ, ಉನ್ನತ ಶಿಕ್ಷಣ ಇಲಾಖೆ ಹಾಗೂ ಸಿಐಐಎಲ್ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಿರುವ ಸಮ್ಮೇಳನ ಶುಕ್ರವಾರ ಬೆಳಗ್ಗೆ 10 ಗಂಟೆಗೆ ಆರಂಭವಾಗಲಿದೆ. ಆಡಳಿತಗಾರರು, ಖ್ಯಾತ ವಿದ್ವಾಂಸರು ಹಾಗೂ ಹಿರಿಯ ಅಧಿಕಾರಿಗಳು ಸಮ್ಮೇಳನದಲ್ಲಿ ಭಾಗವಹಿಸುವರು ಎಂದು ಸಂಸ್ಥೆ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಪತ್ರಿಕೆಗಳು ಸಮಾಜದ ಪ್ರತಿಬಿಂಬದಂತೆ ಕೆಲಸ ಮಾಡುತ್ತಿವೆ

ಹಿರಿಯ ಪತ್ರಕರ್ತ ಡಾ.ಕೂಡ್ಲಿ ಗುರುರಾಜ

ಮೈಸೂರು,ಏ.10(ಎಂಟಿವೈ)– ಸಮಾಜದ ಪ್ರಚಲಿತ ವಿದ್ಯಮಾನಗಳ ಬಗ್ಗೆ ಬರಹಗಳ ಮೂಲಕ ಮತ್ತೆ ಸಮಾಜಕ್ಕೆ ತಿಳಿಸುವುದರಿಂದ ಪತ್ರಿಕೆಗಳು ಸಮಾಜದ ಪ್ರತಿಬಿಂಬದಂತೆ ಕೆಲಸ ಮಾಡುತ್ತಿವೆ ಎಂದು ಹಿರಿಯ ಪತ್ರಕರ್ತ ಡಾ.ಕೂಡ್ಲಿ ಗುರುರಾಜ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಮಹಾರಾಜ ಕಾಲೇಜಿನ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ ಹಾಗೂ ಐಕ್ಯೂಎಸಿ ಆಶ್ರಯದಲ್ಲಿ ಆಯೋಜಿಸಿದ್ದ 'ವ್ಯಕ್ತಿತ್ವ ವಿಕಸನ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಪತ್ರಿಕೆಗಳ ಪಾತ್ರ' ಕುರಿತು ಮಾತನಾಡಿದ ಅವರು, ಸ್ಪರ್ಧಾತ್ಮಕ ಪರೀಕ್ಷೆ ಬರೆಯುವ ಆಸಕ್ತಿ ಹೊಂದಿರುವವರ ಸಂಖ್ಯೆ ಹೆಚ್ಚಾಗಿದೆ. ಆದರೆ ಪ್ರತಿದಿನ ಪತ್ರಿಕೆಗಳನ್ನು ಓದುವವರ ಸಂಖ್ಯೆ ಬೆರಳೆಣಿಕೆಯಷ್ಟಿದೆ. ಹೀಗಾದರೆ ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸುವುದಾದರೂ ಹೇಗೆ ಎಂದು ಪ್ರಶ್ನಿಸಿದರು.



ಮಹಾರಾಜ ಕಾಲೇಜಿನ ಪತ್ರಿಕೋದ್ಯಮ–ಸಮೂಹ ಸಂವಹನ ವಿಭಾಗದಲ್ಲಿ ನಡೆದ ಉಪನ್ಯಾಸ ಕಾರ್ಯಕ್ರಮದಲ್ಲಿ ಪತ್ರಕರ್ತ ಡಾ.ಕೂಡ್ಲಿ ಗುರುರಾಜ ಮಾತನಾಡಿದರು.

ವಿದ್ಯಾರ್ಥಿಗಳು ಪ್ರತಿದಿನ ಪತ್ರಿಕೆಗಳನ್ನು ಓದಬೇಕು. ವ್ಯಕ್ತಿತ್ವ ವಿಕಸನಕ್ಕೆ ಇದು ಸಹಕಾರಿಯಾಗಲಿದೆ. ಪತ್ರಿಕೆ ಓದುವುದರಿಂದ ಬರವಣಿಗೆಯ ಕೌಶಲ ಬೆಳೆಯುತ್ತದೆ. ಪ್ರಚಲಿತ ವಿದ್ಯಮಾನಗಳ ಮಾಹಿತಿ ದೊರೆಯುತ್ತದೆ. ಸ್ಪರ್ಧಾತ್ಮಕ ಪರೀಕ್ಷೆಗೆ ಸಹಕಾರಿಯಾಗುತ್ತದೆ ಎಂದರು. ಪತ್ರಿಕೆಗಳನ್ನು ಸುಮ್ಮನೆ ಓದುವುದಲ್ಲ. ಅಧ್ಯಯನ ಮಾಡಬೇಕು. ವರದಿ, ಲೇಖನ, ಅಂಕಣ ಬರಹಗಳ ಶೈಲಿಯನ್ನು ಅರಿಯಬೇಕು. ವಿಷಯಗಳನ್ನು ತಿಳಿಯಬೇಕು. ಇದರಿಂದ ಯಾವುದೇ ವಿಷಯವನ್ನು ವಿಶ್ಲೇಷಣಾತ್ಮಕವಾಗಿ ನೋಡುವುದು ಸಾಧ್ಯವಾಗುತ್ತದೆ, ಬರವಣಿಗೆಯ ಕಲೆಯೂ ಸಿದ್ಧಿಸುತ್ತದೆ. ಇದು ಸ್ಪರ್ಧಾತ್ಮಕ ಪರೀಕ್ಷೆ ಎದುರಿಸಲು ನೆರವಾಗುತ್ತದೆ ಎಂದರು. ಬಳಿಕ ಕಾಲೇಜಿನ ಪ್ರತಿಕೋದ್ಯಮ ವಿಭಾಗದ ವಿದ್ಯಾರ್ಥಿಗಳೊಂದಿಗೆ ಸಂವಾದದಲ್ಲಿ ಪಾಲ್ಗೊಂಡು, ವಿದ್ಯಾರ್ಥಿಗಳು ಕೇಳಿದ ಪ್ರಶ್ನೆಗಳಿಗೆ ಉತ್ತರಿಸಿದರು. ಕಾಲೇಜಿನ ಪ್ರಾಂಶುಪಾಲ ಪ್ರೊ.ದೇವರಾಜೇಗೌಡ ಅಧ್ಯಕ್ಷತೆ ವಹಿಸಿದ್ದರು. ಆಡಳಿತಾಧಿಕಾರಿ ಪ್ರೊ.ಕೆ.ತಿಮ್ಮಯ್ಯ, ಐಕ್ಯೂಎಸಿ ಸಂಚಾಲಕ ಪ್ರೊ.ನಟರಾಜು, ಪತ್ರಿಕೋದ್ಯಮ ವಿಭಾಗದ ಉಪನ್ಯಾಸಕರಾದ ಡಾ.ಗೋಪಾಲ, ಡಾ.ಶ್ವೇತಾ, ಡಾ.ಆರ್.ರಾಘವೇಂದ್ರ, ಕೇಶವಮೂರ್ತಿ ಉಪಸ್ಥಿತರಿದ್ದರು.

ಜೀಪ್‌ನಲ್ಲಿ ಗನ್ ಹಿಡಿದು ರೀಲ್ಸ್; ಯುವಕನ ವಿರುದ್ಧ ಎಫ್‌ಐಆರ್ ದಾಖಲು

ಮೈಸೂರು, ಏ.10(ಆರ್‌ಕೆ)–ಜೀಪ್ ಮೇಲೆ ನಿಂತು ಗನ್ ಹಿಡಿದು ಅಪಾಯಕಾರಿ ರೀಲ್ಸ್ ಮತ್ತು ವಿಡಿಯೋ ಮಾಡಿದ್ದ ಬೋಗಾದಿ 2ನೇ ಹಂತದ ನಿವಾಸಿ ವಿನೋದ್ ವಿರುದ್ಧ ಮೈಸೂರಿನ ಕೆ.ಆರ್. ಸಂಚಾರ ಠಾಣೆ ಪೊಲೀಸರು ಏಪ್ರಿಲ್ 8ರಂದು ಎಫ್‌ಐಆರ್ ದಾಖಲಿಸಿದ್ದಾರೆ.

ಬಿಳಿ ಬಣ್ಣದ ಕೆಎ 09, ಎಂಇ 8277 ಸಂಖ್ಯೆಯ ಮಹೀಂದ್ರ ಜೀಪ್ ಬಾನೆಟ್ ಮೇಲೆ ನಿಂತು ಸಾರ್ವಜನಿಕರಿಗೆ ಅಪಾಯಕಾರಿ ಮತ್ತು ಜೀವಹಾನಿಯಾಗುವಂತೆ ರಸ್ತೆಯಲ್ಲಿ ಚಾಲನೆ ಮಾಡಿಕೊಂಡು ಆರ್‌ಟಿ ನಗರ ಬಳಿ ರಿಂಗ್ ರಸ್ತೆಯಲ್ಲಿ ಓಡಾಡುತ್ತಿದ್ದ ದೃಶ್ಯವನ್ನು ರೀಲ್ಸ್ ಮಾಡಿ ಸಾಮಾಜಿಕ ಜಾಲತಾಣದಲ್ಲಿ ಹರಿಬಿಡಲಾಗಿತ್ತು.

ಅದರಿಂದ ಎಚ್ಚೆತ್ತ ಕೆ.ಆರ್.ಸಂಚಾರ ಠಾಣೆ ಪೊಲೀಸರು ಜೀಪ್ ನಂಬರ್‌ನ ಆರ್‌ಸಿ ಮಾಲೀಕರಾದ ಸರಸ್ವತಿಪುರಂ 1ನೇ ಕ್ರಾಸ್ ನಿವಾಸಿ ಎಂ.ಲೋಕೇಶ್‌ರನ್ನು ಭೇಟಿ ಮಾಡಿ ರೀಲ್ಸ್ ವಿಡಿಯೋ ತೋರಿಸಲಾಗಿ, ಜೀಪ್ ತಮ್ಮದೇ ಆಗಿದ್ದು, ಮಹೇಶ್ ಎಂಬುವರಿಂದ ತಾವು ಇತ್ತೀಚೆಗೆ ಖರೀದಿಸಿರುವುದಾಗಿ ತಿಳಿಸಿದ್ದಾರೆ.

ನಂತರ ಮಹೇಶ್ ವಿಳಾಸಕ್ಕೆ ಹೋಗಿ ವಿಚಾರ ಮಾಡಿದಾಗ ಜೀಪ್ ಚಾಲನೆ ಮಾಡುತ್ತಿರುವುದು ತನ್ನ ಸ್ನೇಹಿತ ಬೋಗಾದಿ 2ನೇ ಹಂತದ ಇರಿಗೇಷನ್ ಲೇಔಟ್ ನಿವಾಸಿ ವಿನೋದ್ ಎಂಬ ಮಾಹಿತಿ ನೀಡಿದರು. ತಕ್ಷಣ ಆತನನ್ನು ಭೇಟಿ ಮಾಡಿದ ಪೊಲೀಸರಿಗೆ 2021ರಲ್ಲಿ ನಾನೇ ಕೆಎ 09, ಎಂಇ 8277ರ ಬಿಳಿ ಬಣ್ಣದ ಮಹೀಂದ್ರ ಜೀಪ್ ಅನ್ನು ಇನ್‌ಸ್ಟಾಗ್ರಾಂನಲ್ಲಿ ಹಾಕಲು ಆರ್‌ಟಿ ನಗರ ಬಳಿ ರಿಂಗ್ ರಸ್ತೆಯಲ್ಲಿ ಗನ್ ಹಿಡಿದು ರೀಲ್ಸ್ ಮಾಡಿದ್ದಾಗಿ ವಿನೋದ್ ಒಪ್ಪಿಕೊಂಡಿದ್ದಾನೆ. ಜೀಪ್ ಅನ್ನು ವಶಕ್ಕೆ ಪಡೆದ ಕೆ.ಅರ್.ಸಂಚಾರ ಠಾಣೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಪೊಲೀಸರಿಗೆ ಹೆದರಿ ಹೆಲ್ಮೆಟ್ ಧರಿಸುವುದಲ್ಲ; ನಿಮ್ಮ ಅಮೂಲ್ಯ ಪ್ರಾಣ ರಕ್ಷಣೆಗೆ ಧರಿಸಿ

ಮೈಸೂರು, ಏ.10(ಆರ್‌ಕೆ)–ಪೊಲೀಸರಿಗೆ ಹೆದರಿ ಕಾನೂನು ಪಾಲನೆ ಮಾಡುವುದಲ್ಲ, ಸಿಸಿ ಕ್ಯಾಮರಾ ಫೋಟೋ ಕ್ಲಿಕ್ಕಿಸುತ್ತವೆ, ದಂಡ ಕಟ್ಟಬೇಕಾಗುತ್ತದೆ ಎಂಬ ಕಾರಣಕ್ಕಾಗಿ ಹೆಲ್ಮೆಟ್, ಸೀಟ್ ಬೆಲ್ಟ್ ಧರಿಸುವುದಲ್ಲ, ಬದಲಾಗಿ ನಿಮ್ಮ ಅಮೂಲ್ಯ ಪ್ರಾಣ ರಕ್ಷಣೆಗಾಗಿ ಸಂಚಾರ ನಿಯಮ ಪಾಲಿಸಿ, ವಾಹನ ಚಾಲನೆ ಮಾಡಿ ಎಂದು ಮೈಸೂರು ನಗರ ಪೊಲೀಸ್ ಕಮಿಷ್ನರ್ ಸೀಮಾ ಲಾಟ್ಕರ್ ಸಾರ್ವಜನಿಕರಿಗೆ ಕಿವಿಮಾತು ಹೇಳಿದ್ದಾರೆ.

ಸಂಚಾರ ನಿಯಮ ರೂಪಿಸಿರುವುದು ತೆರಿಗೆ ಪಾವತಿಸುವ ಪ್ರತಿಯೊಬ್ಬ ನಾಗರಿಕನ ಹಿತ ಕಾಯುವುದಕ್ಕಾಗಿ. ವಾಹನ ಮಾಲೀಕರು, ಚಾಲಕರು ಹಾಗೂ ಸಾರ್ವಜನಿಕರಿಗೆ ಉತ್ತಮ ರಸ್ತೆ, ಅಪಘಾತ ರಹಿತ ಸುರಕ್ಷಾ ಸಂಚಾರ ವ್ಯವಸ್ಥೆಯನ್ನು ಜಾರಿಗೊಳಿಸಿರುವುದು ಮನುಷ್ಯನ ಅಮೂಲ್ಯ ಜೀವ, ಜೀವನ ಉಳಿಸುವುದಕ್ಕಾಗಿ ಎಂದು ತಿಳಿಸಿದರು.

ಸಂಚಾರ ನಿಯಮಗಳನ್ನು ಕಟ್ಟುನಿಟ್ಟಾಗಿ ಅನುಸರಿಸಿದರೆ, ನೀವು ಸುರಕ್ಷಿತ, ಇತರರಿಗೂ ನಿಮ್ಮಿಂದ ತೊಂದರೆಯಾಗುವುದಿಲ್ಲ. ಆಗ ನೀವು ತಲುಪಬೇಕೆಂದಿರುವ ಸ್ಥಳವನ್ನು ಸುರಕ್ಷಿತವಾಗಿ ತಲುಪಲು ಸಾಧ್ಯ. ಮನೆಯಿಂದ ಹೊರಡುವ ಪ್ರತಿಯೊಬ್ಬ ವ್ಯಕ್ತಿಗೂ ಅಪ್ಪ–ಅಮ್ಮ, ಹೆಂಡತಿ–ಮಕ್ಕಳು, ಸಂಬಂಧಿಕರು ಇರುತ್ತಾರೆ. ನೀವು ಸುರಕ್ಷಿತವಾಗಿ ಹಿಂದಿರುಗಬೇಕೆಂದು ಕಾದು ಎದುರು ನೋಡುತ್ತಿರುತ್ತಾರೆ ಎಂದು ಸೀಮಾ ಲಾಟ್ಕರ್ ಸಾರ್ವಜನಿಕರಿಗೆ ಸಲಹೆ ನೀಡಿದ್ದಾರೆ.



ಸಂಚಾರ ಪೊಲೀಸರಿಂದ ಹೆಲ್ಮೆಟ್ ಧರಿಸುವ ಬಗ್ಗೆ ಜಾಗೃತಿ ಮೂಡಿಸಲಾಯಿತು

ಹೆಲ್ಮೆಟ್, ಸೀಟ್ ಬೆಲ್ಟ್ ಧರಿಸುವುದು ನಿಮಗೆ ಏನೂ ಆಗಬಾರದೆಂಬ ಉದ್ದೇಶಕ್ಕೇ ಹೊರತು, ಪೊಲೀಸರಿಗೆ ಹೆದರಿ, ಸಿಸಿ ಕ್ಯಾಮರಾ ಕಣ್ಣುಗಳಿಂದ ರಕ್ಷಿಸಿಕೊಳ್ಳುವುದಕ್ಕಾಗಲೀ ಅಥವಾ ದಂಡ ಪಾವತಿಸಬೇಕೆಂಬ ಕಾರಣಕ್ಕಲ್ಲ. ಸರ್ಕಾರಕ್ಕೆ, ಇಲಾಖೆಗೆ ವರಮಾನ ಸೃಜಿಸಲೋಸುಗ ಸಂಚಾರ ಪೊಲೀಸರು ಕೇಸ್ ಹಾಕುತ್ತಿದ್ದಾರೆ ಎಂಬ ಭಾವನೆ ಇದ್ದರೆ ಅದನ್ನು ಮರೆತುಬಿಡಿ ಎಂದು ಪೊಲೀಸ್ ಕಮಿಷ್ನರ್ ತಿಳಿಸಿದ್ದಾರೆ.

ನಿಮ್ಮ ಅತೀ ವೇಗ, ಅಜಾಗರೂಕ ಚಾಲನೆ ಅಥವಾ ರಸ್ತೆ ಸಮಸ್ಯೆಯೋ ಇಲ್ಲಾ, ಇನ್ನಿತರ ಕಾರಣಗಳಿಂದಾಗಿ ರಸ್ತೆ ಅಪಘಾತಗಳು ಸಂಭವಿಸುತ್ತವೆ. ಅದರಲ್ಲಿ ಯಾವುದೇ ಉದ್ದೇಶವಿರುವುದಿಲ್ಲ. ನೀವು ಎಚ್ಚೆತ್ತರೆ, ಅಪಘಾತವಾಗುವುದನ್ನು ತಪ್ಪಿಸಬಹುದು. ಅಥವಾ ದೊಡ್ಡ ಪ್ರಮಾಣದಲ್ಲಾಗುವ ತೊಂದರೆಯನ್ನು ನಿಯಂತ್ರಿಸಬಹುದು ಎಂದು ಮೈಸೂರು ನಗರ ಸಂಚಾರ ವಿಭಾಗದ ಎಸಿಪಿ ಎಂ.ಶಿವಶಂಕರ್ ಅಭಿಪ್ರಾಯಪಟ್ಟಿದ್ದಾರೆ.

ಆಕಸ್ಮಿಕವಾಗಿ ಸಂಭವಿಸುವ ಅಪಘಾತಗಳಿಂದ ಸಾವು–ನೋವುಗಳಾಗುತ್ತವೆ. ಕೆಲವರು ಶಾಶ್ವತ ಅಂಗವಿಕಲರಾಗುತ್ತಾರೆ. ತಲೆಗೆ ಪೆಟ್ಟಾದರೆ ಮಾನಸಿಕ ರೋಗಿಯಾಗುವುದುಂಟು. ಕುಟುಂಬದಲ್ಲಿ ದುಡಿಯುವ ವ್ಯಕ್ತಿ ಸಾವನ್ನಪ್ಪಿದರೆ ಅಥವಾ ಅಂಗವಿಕಲನಾದರೆ, ಅವಲಂಬಿತ ಕುಟುಂಬದ ಸದಸ್ಯರು ತೀವ್ರ ಸಂಕಷ್ಟಕ್ಕೆ ಸಿಲುಕಿ ಜೀವನ ಮೂರಾಬಟ್ಟೆಯಾಗುತ್ತದೆ ಎಂದು ಅವರು ಭಾವನಾತ್ಮಕವಾಗಿ ಹೇಳಿದರು.

ಕೆಲವರು ಮುಂದೆ ಪೊಲೀಸರ ಕಂಡಾಗ ಹೆಲ್ಮೆಟ್, ಸೀಟ್ ಬೆಲ್ಟ್ ಧರಿಸಿ, ಸ್ವಲ್ಪ ದೂರ ಹೋಗುತ್ತಿದ್ದಂತೆಯೇ ತೆಗೆದು ಯಥಾಸ್ಥಿತಿಯಲ್ಲಿ ಸಾಗುತ್ತಾರೆ. ಅದೇ ಮಾರ್ಗ ನಿಮಗೆ ಮೃತ್ಯುಕೂಪವಾಗಲೂ ಬಹುದು ಎಂದಿರುವ ಶಿವಶಂಕರ್, ದಯಮಾಡಿ ನಿಮ್ಮ ಜೀವ ರಕ್ಷಣೆಗಾಗಿ ಸಂಚಾರ ನಿಯಮವನ್ನು ಕಟ್ಟುನಿಟ್ಟಾಗಿ ಪಾಲಿಸಿ ಎಂದು ಸಲಹೆ ನೀಡಿದ್ದಾರೆ.

ಈ ಕುರಿತು ಮೈಸೂರಲ್ಲಿ ಸಿಗ್ನಲ್ ಲೈಟ್ ಸರ್ಕಲ್‌ಗಳಲ್ಲಿ ನಿಂತು ಘೋಷಣಾ ಫಲಕ ಪ್ರದರ್ಶಿಸುತ್ತಿರುವ ನಗರ ಸಂಚಾರ ಪೊಲೀಸರು, ಹೆಲ್ಮೆಟ್, ಸೀಟ್ ಬೆಲ್ಟ್ ಧರಿಸಿ, ಮದ್ಯಪಾನ ಮಾಡಿ ವಾಹನ ಚಾಲನೆ ಮಾಡಬೇಡಿ. ಪ್ರಕರಣ ದಾಖಲಿಸಿ ದಂಡ ವಸೂಲಿ ಮಾಡುವುದು ನಮ್ಮ ಉದ್ದೇಶವಲ್ಲ. ನಿಮ್ಮ ಪ್ರಾಣ ಉಳಿಸುವ ಸಲುವಾಗಿ ನಿಯಮ ವಿಧಿಸುತ್ತಿದ್ದೇವೆ ಎಂದ ಅವರು, ನಮ್ಮ ನೆಲದ ಕಾನೂನಿಗೆ ಗೌರವ ಕೊಟ್ಟು ಪಾಲನೆ ಮಾಡಿ ಎಂದು ತಿಳಿಸಿದ್ದಾರೆ.

ಡಿಸಿಎಂ ಡಿಕೆಶಿಗೆ ಆಹ್ವಾನ...



ಮುಂದಿನ ಭಾನುವಾರ (ಏ.13) ಏರ್ಪಡಿಸಿರುವ ಸಿಐಟಿಬಿ ಮಾಜಿ ಅಧ್ಯಕ್ಷರೂ ಆದ ಮಾಜಿ ಎಂಎಲ್‌ಸಿ ಡಿ.ಮಾದೇಗೌಡರ ಅಭಿನಂದನಾ ಕಾರ್ಯಕ್ರಮಕ್ಕೆ ಉಪಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರಿಗೆ ಗುರುವಾರ ಆಹ್ವಾನ ನೀಡಲಾಯಿತು. ಈ ವೇಳೆ ಮುಖಂಡರಾದ ದೇವಿಪ್ರಸಾದ್, ರವಿ ಮಂಚೇಗೌಡನ ಕೊಪ್ಪಲು, ಚೇತನ್ ವಿಷಕಂಠೇಗೌಡ, ಬಸವೇಗೌಡ, ಪಾರ್ಥಸಾರಥಿ ಉಪಸ್ಥಿತರಿದ್ದರು.

ಪದವಿಪೂರ್ವ ಶಿಕ್ಷಣ ಇಲಾಖೆಯಿಂದ ವಿಶೇಷ ಪರಿಹಾರ ಬೋಧನೆ

ಸುತ್ತೋಲೆ ಹಿಂಪಡೆಯುವಂತೆ ಎಂಎಲ್‌ಸಿ ವಿವೇಕಾನಂದ ಮನವಿ

ಶಿಕ್ಷಣ ಸಚಿವರಿಂದ ಸಕಾರಾತ್ಮಕ ಸ್ಪಂದನೆ

ಮೈಸೂರು, ಏ.10– ಪದವಿಪೂರ್ವ ಶಿಕ್ಷಣ ಇಲಾಖೆಯನ್ನು 'ರಜೆ ರಹಿತ ಇಲಾಖೆ' ಎಂದು ಪರಿಗಣಿಸಬೇಕು ಇಲ್ಲವೇ ವಿಶೇಷ ಪರಿಹಾರ ಬೋಧನೆ ನಡೆಸಬೇಕೆಂಬ ಸುತ್ತೋಲೆಯನ್ನು ಹಿಂಪಡೆಯಬೇಕೆಂಬ ಮನವಿಗೆ ಶಿಕ್ಷಣ ಸಚಿವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದು ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದ ತಿಳಿಸಿದ್ದಾರೆ.



ಕೆ.ವಿವೇಕಾನಂದ

ಪದವಿಪೂರ್ವ ಶಿಕ್ಷಣ ಇಲಾಖೆಯಲ್ಲಿ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ವಾರ್ಷಿಕ ಮೂರು ಪರೀಕ್ಷೆಗಳನ್ನು ನಡೆಸಲು ಪ್ರಾರಂಭಿಸಿದಾಗಿನಿಂದ ಉಪನ್ಯಾಸಕರ ಮೇಲೆ ಕಾರ್ಯಭಾರದ ಒತ್ತಡ ವಿಪರೀತವಾಗುತ್ತಿದೆ. ಪದವಿಪೂರ್ವ ಶಿಕ್ಷಣ ಇಲಾಖೆ ರಜೆ ಸಹಿತ ಇಲಾಖೆಯಾಗಿರುವುದರಿಂದ ಪ್ರತಿ ಶೈಕ್ಷಣಿಕ ಸಾಲಿನಲ್ಲಿ ದಸರಾ ಹಾಗೂ ಬೇಸಿಗೆ ರಜೆ ಪಡೆಯುವುದು ಉಪನ್ಯಾಸಕರ ಹಕ್ಕಾಗಿರುತ್ತದೆ. ಆದರೆ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ–1ರ ಪರೀಕ್ಷಾ ಕಾರ್ಯ ಮತ್ತು ಮೌಲ್ಯಮಾಪನ ಕಾರ್ಯ ಮುಗಿಸಿ ವಿಶ್ರಾಂತಿ ಪಡೆಯುತ್ತಿರುವಾಗಲೇ ಇಲಾಖೆ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ವಿಶೇಷ ಪರಿಹಾರ ಬೋಧನೆ ನಡೆಸಲು ಸುತ್ತೋಲೆ ಹೊರಡಿಸಿದೆ. ಪರೀಕ್ಷೆ–2ರ ಪರೀಕ್ಷಾ ಕಾರ್ಯ ನಿರ್ವಹಿಸಿ, ಮೌಲ್ಯಮಾಪನ ಕಾರ್ಯ ಮಾಡಬೇಕಿರುವುದರಿಂದ ಉಪನ್ಯಾಸಕರಿಗೆ ಯಾವುದೇ ರಜೆ ದೊರೆಯುವುದಿಲ್ಲ. ಈ ಮೂಲಕ ಅವರ ರಜೆಯ ಹಕ್ಕನ್ನು ಕಸಿದಂತಾಗುತ್ತದೆ.

ಆದ್ದರಿಂದ ಪದವಿಪೂರ್ವ ಶಿಕ್ಷಣ ಇಲಾಖೆಯನ್ನು 'ರಜೆ ರಹಿತ ಇಲಾಖೆ' ಎಂದು ಪರಿಗಣಿಸಿ, ರಜೆ ರಹಿತ ಇಲಾಖಾ ನೌಕರರಿಗೆ ಸಿಗುವ ಎಲ್ಲಾ ಸವಲತ್ತುಗಳನ್ನು ಉಪನ್ಯಾಸಕರಿಗೂ ಕಲ್ಪಿಸಬೇಕು. ಇಲ್ಲವೇ ವಿಶೇಷ ಪರಿಹಾರ ಬೋಧನೆ ನಡೆಸಬೇಕೆಂಬ ಸುತ್ತೋಲೆಯನ್ನು ಹಿಂಪಡೆಯಲು ನಿರ್ದೇಶನ ನೀಡಬೇಕೆಂದು ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರಿಗೆ ಪತ್ರ ಬರೆಯುವುದರ ಜೊತೆಗೆ ದೂರವಾಣಿ ಮೂಲಕವೂ ಮನವಿ ಮಾಡಲಾಗಿದೆ. ಸಕಾರಾತ್ಮಕವಾಗಿ ಸ್ಪಂದಿಸಿದ ಶಿಕ್ಷಣ ಸಚಿವರು, ತಾವು ವಿದೇಶದಲ್ಲಿದ್ದು ಉಪನ್ಯಾಸಕರುಗಳ ಬೇಡಿಕೆಗಳನ್ನು ಸೂಕ್ತ ಕ್ರಮಕ್ಕಾಗಿ ಆರ್ಥಿಕ ಇಲಾಖೆಗೆ ಕಳುಹಿಸಿಕೊಟ್ಟು ಅನುಕೂಲ ಮಾಡಿಕೊಡುವ ಭರವಸೆ ನೀಡಿದ್ದಾರೆ. ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಿಗೂ ಮನವಿ ನೀಡಲಾಗಿದ್ದು, ಸೂಕ್ತ ಕ್ರಮ ಕೈಗೊಳ್ಳುವ ವಿಶ್ವಾಸವಿದೆ ಎಂದು ಕೆ.ವಿವೇಕಾನಂದ ವಿವರಿಸಿದ್ದಾರೆ.

108 ಆಂಬುಲೆನ್ಸ್ ಸೇವೆ ಸರ್ಕಾರದಿಂದ ನಿರ್ವಹಣೆ ಚಿಂತನೆ

ಚಿಂತಾಮಣಿ, ಏ.10–ಸಿಬ್ಬಂದಿ ಕೊರತೆ ಮತ್ತು ಸರಿಯಾದ ನಿರ್ವಹಣೆಯಿಲ್ಲದೆ ಅಪಕೀರ್ತಿಗೆ ಒಳಗಾಗಿರುವ 108 ಆಂಬುಲೆನ್ಸ್ ತುರ್ತು ಸೇವೆ ವ್ಯವಸ್ಥೆಯನ್ನು ರಾಜ್ಯ ಸರ್ಕಾರವೇ ನಿರ್ವಹಿಸಲು ಮುಂದಾಗಿದೆ. ಆರೋಗ್ಯ ಸಚಿವ ದಿನೇಶ್ ಆರ್.ಗುಂಡೂರಾವ್ ಅವರು ಈ ವಿಷಯವನ್ನು ತಿಳಿಸಿದ್ದು, ರಾಜ್ಯದಲ್ಲಿ 108 ಆಂಬುಲೆನ್ಸ್ ತುರ್ತು ಆಂಬುಲೆನ್ಸ್ ಸೇವೆಯನ್ನು ರಾಜ್ಯ ಸರ್ಕಾರವೇ ನಿರ್ವಹಿಸಲು ನಿರ್ಧರಿಸಿದ್ದು, ಈಗಾಗಲೇ ಚಾಮರಾಜನಗರ ಜಿಲ್ಲೆಯಲ್ಲಿ ಪ್ರಾಯೋಗಿಕ ಪರೀಕ್ಷೆ ನಡೆಯುತ್ತಿದೆ. ಇದು ಯಶಸ್ವಿಯಾದರೆ ಇಡೀ ರಾಜ್ಯದಲ್ಲಿ 108 ಆಂಬುಲೆನ್ಸ್ ತುರ್ತು ಸೇವೆಯನ್ನು ರಾಜ್ಯ ಸರ್ಕಾರದ ವತಿಯಿಂದ ನಡೆಸಲಾಗುವುದು ಎಂದರು.

ರಾಜ್ಯ ಸರ್ಕಾರವೇ ಈ ಸೇವೆಯನ್ನು ಜಿವಿಕೆ ಸೇರಿದಂತೆ ಯಾವುದೇ ಸಂಸ್ಥೆಗಳಿಗೆ ಟೆಂಡರ್ ನೀಡದೆ ನಿರ್ವಹಣೆ ಮಾಡಲಿದೆ ಎಂದ ಸಚಿವರು, ಇದಕ್ಕಾಗಿ ಜಿಲ್ಲಾ ಕೇಂದ್ರಗಳಲ್ಲಿ ಕಂಟ್ರೋಲ್ ರೂಂ ತೆರೆಯಲಾಗುವುದು ಎಂದರು.

ಜಿವಿಕೆ ಸಂಸ್ಥೆಯು 108 ಆಂಬುಲೆನ್ಸ್ ತುರ್ತು ಸೇವೆಯನ್ನು ಟೆಂಡರ್ ಪಡೆದು ನಿರ್ವಹಿಸುತ್ತಿದ್ದು, ಸಿಬ್ಬಂದಿ ಕೊರತೆ, ವೇತನ ಸಮಸ್ಯೆ, ಚಾಲಕ ಮತ್ತು ಸಿಬ್ಬಂದಿ ಕೊರತೆಯಿಂದ ಸಕಾಲಕ್ಕೆ ರೋಗಿಗಳಿಗೆ ತುರ್ತು ಸೇವೆ ಒದಗಿಸುವಲ್ಲಿ ವಿಫಲವಾಗಿದೆ ಎಂಬ ವ್ಯಾಪಕ ದೂರುಗಳು ಕೇಳಿ ಬಂದ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ತಾನೇ ಇದನ್ನು ನಿರ್ವಹಿಸಲು ಮುಂದಾಗಿದೆ ಎಂದು ಉನ್ನತ ಮೂಲಗಳಿಂದ ತಿಳಿದು ಬಂದಿದೆ. ಇದರ ಜೊತೆಗೆ ತಮ್ಮ ಬೇಡಿಕೆ ಈಡೇರಿಸುವಂತೆ 108 ಆಂಬುಲೆನ್ಸ್ ಸಿಬ್ಬಂದಿ ತಮ್ಮ ಸೇವೆಯನ್ನು ಸ್ಥಗಿತಗೊಳಿಸಿ ಪ್ರತಿಭಟನೆ ನಡೆಸಿದ್ದರಲ್ಲದೆ, ಮುಂದೆಯೂ ಪ್ರತಿಭಟನೆಗೆ ಮುಂದಾಗುವುದಾಗಿ ಎಚ್ಚರಿಕೆ ನೀಡಿದ್ದ ಹಿನ್ನೆಲೆಯಲ್ಲಿ ಸರ್ಕಾರ ಈ ನಿರ್ಧಾರಕ್ಕೆ ಬಂದಿದೆ ಎನ್ನಲಾಗಿದೆ.

PUBLIC NOTICE

NOTICE hereby given that my client has entered in to sale agreement with M/s Akanda Sai Construction Private Ltd. represented by Mr. Ramanagara Thimmegowda Yogaraj, Mr. Shantharaj P Pola and Mrs. Taramathi Shantharaj Pola as the Vendor and M/s Jinansh Ventures LLP as the confirming party in respect of few of the flats bearing No. A1, A6, B-2, B 4, B14, C4, C-5 and C-9 of the apartment Building Known as Sri Sai Yoga Residency constructed on Property bearing Survey No. 20/(1B,2,3,4) & Site No.304 of Dattagalli, next to MUDA Employees Housing Layout. It has come to our client's knowledge that the Vendor is trying to sell these flats to the third parties at large without fulfilling the terms and conditions of the sale agreement, I am here with issuing this public Notice in this regard on behalf of the agreement holders. If any person planning to purchase or registering the said properties in their name without the knowledge or consent of the agreement holders will be treated as null and void any such purchase will be treated as void, if any person having interest or claims over the said properties are hereby requested to contact undersigned at **"Vikalpa Legal Solutions" Office: No. 2796, 1st Floor, 2nd Main, between 3rd & 4th Cross, Jayanagara, Mysore - 570014,** Phone No. **0821-3567401** within 7days from the date of publication hereof, with relevant documents failing which it will be deemed as my clients are the legal agreement holders, thus having interest and claims over the title of these properties; any claim or objection received in respect of the properties without any reference or after 7 days of this Notice will not be binding over the schedule property or my client, such claims and the claims if any, shall be deemed to have been given up or waived.

Advocate, UM Kalpana
Mobile: +91 9686667699
Place: Mysore Date: 10-04-2025

ಗೌರವಾನ್ವಿತ ಉಪ ವಿಭಾಗಾಧಿಕಾರಿರವರ ನ್ಯಾಯಾಲಯ, ಹುಣಸೂರು

ಹಳೇ ಪ್ರಕರಣದ ಸಂಖ್ಯೆ: ಎಸ್.ಪಿ.ಟಿ. 3/1993–94
ಹೊಸ ಪ್ರಕರಣದ ಸಂಖ್ಯೆ: ಎಸ್.ಪಿ.ಟಿ. 23/2023–24
ಅರ್ಜಿದಾರರು: ದಾಸಬೋವಿ ಮತ್ತು ದಾಸಮ್ಮ
ವಿರುದ್ಧ
ಎದುರುದಾರರು: ಚಿನ್ನಮ್ಮ ಮತ್ತು ಇತರರು

2(ಎ), 4(ಸಿ), 5(ಬಿ) ನೇ ಎದುರುದಾರರ ಕಾನೂನು ಬದ್ಧ ವಾರಸುದಾರರು ; 2(ಎ)i ಸಣ್ಣಕ್ಕ ಬಿನ್ ಮೋಟೇಗೌಡ, ವಯಸ್ಸು 53 ವರ್ಷ ; 2(ಎ)ii ಮುದ್ದಮ್ಮ ಬಿನ್ ಮೋಟೇಗೌಡ, ವಯಸ್ಸು 43 ವರ್ಷ ; 2(ಎ)iii ಪುಟ್ಟಮ್ಮ ಬಿನ್ ಮೋಟೇಗೌಡ, ವಯಸ್ಸು 41 ವರ್ಷ ; 2(ಎ)iv ರಾಮೇಗೌಡ ಬಿನ್ ಮೋಟೇಗೌಡ, ವಯಸ್ಸು 55 ವರ್ಷ ; 2(ಎ)v ಅಯ್ಯಗೌಡ ಬಿನ್ ಮೋಟೇಗೌಡ, ವಯಸ್ಸು 51 ವರ್ಷ ; 4(ಸಿ)ii ಮಾಳಗಮ್ಮ ಕೋಂ ಲೇಟ್ ಕಂಚೀಗೌಡ, ವಯಸ್ಸು 68 ವರ್ಷ ; 4(ಸಿ)iii ಮಹದೇವಗೌಡ ಬಿನ್ ಲೇಟ್ ಕಂಚೀಗೌಡ, ವಯಸ್ಸು 28 ವರ್ಷ ; 4(ಸಿ)iv ಮಂಜ ಬಿನ್ ಲೇಟ್ ಕಂಚೀಗೌಡ, ವಯಸ್ಸು 33 ವರ್ಷ ; 4(ಸಿ)v ರವಿ ಬಿನ್ ಲೇಟ್ ಕಂಚೀಗೌಡ, ವಯಸ್ಸು 25 ವರ್ಷ ; 5(ಬಿ)i ರತ್ನಮ್ಮ ಕೋಂ ಲೇಟ್ ಶಿವಣ್ಣೇಗೌಡ, ವಯಸ್ಸು 63 ವರ್ಷ ; 5(ಬಿ)ii ರಮೇಶ ಬಿನ್ ಲೇಟ್ ಶಿವಣ್ಣೇಗೌಡ, ವಯಸ್ಸು 48 ವರ್ಷ ; 5(ಬಿ)iii ಪ್ರಸನ್ನ ಬಿನ್ ಲೇಟ್ ಶಿವಣ್ಣೇಗೌಡ, ವಯಸ್ಸು 46 ವರ್ಷ.

ಎಲ್ಲಾರ ವಾಸ: ಹೊನ್ನಿಕುಪ್ಪೆ ಗ್ರಾಮ, ಸಿಬಿಟಿ ಕಾಲೋನಿ, ಕಸಬಾ ಹೋಬಳಿ, ಹುಣಸೂರು ತಾಲ್ಲೂಕು.

ಸಾರ್ವಜನಿಕ ಪತ್ರಿಕಾ ಪ್ರಕಟಣೆ

ಈ ಮೂಲಕ ಎದುರುದಾರರುಗಳಾದ ನಿಮ್ಮಗಳಿಗೆ ತಿಳಿಯಪಡಿಸುವುದೇನೆಂದರೆ, ಈ ಪ್ರಕರಣದ ಅರ್ಜಿದಾರರು ನಿಮ್ಮ ಮೇಲೆ ಎಸ್.ಪಿ.ಟಿ. ಕಾಯ್ದೆಯಡಿ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯು ದಿನಾಂಕ 21–04–25ರಂದು ಸಮಯ 3.00 ಗಂಟೆಗೆ ನಿಮ್ಮ ಹಾಜರಾತಿಗಾಗಿ ದಿನಾಂಕ ನಿಗಧಿಪಡಿಸಿದ್ದು, ಆ ದಿನ ನೀವುಗಳು ಖುದ್ದಾಗಿ ಅಥವಾ ನಿಮ್ಮ ವಕೀಲರ ಮೂಲಕ 21–04–25 ಸದರಿ ದಿನಾಂಕದಂದು ನ್ಯಾಯಾಲಯಕ್ಕೆ ಹಾಜರಾಗಬೇಕಾಗಿ ತಿಳಿಯಪಡಿಸಲಾಗಿದೆ. ತಪ್ಪಿದಲ್ಲಿ ನಿಮ್ಮಗಳ ವಿರುದ್ಧ ಏಕಪಕ್ಷೀಯವಾಗಿ ಪ್ರಕರಣವನ್ನು ಮುಂದುವರೆಸಲಾಗುವುದು ಎಂದು ತಿಳಿಯತಕ್ಕದ್ದು.

ನ್ಯಾಯಾಲಯದ ಆದೇಶದ ಮೇರೆಗೆ,
ಅರ್ಜಿದಾರರ ಪರ ವಕೀಲರು
Sd/- M.R. Harish, B.Com., LL.B. GOC,
Advocate, KAR 586/95
Opp. Maruthi Petrol Bunk, Old B.M. Road, Hunsur-571105.
Mob: 9448086230

FORM NO. 18.
Notice for appearance in Appeals Order 41 Rule 14 CPC, and Rules 1, 2, 4 and 11 of Chapter IV Karnataka High Court Rules
IN THE HIGH COURT OF KARNATAKA AT BENGALURU
Notice to the R-21 to 25, 27, 30 and 33 vide order dated:28.03.2025
R.S.A.NO.2047/2018

Nagendra and Anr., ---Appellants
(By Sri Basavaraj.S.Sappannavar and Ors for Sappannavar and GSK Legal - Advs)
-Vs-
Sri Kullappa @ Kenchappa and Ors., Respondents
(By Sri S.Rupesh Kumar and Anr - Advs for R-3, 5 to 8, 10 to 16, 18, 19, 36)
(By Sri Kumara.K.G - Adv for R-1, 2, 31, 37 to 39)
(By Sri S.Rupesh Kumar - Adv for C/R-5, 7, 18, 19)
(By Sri H.V.Chandrashekar - Adv for C/R-26)

TO: RESPONDENTS
R-21. SRI G NAGARAJ S/O LATE GUNDAPPA, AGED ABOUT 53 YEARS, DOOR NO.1109/A, 1ST STAGE, 6TH MAIN, VIVEKANANDANAGAR, SRIRAMPURA EXTENSION, MYSURU 577801 **R-22. SMT CHENNAMMA** W/O HR RANGASWAMY, AGED ABOUT 54 YEARS, DOOR NO.4494, 7TH CROSS, N.R.MOHALLA, MYSURU 577801 **R-23. SRI BHARATH KUMAR** S/O LATE SRINIVASAN AGED ABOUT 54 YEARS, NO.67/4, NEW SAYAJI RAO ROAD, MYSURU 577801 **R-24. SRI TA MADHUSUDHAN** S/O AHOBALARAV, AGED ABOUT 55 YEARS, DOOR NO. 10/6, K.V.T. STREET, KOLLEGALA TOWN 586402. **R-25. SRI B M KRISHNA** S/O LATE MUNIAPPA, AGED ABOUT 41 YEARS, DOOR NO.31, 8TH STAGE, SATHYA MARGA, SIDDARTHA NAGAR, MYSURU 577801. **R-27. SRI C GIRI NAIDU** S/O G SUBRAMANYA NAIDU, AGED ABOUT 55 YEARS, DOOR NO.300/1, 7TH MAIN, 3RD CROSS, ANANDA MARGA, SIDDARTHA NAGAR, MYSURU 577808. **R-30.SRI KHAFER AHMED KHAN** S/O MUSI SULTHAR KHAN, AGED ABOUT 51 YEARS, #571, 2ND CROSS, GANGAMMA GUDI, DEVARAJA MOHALLA, MYSURU 577808. **R-33.SMT S SHEELAVATHI** W/O S G PRAKASH, AGED ABOUT 51 YEARS, #15, BESTHARA STREET, SRIRANGAPATTANA TOWN 577908

Appeal from the Judgment and Decree dated 21.07.2018 passed in R.A.No.229/2015 on the file of the III Additional District Judge, Mysuru,

Notice is hereby given to you to appear in this court either in person or through Counsel duly instructed or through some one authorised by law, to act for you in the above appeal on 03.06.2025 at 10.30 am in case you intend to contest the appeal. If you fail to appear, the same will be dealt with, heard and decided in your absence.

Issued under my hand and the seal of this court, this the 28th Day of March 2025.

By Order of the Court,
Assistant Registrar

ಕರ್ನಾಟಕ ಸರ್ಕಾರ
ಸಾರ್ವಜನಿಕ ಆಸ್ಪತ್ರೆ
ಆಡಳಿತ ವೈದ್ಯಾಧಿಕಾರಿಗಳ ಕಾರ್ಯಾಲಯ, ನಂಜನಗೂಡು
ದೂರವಾಣಿ:08221–295156, ಇ–ಮೇಲ್:**ghngud@gmail.com**
ಸಂಖ್ಯೆ:GH/AB-ARK/NHM/ಇ–ಟೆಂಡರ್/ಔಷಧರಾ/ವಸ್ತುಗಳು/01/2025-26
ದಿನಾಂಕ:05.04.2025

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಸಾರ್ವಜನಿಕ ಆಸ್ಪತ್ರೆ ನಂಜನಗೂಡು, ಮೈಸೂರು ಜಿಲ್ಲೆ ಇಲ್ಲಿಗೆ ಬೇಕಾಗಿರುವ ಔಷಧ/ಚುಚ್ಚು ಮದ್ದುಗಳು ರಾಸಾಯನಿಕ/ವಸ್ತುಗಳು ಸರಬರಾಜು ಮಾಡಲು ಅರ್ಹ' ಸಂಸ್ಥೆಗಳಿಂದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ನಮೂನೆಗಳಿಗಾಗಿ ಇ.ಎಂ.ಡಿ ಹಾಗೂ ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್ **https://kppp.karnataka.gov.in** ನಲ್ಲಿ ನೋಡಬಹುದಾಗಿದೆ.

ಅಂದಾಜು ಟೆಂಡರ್ **ಮೊತ್ತ–15** ಲಕ್ಷ ಇ.ಎಂ.ಡಿ ಮೊತ್ತ – **ರೂ.37500/–** 1) ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ **ದಿನಾಂಕ : 05.04.2025** ರಿಂದ 2) ಟೆಂಡರ್ ಅರ್ಜಿ ಸಲ್ಲಿಸಲು ಅಂತಿಮ **ದಿನಾಂಕ : 19.04.2025** ಸಂಜೆ 4.00 ಘಂಟೆಯವರೆಗೆ 3) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ : 21.04.2025** ಬೆಳಗ್ಗೆ **10.30** ನಂತರ 4) ಆರ್ಥಿಕ ಬಿಡ್‌ತೆರೆಯುವ ದಿನಾಂಕ ಮತ್ತು ಸಮಯ: **24.04.2025** ಬೆಳಗ್ಗೆ **11.00** ನಂತರ 5) ಮಾದರಿ ಸಲ್ಲಿಸಿ ಪ್ರಮಾಣ ಪತ್ರ ಪಡೆಯಲು ಕೊನೆಯ **ದಿನಾಂಕ:17.04.2025** ರಂದು ಸಂಜೆ 4.00ರ ವರೆಗೆ 6) ಟಂಡರ್ ತೆರೆಯುವ ಸ್ಥಳ: ಸಾರ್ವಜನಿಕ ಆಸ್ಪತ್ರೆ ನಂಜನಗೂಡು, 7) ಇ–ಮೇಲ್: ವಿಳಾಸ: **ghngud@gmail.com**

ಸಹಿ/–ಆಡಳಿತ ವೈದ್ಯಾಧಿಕಾರಿಗಳು, ಸಾರ್ವಜನಿಕ ಆಸತ್ರೆ ನಂಜನಗೂಡು.

DIPR-DD-MYS/051/KSMCA-052/2025-26